ವಿಶ್ವವಾಣಿ
ವಿಶ್ವಾಸವೇ ವಿಶ್ವ

# ಭೂತಾನ್‌ನಲ್ಲಿ ವಿಶ್ವವಾಣಿ ಕನ್ನಡ ಡಿಂಡಿಮ

ವಿಶ್ವವಾಣಿ ಗ್ಲೋಬಲ್ ಫೋರಂ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕರುನಾಡಿನ 13 ಸಾಧಕರಿಗೆ ಭೂತಾನ್‌ನ ಥಿಂಪುವಿನಲ್ಲಿ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಭೂತಾನ್ ಆರೋಗ್ಯ ಸಚಿವ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್, ಹಿರಿಯ ನಟಿ, ಮಾಜಿ ಸಚಿವೆ ಡಾ.ಜಯಮಾಲಾ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ವಿಶ್ವವಾಣಿ ಪ್ರಕಾಶನದ ಎಂ.ಡಿ ಸುಷ್ಮಾ ಭಟ್ ಸೇರಿದಂತೆ ಹಲವು ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಸೊಂಪಾದ ಪುಟಗಳು

ಇದು ಡಿಕೆಶಿ ಕ್ಯಾಂಪಿನ ಲೇಟೆಸ್ಟು ಚಿಂತೆ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಬಿದಿರಿನಂತೆ ಬೆಳೆದ ಭವ್ಯ ಭಾರತ...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

### ದಾರಿದೀಪೋಕ್ತಿ

ಏನಾದರೂ ಆರಂಭಿಸಲು ಸೂಕ್ತ ನಿರ್ಧಾರ ನಮಗೆ ಸಹಾಯ ಮಾಡುತ್ತದೆ. ಅದನ್ನು ಪೂರ್ಣಗೊಳಿಸಲು ಕಠಿಣ ಪರಿಶ್ರಮ ಮತ್ತು ಶಿಸ್ತು ನೆರವಾಗುತ್ತದೆ. ಯಶಸ್ಸನ್ನು ಸಾಧಿಸಲು ನಿರಂತರ ಆಸಕ್ತಿಯ ಬೆಂಬಲ ಬೇಕಾಗುತ್ತದೆ.

### ವಕ್ರತುಂಡೋಕ್ತಿ

ಹಾರುವ ತಟ್ಟೆಗೂ, ಜಗಳವಾಡದ ಪತ್ನಿಗೂ ವ್ಯತ್ಯಾಸ ಅಂದ್ರೆ ಹಾರುವ ತಟ್ಟೆಯನ್ನು ನೋಡಿದವರಿದ್ದಾರೆ.

## ಕುಡಿಯುವ ನೀರಿಗೆ ವಿಷ: ಸಿಎಂ ಆಕ್ರೋಶ

**ಬೆಂಗಳೂರು:** ಮುಸ್ಲಿಮ್ ಶಿಕ್ಷಕನನ್ನು ಎತ್ತಂಗಡಿ ಮಾಡುವ ಉದ್ದೇಶದಿಂದ ಶಾಲಾ ಮಕ್ಕಳ ಕುಡಿಯುವ ನೀರಿಗೆ ಕೀಟನಾಶಕ ಹಾಕಿದ್ದ ಪ್ರಕರಣ ಖಂಡಿಸಿ ಸಿಎಂ ಸಿದ್ದರಾಮಯ್ಯ ಆಕ್ರೋಶ ಹೊರಹಾಕಿದ್ದು, ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ದ್ವೇಷ ಬಿತ್ತಿ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಬಿಜೆಪಿ ನಾಯಕರು ಒಮ್ಮೆ ತಮ್ಮ ಆತ್ಮವಿಮರ್ಶೆ ಮಾಡಿಕೊಳ್ಳಲಿ ಎಂದು ಕುಟುಕಿದ್ದಾರೆ.

## ಗೆಲುವಿನತ್ತ ಇಂಗ್ಲೆಂಡ್

**ಲಂಡನ್:** ಭಾರತ-ಇಂಗ್ಲೆಂಡ್ ನಡುವಿನ 5ನೇ ಮತ್ತು ಅಂತಿಮ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಗೆಲುವಿಗೆ 35 ರನ್ ಅಗತ್ಯವಿದ್ದು, ಆತಿಥೇಯ ರಾಷ್ಟ್ರ ಆ್ಯಂಡರ್‌ಸನ್-ತೆಂಡೂಲ್ಕರ್ ಟ್ರೋಫಿ ಗೆಲ್ಲುವುದು ಬಹುತೇಕ ಖಚಿತವಾಗಿದೆ. ಜೋ ರೂಟ್ (105) ಮತ್ತು ಹ್ಯಾರಿ ಬ್ರೂಕ್ (111) ಇಬ್ಬರೂ ಆಕರ್ಷಕ ಶತಕಗಳನ್ನು ಗಳಿಸುವ ಮೂಲಕ, ಭಾರತದ ಗೆಲುವಿನ ಕನಸಿಗೆ ಅಡ್ಡಿಯಾಗಿದ್ದಾರೆ.

## ಖಾದಿ ಬಿಟ್ಟು ಕೈದಿ ಸಮವಸ್ತ್ರ ತೊಟ್ಟ ಮಾಜಿ ಸಂಸದ, ಸಿಟ್‌ಗೆ ಸಿಎಂ ಪದಕ

# ಪ್ರಜ್ವಲ್ ಕೈದಿ ನಂ.15528

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಇದೀಗ ಅಧಿಕೃತವಾಗಿ ಸಜಾಬಂಧಿ ಖೈದಿಯಾಗಿದ್ದಾರೆ. ಜೈಲು ಅಧಿಕಾರಿಗಳು ಪ್ರಜ್ವಲ್‌ಗೆ ಖೈದಿ ಸಂಖ್ಯೆ 15528 ಅನ್ನು ನಿಗದಿ ಮಾಡಿದ್ದಾರೆ. ಇದರೊಂದಿಗೆ ಮಾಜಿ ಸಂಸದ ಜೈಲಿನ ಬದುಕಿಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿದೆ.

ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಆಗಸ್ಟ್ 2ರಿಂದ ಪ್ರಜ್ವಲ್ ರೇವಣ್ಣ ಪರಪ್ಪನ ಅಗ್ರಹಾರ ಜೈಲಿನ ಸಜಾಬಂಧಿ ಕೈದಿಗಳ ನಿಯಮಾವಳಿಗೆ ಒಳಪಟ್ಟಿದ್ದಾರೆ. ಕೈದಿಗಳ ನಿಯಮಾನುಸಾರ ಅವರು ಈಗಿನಿಂದಲೇ ಬಿಳಿ ಸಮವಸ್ತ್ರ ಧರಿಸಬೇಕಾಗುತ್ತದೆ. ಜೈಲು ಸಿಬ್ಬಂದಿ ಅವರಿಗೆ ಬಿಳಿ ಬಣ್ಣದ ದೈನಂದಿನ ವಸ್ತ್ರಗಳನ್ನು ವಿತರಿಸಿದ್ದಾರೆ.

ಇಷ್ಟು ದಿನ ವಿಚಾರಣಾಧೀನ ಬಂಧಿಯಾಗಿ ಜೈಲಿನಲ್ಲಿದ್ದ ಪ್ರಜ್ವಲ್, ಶನಿವಾರದಿಂದ ಅಪರಾಧಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸೆರೆವಾಸ ಅನುಭವಿಸಬೇಕಾಗಿದೆ. ಸಜಾಬಂಧಿ ಕೈದಿಯಾಗಿ ಬದಲಾದ ಪ್ರಜ್ವಲ್, ನ್ಯಾಯಾಲಯ ನೀಡಿದ ತೀರ್ಪಿನಿಂದ ಆಘಾತಗೊಂಡಿದ್ದಾರೆ. ಜೀವಾವಧಿ ಶಿಕ್ಷೆ ನಿರೀಕ್ಷೆ ಇಲ್ಲದ, ತಮ್ಮ ಕುಟುಂಬ ಹಾಗೂ ರಾಜಕೀಯ ಹಿನ್ನೆಲೆಯಿಂದ ಕಡಿಮೆ ಶಿಕ್ಷೆ ಭಾವಿಸಿದ್ದ ಪ್ರಜ್ವಲ್ ನ್ಯಾಯಾಧೀಶರು ನೀಡಿದ ತೀರ್ಪಿನಿಂದ ಕಂಗೆಟ್ಟಿದ್ದಾರೆ. → 4

**ಪ್ರಜ್ವಲ್‌ಗೆ ಶಿಕ್ಷೆ ಘೋಷಣೆಯ ಬೆನ್ನಲ್ಲೇ ಮೇಲ್ಮನವಿ ಸಲ್ಲಿಸಲು ಸಿದ್ಧತೆ**

### ತನಿಖಾ ತಂಡಕ್ಕೆ ಶಹಬ್ಬಾಸ್

ತೀರ್ಪಿನ ಸಂಪೂರ್ಣ ಶ್ರೇಯಸ್ಸು ವಿಶೇಷ ತನಿಖಾ ತಂಡಕ್ಕೆ ಸಲ್ಲಬೇಕು. ತನಿಖಾ ತಂಡಕ್ಕೆ ಮುಖ್ಯಮಂತ್ರಿ ಪದಕ ನೀಡಿ ಗೌರವಿಸಲಾಗುವುದು. ಅಷ್ಟೇ ಅಲ್ಲದೆ, ರಾಷ್ಟ್ರಪತಿ ಪದಕಕ್ಕೂ ಶಿಫಾರಸು ಮಾಡಲಾಗುವುದು ಎಂದು ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದ್ದಾರೆ.

## ಮೈಸೂರಿಗೆ ಇಂದು ಗಜಪಡೆ



**ಮೈಸೂರು:** 2025ರ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು ಆಗಸ್ಟ್ 4ರ ಸೋಮವಾರ ಅಭಿಮನ್ಯು ನೇತೃತ್ವದ ಆನೆಗಳ ತಂಡ ಮೈಸೂರಿಗೆ ಆಗಮಿಸಲಿವೆ. 9 ಆನೆಗಳ ಮೊದಲ ತಂಡ ಹುಣಸೂರು ತಾಲೂಕಿನ ವೀರನಹೊಸಹಳ್ಳಿಯಿಂದ ಮೈಸೂರಿನತ್ತ ಪಯಣ ಬೆಳೆಸಲಿವೆ. ಮೊದಲ ತಂಡದ ಆನೆಗಳೊಂದಿಗೆ ಮೈಸೂರಿಗೆ ಆಗಮಿಸುವ ಗಜಪಡೆ ಹಾಗೂ ಅವುಗಳ ಪಾಲಕರ ವಾಸ್ತವ್ಯಕ್ಕಾಗಿ ಅರಮನೆ ಅಂಗಳದಲ್ಲಿ ಸಿದ್ಧತೆ ಸಾಗಿದ್ದು, 40ಕ್ಕೂ ಹೆಚ್ಚು ಶೆಡ್‌ಗಳನ್ನು ನಿರ್ಮಾಣ ಮಾಡಲಾ ಗಿದೆ. ಮೊದಲ ತಂಡದಲ್ಲಿ 9 ಹಾಗೂ 2ನೇ ತಂಡದಲ್ಲಿ 5 ಸೇರಿದಂತೆ ಒಟ್ಟು 14 ಆನೆಗಳು ಈ ಬಾರಿಯ ದಸರಾ ಮಹೋತ್ಸವದಲ್ಲಿ ಭಾಗಿಯಾಗಲಿವೆ.

## ರಾಷ್ಟ್ರಪತಿ ಭೇಟಿ ಮಾಡಿದ ಮೋದಿ

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಭವನದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸಿರುವ ಬಗ್ಗೆ ಮತ್ತು ಭಾರತದ ಪ್ರತಿಕ್ರಮಗಳ ಬಗ್ಗೆ, ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವಿಷಯದಲ್ಲಿ ಮೋದಿ ರಾಷ್ಟ್ರಪತಿ ಅವರಿಗೆ ಮಾಹಿತಿ ನೀಡಿದ್ದಾರೆಂದು ಹೇಳಲಾಗಿದೆ.

## ಮತ್ತೆ ಮೂವರು ಉಗ್ರರ ಬೇಟೆ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಅಖಲ್ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ನಡೆಸಿದ ಆಪರೇಷನ್ ಅಖಲ್ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಭಾನುವಾರ ಇನ್ನೂ ಮೂವರು ಭಯೋತ್ಪಾದಕರನ್ನು ಹೊಡೆದುರುಳಿಸಲಾಗಿದೆ. ಒಬ್ಬ ಯೋಧ ಗಾಯಗೊಂಡಿದ್ದಾರೆ. ಶನಿವಾರ ಮೂವರು ಉಗ್ರರನ್ನು ಹೊಡೆದುರುಳಿಸಲಾಗಿತ್ತು, ಇದುವರೆಗೂ ಒಟ್ಟು ಆರು ಉಗ್ರರನ್ನು ಹತ್ಯೆ ಮಾಡಲಾಗಿದೆ.

ರಾಜ್ಯದಲ್ಲಿ ಉಗ್ರರನ್ನು ಸದೆಬಡಿಯುವ ನಿಟ್ಟಿನಲ್ಲಿ ಸರಣಿ ಕಾರ್ಯಾಚರಣೆ ಆರಂಭಿಸಲಾಗಿದ್ದು, 'ಆಪರೇಷನ್ ಮಹಾದೇವ್' ಮತ್ತು 'ಆಪರೇಷನ್ ಶಿವಶಕ್ತಿ' ಬಳಿಕ ನಡೆದ ಈ ಕಾರ್ಯಾಚರಣೆಯಲ್ಲಿ ಅಖಾಲ್ ಕಾಡಿನಲ್ಲಿ ಅವಿತು ಕುಳಿತು ದಾಳಿಗೆ ಸಂಚು ಹೂಡಿದ್ದ ದಿ ರೆಸಿಸ್ಟೆನ್ಸ್ ಫ್ರಂಟ್ ಸಂಘಟನೆಗೆ ಸೇರಿದ್ದ ಆರು ಉಗ್ರರನ್ನು ಮಟ್ಟ ಹಾಕಲಾಗಿದೆ.

## ಮೆಟ್ರೋ ಹಳದಿ ಮಾರ್ಗ ಕೊನೆಗೂ ಉದ್ಘಾಟನೆಗೆ ಸಿದ್ಧ

# 10ಕ್ಕೆ ಬೆಂಗಳೂರಿಗೆ ಮೋದಿ

**ಬೆಂಗಳೂರು:** ರಾಜಧಾನಿ ಬೆಂಗಳೂರಿನ ಮಹತ್ವಾಕಾಂಕ್ಷೆ ಮೆಟ್ರೋ ಮಾರ್ಗವಾಗಿರುವ ಹಳದಿ ಮಾರ್ಗದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಆ.10ಕ್ಕೆ ಬರುವುದು ಬಹುತೇಕ ಖಚಿತವಾ ಗಿದೆ. ಆದರೆ ಉದ್ಘಾಟನಾ ಕಾರ್ಯಕ್ರಮದ ಸ್ಥಳ ಹಾಗೂ ಸಮಯ ನಿಗದಿ ಇನ್ನಷ್ಟೇ ಆಗಬೇಕಿದೆ. ಹಳದಿ ಮಾರ್ಗದ ಉದ್ಘಾಟನೆ ಹಾಗೂ ಮೆಟ್ರೋ ಮೂರನೇ ಹಂತದ ಶಂಕು ಸ್ಥಾಪನೆಗೆ ಪ್ರಧಾನಿ ಮೋದಿ ಅವರು ಆಗಮಿಸುವುದನ್ನು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಹಾಗೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಖಚಿತಪಡಿಸಿದ್ದಾರೆ. → 4

### 5,057 ಕೋಟಿ ರು.ವೆಚ್ಚ

ಆರ್‌ವಿರಸ್ತೆಯಿಂದ ಬೊಮ್ಮಸಂದ್ರವರೆಗಿನ ಮೆಟ್ರೋ ಹಳದಿ ಮಾರ್ಗವನ್ನು 5,056.99 ಕೋಟಿ ರು ವೆಚ್ಚದಲ್ಲಿ ನಿರ್ಮಿಸಲಾಗಿದೆ.



ಹಳದಿ ಮಾರ್ಗದ ಸುರಕ್ಷತಾ ತಪಾಸಣೆ ಯಶಸ್ವಿಯಾಗಿದ್ದು, ಆ.10ರಂದು ಪ್ರಧಾನಿ ಮೋದಿಯವರು ಉದ್ಘಾಟಿಸಲಿದ್ದಾರೆ. ಇದು ಬೆಂಗಳೂರು ದಕ್ಷಿಣ ಭಾಗಕ್ಕೆ ಒಂದು ಮಹತ್ವದ ಕ್ಷಣವಾಗಲಿದೆ. ಈ ಮಾರ್ಗ ಸುಮಾರು ಎಂಟು ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗಲಿದ್ದು, ಸಿಲ್ಕ್ ಬೋರ್ಡ್ ಟ್ರಾಫಿಕ್ ಜಾಮ್ ಸಮಸ್ಯೆಗೆ ಪರಿಹಾರ ಸಿಗಲಿದೆ. ಮೆಟ್ರೋ ಹಳದಿ ಮಾರ್ಗ ಉದ್ಘಾಟನೆ ಜತೆಗೆ ಮೆಟ್ರೋ 3ನೇ ಹಂತದ ಯೋಜನೆಗೂ ಪ್ರಧಾನಿ ಮೋದಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

**-ತೇಜಸ್ವಿ ಸೂರ್ಯ,** ಸಂಸದರು

### ಡಿಜಿ-ಐಜಿ ನೇರ ನಿಗಾದಲ್ಲಿ 388 ಸಿಬ್ಬಂದಿಗಳ ವಿಶೇಷ ಪಡೆ ಕಾರ್ಯಾಚರಣೆ

# ಡ್ರಗ್ಸ್ ದಂಧೆ ತಡೆಗೆ ಪ್ರತ್ಯೇಕ ಕಾರ್ಯಪಡೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಹಾವಳಿ ತಡೆಗೆ ಪ್ರತ್ಯೇಕ ಕಾರ್ಯಪಡೆ ರಚಿಸಿ ಸರಕಾರ ಅಧಿಕೃತ ಆದೇಶ ಹೊರಡಿಸಿದೆ. ಈ ಮೂಲಕ ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣಕ್ಕೆ ಮಹತ್ವದ ಕ್ರಮವನ್ನು ಕೈಗೊಂಡಿದೆ.

ಮೈಸೂರಿನಲ್ಲಿ ಮಾದಕ ವಸ್ತುಗಳ ಉತ್ಪಾದನೆಯ ಬೃಹತ್ ಘಟಕ ಪತ್ತೆಯಾದ ಬಳಿಕ ಮಾದಕ ದ್ರವ್ಯ ನಿಯಂತ್ರಣಕ್ಕೆ ತುರ್ತು ಕ್ರಮದ ಅಗತ್ಯ ಮನಗಂಡ ಸರಕಾರ, ಇದಕ್ಕಾಗಿ ಡಿಜಿ, ಐಜಿಪಿ ಅವರ ನೇರ ಉಸ್ತುವಾರಿಯಲ್ಲಿ ವಿಶೇಷ ಪಡೆ ರಚಿಸಲು ಮುಂದಾಗಿದೆ. ಈ ಕಾರ್ಯಪಡೆ ಸೈಬರ್ ಕಮಾಂಡ್ ಡಿಜಿ ಅವರ ಮೇಲುಸ್ತುವಾರಿ ಹೊಂದಿದೆ.

ಕಾರ್ಯಪಡೆಗೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ, ಸಹಾಯಕ ಪೊಲೀಸ್ ಆಯುಕ್ತರ ತಲಾ 2 ಹುದ್ದೆ, ಸಹಾಯಕ ಆಡಳಿತಾಧಿಕಾರಿ, ಶಾಖಾಧೀಕ್ಷಕ, ಕಿರಿಯ ಸಹಾಯಕ, ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರ ಮತ್ತು ದಲಾಯತ್ ಸೇರಿ 10 ಹೊಸ ಹುದ್ದೆ ಸೃಷ್ಟಿಸಲು ಸೂಚಿಸಲಾಗಿದೆ. ಉಳಿದಂತೆ ನಕ್ಸಲ್ ನಿಗ್ರಹ ಕಾರ್ಯಪಡೆಯಿಂದ ಇಬ್ಬರು ಪೊಲೀಸ್ ಇನ್‌ಸ್ಪೆಕ್ಟರ್ (ಸಿವಿಲ್) ನಾಲ್ವರು ಎಸ್‌ಐ (ಸಿವಿಲ್), 20 ಮುಖ್ಯ ಪೇದೆ ಹಾಗೂ 30 ಪೇದೆ ಹುದ್ದೆಗಳನ್ನು ಈ ಕಾರ್ಯಪಡೆಗೆ ವರ್ಗಾಯಿಸಲು ಸರಕಾರ ಆದೇಶಿಸಿದೆ. → 4

ರಾಜ್ಯದಲ್ಲಿ ಡ್ರಗ್ಸ್ ಚಟುವಟಿಕೆಯನ್ನು ಸಂಪೂರ್ಣವಾಗಿ ಮಟ್ಟ ಹಾಕಲು ಸಮರ ಸಾರಿದ್ದೇವೆ. ಈ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯ ಪಡೆಯನ್ನು ರಚನೆ ಮಾಡಲಾಗಿದೆ. ಇದಕ್ಕೆ ಅಗತ್ಯವಾದ ಅಧಿಕಾರಿಗಳನ್ನು ನೇಮಕ ಮಾಡಿ, ಜವಾಬ್ದಾರಿಯನ್ನು ಹಂಚಿಕೆ ಮಾಡಿದ್ದೇವೆ.

**-ಡಾ. ಜಿ.ಪರಮೇಶ್ವರ,** ಗೃಹ ಸಚಿವ

## 10ನೇ ಗ್ಲೋಬಲ್ ಅಚೀವರ್ಸ್ ಕಾರ್ಯಕ್ರಮ | 13 ಮಂದಿ ಕನ್ನಡ ನಾಡಿನ ಸಾಧಕರಿಗೆ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ

# ಭೂತಾನ್‌ನಲ್ಲಿ ಕನ್ನಡ ಭಾವ ಲಹರಿ ಉಕ್ಕಿಸಿದ ವಿಶ್ವವಾಣಿ

ವಿಶ್ವವಾಣಿ ಗ್ಲೋಬಲ್ ಫೋರಂ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕರುನಾಡಿನ 13 ಸಾಧಕರಿಗೆ ಭೂತಾನ್‌ನ ಥಿಂಪುವಿನಲ್ಲಿ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

**ಪ್ರತ್ಯಕ್ಷ ವರದಿ : ರಾಜು ಅಡಕಳ್ಳಿ**

ಬೆಂಗಳೂರಿನಿಂದ ಹೊರಟ ವಿಮಾನ ಈಶಾನ್ಯ ರಾಜ್ಯಗಳ ಗಿರಿಕಂದರಗಳನ್ನು ದಾಟಿ ಭೂತಾನ್ ಎಂಬ ಗಿರಿ ಶಿಖರಗಳ ನಾಡಿನ ಪಾರೋ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಈ ದೇಶ ಭಾರತದ ಒಂದು ರಾಜ್ಯವಾಗಿರಬಾರದಿತ್ತೇ ಎಂಬ ಭಾವನೆ ಮೂಡುವುದು ಸಹಜ.

ಕೈಗೆಟಕುವ ಮೋಡಗಳ ಮಾಲೆ. ಎಲ್ಲಿ ನೋಡಿದರೆ ಹಸಿರು ಗಿರಿಗಳ ಸಾಲು. ಮನಕ್ಕೆ ತಂಗಾಳಿ, ಕಣ್ಣಿಗೆ ಕಂಪು ಸೂಸುವ ನಿಸರ್ಗ ರಮಣೀಯ ನೋಟ. ಹೃನ್ಮನ ಸೆಳೆಯುವ ಸೇಬು ತೋಟಗಳು, ಎಲ್ಲೆಲ್ಲಿಯೂ ನದಿ ಜಲಧಾರೆಗಳು, ಜಲಪಾತಗಳು, ಸುರಕ್ಷತೆಯ ಬಗ್ಗೆ ಕಿಂಚಿತ್ತೂ ಕಳವಳವಿಲ್ಲದ ಅಪರೂಪದ ದೇಶ ಭೂತಾನ್. ಇಂತಹ ಅಪರೂಪದ ದೇಶದಲ್ಲಿ ಅಷ್ಟೇ ಅನನ್ಯವಾಗಿ ನಡೆದಿದ್ದು ವಿಶ್ವವಾಣಿಯ 10ನೆಯ ಗ್ಲೋಬಲ್ ಅಚೀವರ್ಸ್ ಸಮ್ಮೇಳನ.

ವಿಶ್ವವಾಣಿಯ ಗ್ಲೋಬಲ್ ಫೋರಂ ಮತ್ತು ಪರ್ವಗ್ರೂಪ್ ಸಹಯೋಗದಲ್ಲಿ ಭೂತಾನ್ ರಾಜಧಾನಿ ಥಿಂಪುವಿನಲ್ಲಿರುವ ಲೀ ಮೆರಿಡಿಯನ್ ಪಂಚತಾರಾ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದ್ದ ಈ ಸಾಂಸ್ಕೃತಿಕ ಸಮ್ಮಿಲನ ಮತ್ತು ಭಾರತ-ಭೂತಾನ್ ಬಾಂಧವರ ಜಾಗತಿಕ ಸಮ್ಮೇಳನದಲ್ಲಿ ಈ ಬಾರಿ ವಿವಿಧ ರಂಗಗಳಲ್ಲಿ ಅದ್ವಿತೀಯ ಸಾಧನೆ ಮಾಡಿರುವ, ಕನ್ನಡಿಗರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ನೀಡಿ ಸನ್ಮಾನಿಸಿದ್ದು ವಿಶೇಷವಾಗಿತ್ತು.

ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ನಡೆದ ಈ ಸಮಾರಂಭದಲ್ಲಿ ಹಿರಿಯ ನಟಿ ಹಾಗೂ ಮಾಜಿ ಸಚಿವೆ ಜಯಮಾಲಾ ರಾಮಚಂದ್ರ, ಹಾಗೂ ಭೂತಾನ್ ಸರಕಾರದ ಆರೋಗ್ಯ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್ ಅವರು ಈ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಕಾರ್ಯಕ್ರಮವು ಭಾರತ ಮತ್ತು ಭೂತಾನ್ ಉಭಯ ದೇಶಗಳ ರಾಷ್ಟ್ರಗೀತೆ ಹಾಗೂ ಗಣಪತಿ ಸ್ತುತಿಯೊಂದಿಗೆ ಇಳಿ ಸಂಜೆಯ ಹೊತ್ತಿನಲ್ಲಿ ಕಾರ್ಯಕ್ರಮ ಪ್ರಾರಂಭ ಆಯಿತು. ಇಡೀ ಸಭಾಂಗಣ ಭೂತಾನ್‌ನ ಗಣ್ಯರು, ಕೈಗಾರಿಕೋದ್ಯಮಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳಿಂದ ತುಂಬಿ ಹೋಗಿತ್ತು.

ವಿಶ್ವೇಶ್ವರ ಭಟ್ಟರ ನೇತೃತ್ವದಲ್ಲಿ ಒಂದು ದಿನ ಮುಂಚಿತವಾಗಿಯೇ ಬೆಂಗಳೂರಿನಿಂದ ತೆರಳಿದ್ದ ಮತ್ತು ದುಬೈನಿಂದ ಬಂದಿದ್ದ ನಿಯೋಗದ ಸದಸ್ಯರು ಭೂತಾನ್ ಅತಿಥಿಗಳೊಂದಿಗೆ ಸೇರಿ ಪರಸ್ಪರ ಪ್ರೀತಿ ಸೌಹಾರ್ದತೆಯೊಂದಿಗೆ ಸೇರಿದ್ದು ಮದುವೆ ಮನೆಯ ಸಂಭ್ರಮದಂತೆ ಕಂಗೊಳಿಸಿತು. ಇದಕ್ಕೆ ಮೆರಗು ಕೊಡುವಂತೆ ಭೂತಾನ್‌ನ ಪ್ರಸಿದ್ಧ ಕಲಾವಿದರ ನೃತ್ಯ ಪ್ರದರ್ಶನವೂ ಎಲ್ಲರ ಮೆಚ್ಚುಗೆ ಗಳಿಸಿತು. ಭೂತಾನ್‌ನ ಈ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುವಾಗ ನಮ್ಮಲ್ಲಿ ಯಕ್ಷಗಾನ, ಸುಗ್ಗಿಕುಣಿತ, ಜಾನಪದ ಸೊಗಡುಗಳು ಮತ್ತೊಮ್ಮೆ ನೆನಪಿಗೆ ಬರುವಂತಾದವು. ಈ ಅಂತಾರಾಷ್ಟ್ರೀಯ ಸಮ್ಮೇಳನದ ಅಂಗವಾಗಿ ವಿಶ್ವವಾಣಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಭೂತಾನ್‌ನ ಅನೇಕ ಗಣ್ಯಮಾನ್ಯರು ಪಾಲ್ಗೊಂಡು ಭಾರತದಿಂದ ಬಂದ ನಿಯೋಗದ ಸದಸ್ಯರ ಭೂತಾನ್ ಪ್ರವಾಸಕ್ಕೆ ಶುಭಕೋರಿದರು.

ಭೂತಾನ್ ಆರೋಗ್ಯ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್ ಅವರನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸುಷ್ಮಾ ಭಟ್, ನಟಿ ಜಯಮಾಲಾ ಸತ್ಕರಿಸಿದರು.

ನಿಯೋಗದಲ್ಲಿ ವಿಶ್ವೇಶ್ವರ ಭಟ್ ಅವರ ಧರ್ಮಪತ್ನಿ, ವಿಶ್ವವಾಣಿ ಪುಸ್ತಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕರಾದ ಸುಷ್ಮಾ ಭಟ್, ಯಲ್ಲಾಪುರದ ಮಹಿಳಾ ಉದ್ಯಮಿ ಆರ್ಯಾ ಶಾನಭಾಗ, ಕೊಡಗಿನ ಲೇಖಕಿ ಫ್ಯಾನ್ಸಿ ಮುತ್ತಣ್ಣ, ಗೋಕರ್ಣದ ಗೋದಾವರಿ ಹೋಟೆಲ್ ಮಾಲೀಕರು, ಉದ್ಯಮಿಗಳಾಗಿರುವ ರಾಘವೇಂದ್ರ ನಾಯಕ್, ಪ್ರಸಿದ್ಧ ಸಿನಿಮಾಟೋಗ್ರಾಫರ್ ಎಚ್.ಎಂ. ರಾಮಚಂದ್ರ, ವಿಶ್ವವಾಣಿಯ ಸಿಇಒ ಚಿದಾನಂದ ಕಡಲಾಸ್ಕರ, ಪತ್ರಕರ್ತ ರಾಜು ಅಡಕಳ್ಳಿ, ಕಾಂಗ್ರೆಸ್ ಮುಖಂಡ ವೆಂಕಟೇಶ್ ಹೆಗಡೆ ಹೊಸಬಾಳೆ, ಡಿಯಾಗೋ ಫೈನಾನ್ಸ್ ಸಂಸ್ಥೆಯ ಅಕ್ಷಿತಾ ಕಟೂರಿ, ಕಾಫಿ ಉದ್ಯಮಿ ಪ್ರವೀಣ್ ಕುಮಾರ್ ಶೆಟ್ಟಿ, ಉದ್ಯಮಿ ಸಿದ್ದೇಶ್ ಹಾರನಹಳ್ಳಿ, ಉತ್ತರ ಕರ್ನಾಟಕದ ಎಕ್ಸಲೆಂಟ್ ಶಿಕ್ಷಣ ಸಂಸ್ಥೆಗಳ ನಿರ್ದೇಶಕ ಭುವನ್ ಕೌಲಗಿ ಉಪಸ್ಥಿತರಿದ್ದರು. ಉದ್ಯಮಿ ಕಿರಣ್ ಕುಮಾರ್ ಅವರು ಕಾರ್ಯಕ್ರಮ ನಿರ್ವಹಿಸಿ, ವಿಶ್ವವಾಣಿ ಗ್ಲೋಬಲ್ ಫೋರಂ ಚಟುವಟಿಕೆಗಳನ್ನು ವಿವರಿಸಿದರು. ವಿಶ್ವವಾಣಿ ಬಳಗದ ನಾಗಾರ್ಜುನ ವಂದಿಸಿದರು. ಫನ್ ಸ್ಟೇ ಸಂಸ್ಥೆಯ ನಿತಿನ್ ಅಗರ್ವಾಲ್ ವಿಶ್ವವಾಣಿ ನಿಯೋಗದ ಭೂತಾನ್ ಪ್ರವಾಸ ವ್ಯವಸ್ಥೆಯ ಜವಾಬ್ದಾರಿಯನ್ನು ನಿರ್ವಹಿಸಿದರು.

ವಿಶ್ವವಾಣಿ ನಿಯೋಗದೊಂದಿಗೆ ಭೂತಾನ್ ಸಚಿವ.

ಪ್ರಶಸ್ತಿ ಪುರಸ್ಕೃತರ ಪರವಾಗಿ ಮಾತನಾಡಿದ ಪತ್ರಕರ್ತೆ ಭಾವನ ಬೆಳೆಗೆರೆ ಮತ್ತು ತುಮಕೂರಿನ ಓಂಕಾರ್ ಅವರು, ವಿಶ್ವವಾಣಿಯ ಗ್ಲೋಬಲ್ ಫೋರಂ ಪ್ರಯತ್ನಗಳನ್ನು ಶ್ಲಾಘಿಸಿದರು. ಸಮಾಜದಲ್ಲಿ ಪ್ರಸಿದ್ಧಿಗಾಗಿ ಹಪಹಪಿಸದೇ ಎಲೆ ಮರೆಯ ಕಾಯಿಗಳಂತೆ, ಹಣ್ಣುಗಳಂತೆ ಇರುವವರನ್ನು ಹುಡುಕಿ ಅವರಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ವಿಶ್ವವಾಣಿಯ ಸಾಧನೆಯನ್ನು ಅವರು ಕೊಂಡಾಡಿದರು. ಲೇಖಕಿ ಫ್ಯಾನ್ಸಿ ಮುತ್ತಣ್ಣ ಅವರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಸಮಾಜಸೇವೆ, ಕೃಷಿ, ಪತ್ರಿಕೋದ್ಯಮ, ವಕೀಲ ವೃತ್ತಿ, ಕೈಗಾರಿಕೋದ್ಯಮ, ರಾಜಕೀಯ, ಅನಿವಾಸಿ ಭಾರತೀಯರ ಸಾಧನೆ, ಹೋಟೆಲ್ ಉದ್ಯಮ ಮುಂತಾದ ವಿವಿಧ ಕ್ಷೇತ್ರಗಳಲ್ಲಿನ ಸಾಧಕರನ್ನು ಗುರುತಿಸಿ ಗ್ಲೋಬಲ್ ಪ್ರಶಸ್ತಿ ನೀಡಿದ್ದು ವಿಶೇಷವಾಗಿತ್ತು.

ಭುವನ್ ಕೌಲಗಿ
ನಿರ್ದೇಶಕರು, ಎಕ್ಸಲೆಂಟ್ ಶಿಕ್ಷಣ ಸಮೂಹ

ವಿಶ್ವವಾಣಿ ನಿಯೋಗದೊಂದಿಗೆ ಭೂತಾನ್ ಗಣ್ಯರು.

## ಭೂತಾನ್ ಅಭಿವೃದ್ಧಿಯಲ್ಲಿ ಭಾರತದ್ದು ದೊಡ್ಡಣ್ಣನ ಪಾತ್ರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಭಾರತ ಮತ್ತು ಭೂತಾನ್ ರಾಷ್ಟ್ರಗಳು ಪರಸ್ಪರ ಸಹೋದರ ರಾಷ್ಟ್ರಗಳಂತಿವೆ. ಭೂತಾನ್‌ನ ಅನೇಕ ಆಪತ್ಕಾಲದಲ್ಲಿ ಭಾರತ ದೊಡ್ಡಣ್ಣನಂತೆ ಉದಾರ ಸಹಾಯ ನೀಡಿದೆ. ಭೂತಾನಿನ ಅಭಿವೃದ್ಧಿ ಚಟುವಟಿಕೆಗಳಿಗೆ ಹಾಗೂ ಮೂಲಭೂತ ಸೌಲಭ್ಯ ನಿರ್ಮಾಣಕ್ಕೆ ಭಾರತದ ಸಹಾಯಹಸ್ತ ಸದಾಯಿದೆ ಎಂದರು. ಭಾರತದ ರೀತಿಯಲ್ಲಿಯೇ ಭೂತಾನ್ ಸಹ ಶಾಂತಿಪ್ರಿಯ ರಾಷ್ಟ್ರ. ಪರಿಸರ ಸಂರಕ್ಷಣೆಯ ದೃಷ್ಟಿಯಲ್ಲಿ, ಶಿಸ್ತು, ಸ್ವಚ್ಛತೆಯ ವಿಚಾರದಲ್ಲಿ ಭೂತಾನ್‌ನಿಂದ ನಾವು ಭಾರತೀಯರು ಕಲಿಯಬೇಕಾಗಿರುವುದು ಬಹಳಷ್ಟಿದೆ. ಭಾರತದ ನೆರೆಯ ರಾಷ್ಟ್ರವಾಗಿ ಇಷ್ಟೆಲ್ಲ ಆಕರ್ಷಣೆಗಳನ್ನು ಹೊಂದಿದ್ದರೂ, ನಮ್ಮಲ್ಲಿಯೇ ಅನೇಕ ಪ್ರವಾಸಿಗರು ಭೂತಾನ್ ದೇಶವನ್ನೇ ನೋಡಿಲ್ಲ. ಹೀಗಾಗಿ ಈ ಬಾರಿ ವಿಶ್ವವಾಣಿಯಿಂದ ಈ ಸಮಾರಂಭಕ್ಕಾಗಿ ಭೂತಾನ್ ಅನ್ನೇ ಆಯ್ಕೆ ಮಾಡಲಾಗಿದೆ. ಕಲೆ, ಸಂಸ್ಕೃತಿ, ವಾಣಿಜ್ಯೋದ್ಯಮಗಳ ಸಂಬಂಧವನ್ನು ಈ ಉಭಯ ದೇಶಗಳ ನಡುವೆ ಮತ್ತಷ್ಟು ಗಟ್ಟಿಗೊಳಿಸಲು ಇಂತಹ ಕಾರ್ಯಕ್ರಮ ಸಹಕಾರಿಯಾದರೆ ಈ ಶ್ರಮ ಸಾರ್ಥಕ ಎಂದು ಅಭಿಪ್ರಾಯಪಟ್ಟರು. ವಿಶ್ವವಾಣಿಯ ಗ್ಲೋಬಲ್ ಫೋರಂ ವತಿಯಿಂದ ಸಂಘಟಿಸಲಾಗುತ್ತಿರುವ ಅಂತಾ ರಾಷ್ಟ್ರೀಯ ಕಾರ್ಯಕ್ರಮಗಳ ಮತ್ತು ವಿದೇಶಿ ಪ್ರವಾಸಗಳಲ್ಲಿ ಭಾಗವಹಿಸುತ್ತಿರುವ ಡಾ. ಜಯಮಾಲಾ ಅವರು ವಿಶ್ವವಾಣಿಯ ಸಾಂಸ್ಕೃತಿಕ ರಾಯಭಾರಿಯಾಗಿರುವುದು ಹೆಮ್ಮೆಯ ವಿಚಾರ. ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದಕ್ಕೆ ವಂದನೆ ಎಂದು ಹೇಳಿದರು.

**ನಮ್ಮಲ್ಲಿ ಹಲವು ರಂಗಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತರಿದ್ದಾರೆ. ಆದರೆ ಅವರಲ್ಲಿ ಎಷ್ಟೋ ಮಂದಿ ಬೆಳಕಿಗೆ ಬರುವುದಿಲ್ಲ. ಇಂತಹ ಸಾಧಕರನ್ನು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಪುರಸ್ಕರಿಸಿ, ಸ್ಫೂರ್ತಿ ತುಂಬುವುದು ವಿಶ್ವವಾಣಿ ಗ್ಲೋಬಲ್ ಫೋರಂನ ಉದ್ದೇಶ. ಭೂತಾನ್‌ನಲ್ಲಿ ಈ ಸಮಾರಂಭ ಸಂಪನ್ನಗೊಳ್ಳುವಲ್ಲಿ ಭೂತಾನ್ ಸರಕಾರ, ಭೂತಾನ್ ವಾಣಿಜ್ಯೋದ್ಯಮಿಗಳು ಸಹಭಾಗಿತ್ವ ನೀಡಿದ ಪರ್ವ ಗ್ರೂಪ್ ಸಂಸ್ಥೆಗಳಿಗೂ ಧನ್ಯವಾದ.**

– **ವಿಶ್ವೇಶ್ವರ ಭಟ್**, ಪ್ರಧಾನ ಸಂಪಾದಕ, ವಿಶ್ವವಾಣಿ

ಸಭಾಂಗಣಕ್ಕೆ ಆಗಮಿಸಿದ ಗಣ್ಯರು

ಭೂತಾನ್ ರಾಜಧಾನಿ ಥಿಂಪುವಿನಲ್ಲಿ ನಡೆದ ಗೋಬಲ್ ಅಚೀವರ್ಸ್ ಕಾರ್ಯಕ್ರಮವನ್ನು ಭೂತಾನ್ ಸರಕಾರದ ಆರೋಗ್ಯ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಹಿರಿಯ ನಟಿ ಜಯಮಾಲಾ ಉದ್ಘಾಟಿಸಿದರು.

## ಭಾರತದ ಬಗ್ಗೆ ಪ್ರೀತಿ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭೂತಾನ್ ಸರಕಾರದ ಆರೋಗ್ಯ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್ ಮಾತನಾಡಿ, ಭಾರತದ ಬಗ್ಗೆ ಭೂತಾನ್ ಪ್ರಜೆಗಳಿಗೆ ವಿಶೇಷ ಪ್ರೀತಿಯಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಭೂತಾನ್ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ ಎಂದರು. ಒಂದು ಪತ್ರಿಕಾ ಸಂಸ್ಥೆಯೊಂದು ಈ ರೀತಿಯ ಅಪೂರ್ವ ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ವಿಶೇಷವೇ ಸರಿ. ಇದಕ್ಕಾಗಿ ವಿಶ್ವವಾಣಿ ಹಾಗೂ ವಿಶ್ವೇಶ್ವರ ಭಟ್ಟರಿಗೆ ಅಭಿನಂದನೆಗಳು. ಕಲೆ, ಸಂಸ್ಕೃತಿ, ಆಚಾರ, ವಿಚಾರಗಳಲ್ಲಿ ಭಾರತ ಮತ್ತು ಭೂತಾನ್ ಹಲವು ರೀತಿಯ ಸಾಮ್ಯತೆಯನ್ನು ಹೊಂದಿರುವುದು ವಿಶೇಷ. ಭಾರತದಿಂದ ಆಗಮಿಸುತ್ತಿರುವ ಈ ಸಾಧಕರ ಸಾಧನೆಗಳನ್ನು ತಿಳಿದುಕೊಳ್ಳುವುದರಿಂದ ಭೂತಾನಿಯರಿಗೂ ಹೊಸ ಪ್ರೇರಣೆ ಸಿಗುವಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

## ಪ್ರಶಾಂತವೇ ಭೂತಾನ್‌ನ ಭೂಷಣ

ಭೂತಾನ್ ಹಸಿರು ಸೀರೆಯನ್ನುಟ್ಟುಕೊಂಡು ಇಡೀ ದೇಶದ ತುಂಬೆಲ್ಲಾ 'ಪ್ರಶಾಂತಿ'ಯನ್ನು ಕಾಪಾಡಿ ಕೊಂಡು ಹೊಸ ಅಧ್ಯಾತ್ಮವನ್ನು , ನವ ಸ್ಫೂರ್ತಿಯನ್ನು, ಸ್ಫುರಿಸುವುದನ್ನು ಪ್ರತ್ಯಕ್ಷವಾಗಿ ಇಲ್ಲಿ ಅನುಭವಿಸುವಾಗ ಈ ಭೂತಾನ್ ನಿಜಕ್ಕೂ 'ಭೂ' ತಾಣ ಎಂದು ಅನಿಸದೇ ಇರದು. ಇಡೀ ದೇಶದಲ್ಲಿ ಇರುವುದು ಕೇವಲ 20 ಜಿಲ್ಲೆಗಳು. ಈ ಇಡೀ ದೇಶದಲ್ಲಿ ಕಣ್ಣಿಟ್ಟು ಹುಡುಕಿದರೂ ನಮ್ಮ ಬೆಂಗಳೂರಿನಂತ, ಮುಂಬೈನಂತಹ ಗೌಜು, ಗದ್ದಲಗಳ ನಗರ ಒಂದೂ ಕಾಣಿಸುವುದಿಲ್ಲ. ಇಲ್ಲಿ ವಿಪರೀತವಾಗಿ ದುಡ್ಡು ಕರಗಿಸಬಲ್ಲ ದೊಡ್ಡ ದೊಡ್ಡ ಶಾಪಿಂಗ್ ಮಾಲ್‌ಗಳಿಲ್ಲ. ವಿಷ ಕಾರುವ ವಿಪರೀತ ಕೈಗಾರಿಕೋದ್ಯಮಗಳ ಹಾವಳಿಯಿಲ್ಲ. ಎಲ್ಲಾ ಕಡೆಯೂ ಒಂದೇ ರೀತಿಯ ಹೆರಿಟೇಜ್ ಕಟ್ಟಡಗಳನ್ನು ನಿರ್ಮಿಸಬೇಕೆಂಬ ಸರಕಾರದ ಕಟ್ಟಾಜ್ಞೆಯನ್ನು ಯಾರೂ ಇಲ್ಲಿ ಉಲ್ಲಂಘಿಸಿಲ್ಲವಾದ್ದರಿಂದ, ಇಡೀ ದೇಶಾದ್ಯಂತ ಒಂದೇ ಬಗೆಯ, ಒಂದೇ ಬಣ್ಣದ ವಾಸ್ತು ಶಿಲ್ಪಗಳನ್ನು ನೋಡುವುದೇ ಚಂದ. ಯೋಗ ಧ್ಯಾನದಲ್ಲಿ ಆನಂದ ಕಾಣುವ, ರುದ್ರಾಕ್ಷಿ ಜಪಮಾಲೆ ಹಿಡಿದು ಬೌದ್ಧ ಮಂದಿರಗಳನ್ನು ಪ್ರದಕ್ಷಿಣೆ ಹಾಕುವ, ಭೌತಿಕ ಸುಖಕ್ಕಿಂತ ಆಧ್ಯಾತ್ಮ ಖುಷಿಗಾಗಿ ಹುಡುಕುವ ಭೂತಾನಿಯರಿಗೆ ಅತಿಯಾದ ಆಧುನಿಕವೆಂದರೆ ವರ್ಜ್ಯ. ಹೀಗೆ ಮೊದಲಿನಿಂದಲೂ ತನ್ನ ತನವನ್ನು ಕಾಪಾಡಿಕೊಂಡು, ವಿಶಿಷ್ಟ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡಿರುವ ಭೂತಾನ್ ಹಣದ ಆಸೆಗಾಗಿ ತನ್ನನ್ನು ವಿಪರೀತವಾಗಿ ಪ್ರವಾಸೋದ್ಯಮಕ್ಕೆ ತೆರೆದುಕೊಂಡು ತನ್ನ ನೆಲವನ್ನು ರಾಡಿ ಮಾಡಿಕೊಂಡಿಲ್ಲ. ರಸ್ತೆ, ಗಲ್ಲಿ, ಹಳ್ಳಿಗಳು ಇದರಿಂದಾಗಿ ಕ್ಲೀನಾಗಿ ಉಳಿದುಕೊಂಡಿವೆಯೇ ವಿನಃ ಗಬ್ಬೆದ್ದು ಹೋಗಿಲ್ಲ.

## ಆರೋಗ್ಯ ಪೂರ್ಣ ಬದುಕಿಗೆ ಭೂತಾನ್ ಬುನಾದಿ

ಕಾರ್ಯಕ್ರಮದಲ್ಲಿ ಹಿರಿಯ ನಟಿ, ಮಾಜಿ ಸಚಿವೆ ಡಾ.ಜಯಮಾಲಾ ಮಾತನಾಡಿ, ಭೂತಾನ್ ನಿಸರ್ಗ ಸಂಪತ್ತನ್ನು ಕಾಳಜಿ ಪೂರ್ವಕವಾಗಿ ಉಳಿಸಿ, ಬೆಳೆಸಿಕೊಂಡಿರುವುದರಿಂದ ಇಲ್ಲಿಯ ನೆಲ-ಜಲ-ಗಾಳಿ ಎಲ್ಲವೂ ಶುದ್ಧವಾಗಿದ್ದು, ಆರೋಗ್ಯ ಪೂರ್ಣ ಬದುಕನ್ನು ಸಾಗಿಸಲು ಪೂರಕವಾಗಿದೆ. ಭೂತಾನ್‌ನ ಈ ವಿಶೇಷ ಗುಣದಿಂದಾಗಿ ಇಲ್ಲಿಗೆ ಬರುವವರಲ್ಲಿನ ಕೆಲವು ರೋಗಗಳು ಸಹಜವಾಗಿಯೇ ವಾಸಿಯಾಗಿ ಹೊಸ ಜೀವನೋತ್ಸಾಹಕ್ಕೆ ಸ್ಫೂರ್ತಿ ತುಂಬುತ್ತದೆ. ಬುದ್ಧನ ಆರಾಧಕರ ದೇಶ ಭೂತಾನ್. ಭಗವಾನ್ ಬುದ್ಧ ನಮ್ಮ ಭಾರತದಿಂದಲೇ ಹೊಸ ಬದುಕಿನ ಶಾಂತಿ ಮಾರ್ಗಗಳನ್ನು ಹೇಳಿಕೊಟ್ಟ ದಾರ್ಶನಿಕರಾಗಿರುವುದು ವಿಶೇಷ ಎಂದು ಅಭಿಪ್ರಾಯಪಟ್ಟರು. ನಾನು ವಿಶ್ವವಾಣಿಯ ನಿಯೋಗದಲ್ಲಿ ಭಾಗವಹಿಸಿ ಅನೇಕ ದೇಶಗಳಲ್ಲಿ ನಡೆದ ಸಮಾರಂಭಗಳನ್ನು ಗಮನಿಸಿದ್ದೇನೆ. ಅತ್ಯಂತ ಶಿಸ್ತು ಮತ್ತು ಕಾಳಜಿ ಪೂರ್ವಕವಾಗಿ ಈ ಕಾರ್ಯಕ್ರಮಗಳು ನಡೆಯುತ್ತಿರುವುದಕ್ಕೆ ವಿಶ್ವೇಶ್ವರ ಭಟ್ಟರ ಸಂಘಟನಾ ಶಕ್ತಿಯೇ ಮುಖ್ಯ ಕಾರಣ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದೆಂದರೆ ಅದು ಸುಲಭದ ಮಾತಲ್ಲ. ಆದರೆ ಕೇವಲ ಒಂದುವರೆ ವರ್ಷದಲ್ಲಿಯೇ ಹತ್ತು ರಾಷ್ಟ್ರಗಳಲ್ಲಿ ಸಾಧಕರ ಸಮಾವೇಶವನ್ನು ಈ ರೀತಿಯಾಗಿ ಯಶಸ್ವಿಯಾಗಿ ನಡೆಸಿದ ವಿಶ್ವವಾಣಿಗೆ ಅಭಿನಂದನೆ ಎಂದರು.

**ದೇಶ ಸುತ್ತು ಕೋಶ ಓದು ಎನ್ನುವ ಮಾತಿದೆ. ಅದರಂತೆಯೇ ವಿಶ್ವವಾಣಿಯ ಅಂತಾರಾಷ್ಟ್ರೀಯ ಸಮ್ಮೇಳನಗಳು ಅನೇಕ ದೇಶಗಳನ್ನು ಸುತ್ತುವುದಕ್ಕೆ ಅಧ್ಯಯನ ಮಾಡುವುದಕ್ಕೆ ಸಹಕಾರಿಯಾಗಿದೆ. ವಿಶ್ವೇಶ್ವರ ಭಟ್ಟರು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು ನಮಗೆಲ್ಲ ಕೋಶ ಓದುವ ಆಸಕ್ತಿಯನ್ನು ಹೆಚ್ಚಿಸಿದ್ದಾರೆ. ವಿಶ್ವವಾಣಿ ಬಳಗದಿಂದ ಪ್ರಾರಂಭವಾಗಿರುವ ಪ್ರವಾಸಿ ಪ್ರಪಂಚ ಹೊಸ ವಾರಪತ್ರಿಕೆಯೂ ಪ್ರವಾಸೋದ್ಯಮದ ಹಲವು ಆಯಾಮಗಳನ್ನು ಓದುಗರಿಗೆ ಅರ್ಥ ಪೂರ್ಣವಾಗಿ ಪರಿಚಯಿಸುತ್ತಿರುವುದು ಅಭಿನಂದನೀಯ.**

– **ಡಾ.ಜಯಮಾಲಾ,** ಹಿರಿಯ ನಟಿ ಹಾಗೂ ಮಾಜಿ ಸಚಿವೆ

## ದುಬೈನಲ್ಲಿ ಯುವ ಕನ್ನಡಿಗರ ಸಾಹಸಗಾಥೆಯೇ ಪರ್ವ

ಭೂತಾನ್‌ನಲ್ಲಿ ನಡೆದ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ ಪರ್ವ ಗ್ರೂಪ್ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಕರುನಾಡಿನ ಉತ್ಸಾಹಿ ಯುವಕರು ದುಬೈ ಹಾಗೂ ಕರ್ನಾಟಕದ ನಡುವೆ 'ಸೇತುವೆ'ಯಾಗಿ ಪರ್ವ ಗ್ರೂಪ್ ಸ್ಥಾಪಿಸಿದ್ದಾರೆ. ತುಮಕೂರು ಮೂಲದ ಯುವ ಉದ್ಯಮಿ ನೀಲೇಶ್ ಹಾಗೂ ಚಿತ್ರದುರ್ಗ ಮೂಲದ ಶಶಿಧರ್ ನಾಗರಾಜಪ್ಪ ಅವರು ಪರ್ವ ಗ್ರೂಪ್‌ನ್ನು ಆರಂಭಿಸಿದ್ದಾರೆ. ಇಬ್ಬರು ಯುವ, ಉತ್ಸಾಹಿ ಉದ್ಯಮಿಗಳ ನೇತೃತ್ವದಲ್ಲಿ ಪರ್ವ ಗ್ರೂಪ್ ಅತ್ಯಂತ ಯಶಸ್ವಿ ಸೇವೆಯನ್ನು ನೀಡುತ್ತಿದ್ದು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗದಲ್ಲಿ ಈಗಾಗಲೇ ದುಬೈ ಎಕ್ಸ್‌ಪೋ ನಡೆಸಿದ್ದಾರೆ. ಭೂತಾನ್ ಗ್ಲೋಬಲ್ ಅಚೀವರ್ಸ್ ಪುರಸ್ಕೃತರಲ್ಲಿ ಈ ಇಬ್ಬರೂ ಇರುವುದು ವಿಶೇಷ.

ಇನ್ನು ಕಾರ್ಯಕ್ರಮದಲ್ಲಿ ಮಾತನಾಡಿದ ಪರ್ವ ಸಂಸ್ಥೆಯ ಸಂಸ್ಥಾಪಕ ಎಚ್.ಪಿ. ನೀಲೇಶ್ ಮತ್ತು ಸಹ ಸಂಸ್ಥಾಪಕ ಶಶಿಧರ್ ನಾಗರಾಜಪ್ಪ ಅವರು ದುಬೈನಲ್ಲಿ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡುವುದರಿಂದ ಆಗುವ ಲಾಭವನ್ನು ಉದಾಹರಣೆ ಸಮೇತ ವಿವರಿಸಿದರು. ಕನ್ನಡಿಗರಿಂದಲೇ ದುಬೈನಲ್ಲಿ ಕಟ್ಟಿರುವ ಪರ್ವ ರಿಯಾಲಿಟಿಯಿಂದ ಗ್ರಾಹಕರಿಗೆ ಅನೇಕ ವಿಶೇಷ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪರ್ವದ ಮೂಲಕ ದುಬೈನಲ್ಲಿ ಮನೆ ಖರೀದಿಸಿದರೆ ದುಬೈಗೆ ಉಚಿತವಾಗಿ ಖರೀದಿದಾರ ದಂಪತಿಯನ್ನು ಕರೆದೊಯ್ಯುವ ವ್ಯವಸ್ಥೆ ಮಾಡಲಾಗುವುದು ಎಂದರು. ಈಗಲೇ ಬುಕ್ಕಿಂಗ್ ಮಾಡಿದವರಿಗೆ 10 ಗ್ರಾಂ ಚಿನ್ನದ ನಾಣ್ಯ, ದುಬೈ ಗೋಲ್ಡನ್ ವೀಸಾ, ಆಸ್ತಿಯನ್ನು ವಾಪಸು ಖರೀದಿಸುವ ಗ್ಯಾರಂಟಿ, ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಿಕೆ ಸೇರಿದಂತೆ ಮುಂತಾದ ಆಕರ್ಷಕ ಯೋಜನೆಗಳನ್ನು ಪರ್ವದಿಂದ ನೀಡಲಾಗುತ್ತಿದೆ ಎಂದು ವಿವರಿಸಿದರು. ಬೆಂಗಳೂರಿನಲ್ಲಿ ಹೂಡಿಕೆ ಮಾಡುವುದಕ್ಕಿಂತ ದುಬೈನಲ್ಲಿ ಹೂಡಿಕೆ ಹೆಚ್ಚು ಸುರಕ್ಷಿತ ಮತ್ತು ಲಾಭವೂ ಅಧಿಕ, ತೆರಿಗೆಯೂ ಕಡಿಮೆ. ಜಗತ್ತಿನಲ್ಲಿಯೇ ವೇಗವಾಗಿ ದುಬೈ ಬೆಳೆಯುತ್ತಿರುವುದು ಹೂಡಿಕೆದಾರರಿಗೆ ಭವಿಷ್ಯದಲ್ಲಿ ಹಲವು ಅನುಕೂಲಗಳಿವೆ. ಬಾಡಿಗೆದಾರರನ್ನು ಹುಡುಕೊಡುವ ವ್ಯವಸ್ಥೆಯನ್ನು ಪರ್ವ ಸಂಸ್ಥೆಯೇ ನಿರ್ವಹಿಸಲಿದೆ ಎಂದು ನೀಲೇಶ್ ಮತ್ತು ಶಶಿಧರ್ ನಾಗರಾಜಪ್ಪ ವಿವರಿಸಿದರು.

ಪರ್ವ ಗ್ರೂಪ್ ಸಂಸ್ಥಾಪಕ ನೀಲೇಶ್ ಹಾಗೂ ಸಹ ಸಂಸ್ಥಾಪಕ ಶಶಿಧರ ನಾಗರಾಜಪ್ಪ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದ ಕ್ಷಣ.

ವಿಶ್ವೇಶ್ವರ ಭಟ್ ಅವರ ಜತೆ ವೆಂಕಟೇಶ್ ಹೆಗಡೆ ಹೊಸಬಾಳೆ


ವಿಶ್ವವಾಣಿಯ ಸಿಇಒ ಚಿದಾನಂದ ಕಡಲಾಸ್ಕರ ಅವರೊಂದಿಗೆ ಸಿದ್ದೇಶ್ ಹಾರನಹಳ್ಳಿ, ವಿನಯ್ ಕುಮಾರ್ ಶೆಟ್ಟಿ

ವಿಶ್ವವಾಣಿ ನಿಯೋಗದೊಂದಿಗೆ ಭೂತಾನ್ ಸಚಿವ.

## ಐತಿಹಾಸಿಕ ಸ್ಥಳಗಳಿಗೆ ನಿಯೋಗದ ಭೇಟಿ

ವಿಶ್ವವಾಣಿಯ ನಿಯೋಗದಲ್ಲಿ ತೆರಳಿದ್ದ ಸದಸ್ಯರು, ಭೂತಾನಿನ ಐತಿಹಾಸಿಕ, ಪ್ರೇಕ್ಷಣೀಯ ತಾಣಗಳಾದ ಥಿಂಪು, ಪಾರೋ, ಪುನಾಕಾ ಮುಂತಾದ ಹಲವು ಕಡೆಗಳಿಗೆ ಭೇಟಿ ನೀಡಿದರು. ಮಾಜಿ ಸಚಿವ ಆರ್.ವಿ ದೇಶಪಾಂಡೆ ಅವರು ವಿಮಾನ ನಿಲ್ದಾಣದಲ್ಲಿ ಸ್ವತಃ ಹಾಜರಿದ್ದು, ವಿಶ್ವವಾಣಿಯ ನಿಯೋಗದ ಈ ಭೂತಾನ್ ಪ್ರವಾಸಕ್ಕೆ ಯಶಸ್ಸು ಕೋರಿ ಬೀಳ್ಕೊಟ್ಟಿದ್ದು ವಿಶೇಷವಾಗಿತ್ತು.

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜತೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಮೆಚ್ಚಿಸುವ ಪ್ರಯತ್ನದಲ್ಲಿ ಪತ್ರಿಕೆ ಯಶಸ್ವಿಯಾಗಿದೆ. ಕಳೆದೊಂದು ವರ್ಷದ ಅವಧಿಯಲ್ಲಿ ಒಂಬತ್ತು ದೇಶಗಳಲ್ಲಿ ನಡೆದ ಯಶಸ್ವಿ ಕಾರ್ಯಕ್ರಮದ ಬಳಿಕ ಇದೀಗ ಕರುನಾಡಿನ 13 ಸಾಧಕರಿಗೆ ಭೂತಾನ್ ದೇಶದ ಥಿಂಪುನಲ್ಲಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಾಧಕರಿಗೆ ಭೂತಾನ್ ಸರಕಾರದ ಆರೋಗ್ಯ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಹಿರಿಯ ನಟಿ ಹಾಗೂ ಮಾಜಿ ಸಚಿವೆ ಡಾ.ಜಯಮಾಲಾ ಸೇರಿದಂತೆ ಹಲವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಭೂತಾನ್‌ನಲ್ಲಿ ಕರುನಾಡಿನ ಸಾಧಕರಿಗೆ ಸನ್ಮಾನ

ಶ್ರೀ ನೀಲೇಶ್ ಎಚ್.ಪಿ (ಪರ್ವ ಗ್ರೂಪ್ಸ್ ಸಂಸ್ಥಾಪಕರು)

ಶ್ರೀ ಶಶಿಧರ್ ನಾಗರಾಜಪ್ಪ (ಸಿಇಒ ಪರ್ವ ಗ್ರೂಪ್ಸ್)

ಶ್ರೀ ವಿನಯ್ ಕುಮಾರ್ ಶೆಟ್ಟಿ (ಯುವ ಮೆರಿಡಿಯನ್ ಗ್ರೂಪ್ಸ್)

ಶ್ರೀಮತಿ ಭಾವನ ಬೆಳಗೆರೆ, ಪತ್ರಕರ್ತೆ ಹಾಗೂ ನಿರ್ಮಾಪಕಿ

ಶ್ರೀ ವಿಶಾಲ್ ಪಿ ಶಾನಭಾಗ (ಸಂಸ್ಥಾಪಕರು, ಹನ್ಸ್‌ನಾಚುರಲ್ಸ್)

ಶ್ರೀ ವಿಘ್ನೇಶ್ವರ ಶಾಸ್ತ್ರಿ ಹಿರಿಯ ವಕೀಲರು

ಶ್ರೀ ಪ್ರವೀಣ್ ಗಿರಿಯಪ್ಪನವರ್ (ಸಂಸ್ಥಾಪಕ ನಿರ್ದೇಶಕರು, ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆ)

ಶ್ರೀ ಓಂಕಾರ್ ತುಮಕೂರು, ಬಿಜೆಪಿ ಎಸ್ ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ

ಶ್ರೀ ಭಾಸ್ಕರ್ ಸೂರ್ಯ ನಾರಾಯಣ್, ಯುವ ಉದ್ಯಮಿ

ಶ್ರೀ ರಹಮಾನ್ ಸಾಬ್ ಮುಕ್ತುಮ್ ಸಾಬ್ ದರಗಾದರವರ ಪರವಾಗಿ ಮಗ ಎಂ.ಆರ್ ದರಗಾದ.
ಇಂಡಸ್ಟ್ರಿಯಲ್ ಪ್ರೊಟೆಕ್ಷನ್ ಫೋರ್ಸ್

ಶ್ರೀ ಪರಮೇಶ್ವರಪ್ಪ ಅಮರಾವತಿ

ಶ್ರೀ ಮೃತ್ಯುಂಜಯ ಕೆ.ಎಸ್, ಎ.ಇ.ಇ. ಅವರ ಪರವಾಗಿ ಸಿದ್ದೇಶ್ ಹಾರನಹಳ್ಳಿ

ಭೂತಾನ್ ಆರೋಗ್ಯ ಸಚಿವ ಲಿಯಾನ್ಪೋ ಟಂಡಿನ್ ವಾಂಗ್ಚುಕ್, ವಿಶ್ವೇಶ್ವರ ಭಟ್, ಮಾಜಿ ಸಚಿವೆ ಜಯಮಾಲಾ.

ಶ್ರೀ ಕೆ.ಪಿ. ದಿನೇಶ್ ಕುಮಾರ್, ಎಸ್‌ಸಿಸಿ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ

ಗೋಬಲ್ ಅಚೀವರ್ಸ್ ಪ್ರಶಸ್ತಿ ಫಲಕಗಳು.

## ಸಮಾಚಾರ ಸಣ್ಣದಲ್ಲ

### ...ಬೆಂಗಳೂರಿಗೆ ಮೋದಿ

← ಮೊದಲಪುಟದಿಂದ

ಮೂರು ವರ್ಷದ ವಿಳಂಬದ ಬಳಿಕ ಇದೀಗ ಮೆಟ್ರೋದ ಹಳದಿ ಮಾರ್ಗಕ್ಕೆ ಉದ್ಘಾಟನೆಯ ಭಾಗ್ಯ ದೊರೆತಿದೆ. ಈ ಹಿಂದೆ ಆ.15ರಂದು ಆರ್.ವಿ ರಸ್ತೆ-ಬೊಮ್ಮಸಂದ್ರ ಮಾರ್ಗ ವನ್ನು ಉದ್ಘಾಟಿಸಲಾಗು ವುದು ಎಂದು ಮೆಟ್ರೋ ಹೇಳಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸುತ್ತಿರುವುದರಿಂದ ಆ.10ಕ್ಕೆ ಉದ್ಘಾಟನೆಯಾಗಲಿದೆ.

**5,057 ಕೋಟಿ ರು.ವೆಚ್ಚ:** ಮೆಟ್ರೋ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಿಸಲು ರೈಲ್ವೆ ಸುರಕ್ಷತಾ ಆಯುಕ್ತರಿಂದ ಅನುಮತಿ ದೊರೆತಿದ್ದು, ಆರ್ ವಿ ರಸ್ತೆಯಿಂದ ಬೊಮ್ಮಸಂದ್ರವರೆಗಿನ ಮೆಟ್ರೋ ಹಳದಿ ಮಾರ್ಗ ಸುಮಾರು 19.15 ಕಿ.ಮೀ ಉದ್ದವಿದೆ. ಸುಮಾರು 5,056.99 ಕೋಟಿ ರು ವೆಚ್ಚದಲ್ಲಿ ಮೆಟ್ರೋ ಮಾರ್ಗವನ್ನು ನಿರ್ಮಿಸಲಾಗಿದ್ದು, 16 ನಿಲ್ದಾಣಗಳಿವೆ. ಇದೇ ವೇಳೆ ಮೆಟ್ರೋ 3ನೇ ಹಂತದ ಯೋಜನೆಗೆ ಶಂಕುಸ್ಥಾಪನೆ ನೆರವೇರಲಿದೆ. ಈ ಮೆಟ್ರೋ ಫೇಸ್-3 ಮಾರ್ಗ 44.65 ಕಿ.ಮೀ ಉದ್ದವಿರಲಿದ್ದು, 15,611 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಲಿದೆ.

### ...ಪ್ರತ್ಯೇಕ ಕಾರ್ಯಪಡೆ

← ಮೊದಲಪುಟದಿಂದ

ಇದಲ್ಲದೆ, ರಾಜ್ಯದಲ್ಲಿ ಹೊಸದಾಗಿ ಸೈಬರ್ ಅಪರಾಧ ತಡೆ ಘಟಕವನ್ನು ಸ್ಥಾಪಿಸಿ, 43 ಸಿಇಎನ್ ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳೆಂದು ಮರುನಾಮಕರಣ ಮಾಡಲಾಗಿದೆ. ಉಳಿದಂತೆ ನಾರ್ಕೋಟಿಕ್ಸ್ ಮತ್ತು ಆರ್ಥಿಕ ಅಪರಾಧಗಳನ್ನು ಸಿಇಎನ್ ಪೊಲೀಸ್ ಠಾಣೆಗಳಿಂದ ಬೇರ್ಪಡಿಸಿ, ಸಿಇಎನ್ ಪೊಲೀಸ್ ಠಾಣೆಗಳಲ್ಲಿ ನಿಯಮ 10 ಅಥವಾ ಅಧಿನಿಯಮಗಳಡಿಯಲ್ಲಿ ಪ್ರಕರಣ ದಾಖಲಿಸುವ ಅಧಿಕಾರವನ್ನು ಹಿಂಪಡೆದು, ಸದರಿ ನಿಯಮ ಅಥವಾ ಅಧಿನಿಯಮಗಳಡಿಯಲ್ಲಿನ ಪ್ರಕರಣಗಳನ್ನು ಆಯಾ ವ್ಯಾಪ್ತಿಯ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಿರ್ವಹಿಸಲು ಸೂಚಿಸಿದೆ.

**388 ಹುದ್ದೆಗಳ ಕಾರ್ಯಪಡೆ:** ರಾಜ್ಯದಲ್ಲಿ ಮಾದಕ ವಸ್ತು ವಿರೋಧಿ ಕಾರ್ಯಪಡೆ ಘಟಕವನ್ನು 388 ವಿವಿಧ ದರ್ಜೆಯ ಹುದ್ದೆಗಳೊಂದಿಗೆ ಸೃಜಿಸಲು 28.96 ಕೋಟಿ ರು. ವೆಚ್ಚವಾಗಲಿದೆ. ಜಿಲ್ಲಾ ನಗರ ಪೊಲೀಸ್ ಘಟಕಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಇಎನ್ ಪೊಲೀಸ್ ಠಾಣೆಗಳು ಆಯಾ ಘಟಕಗಳ ವ್ಯಾಪ್ತಿಯಲ್ಲಿ ಮಾದಕ ದ್ರವ್ಯ ನಿಗ್ರಹ ಜಾರಿ ವಿಭಾಗಗಳಾಗಿ ಕಾರ್ಯನಿರ್ವಹಿಸಲು ಹಾಗೂ ಆಯಾ ಜಿಲ್ಲಾ ನಗರ ಪೊಲೀಸ್ ಘಟಕಗಳ ಸಹಾಯಕ ಅಭಿಯೋಗ ನಿರ್ದೇಶಕರು ಘಟಕಕ್ಕೆ ಸಂಬಂಧಿಸಿದ ಕಾನೂನಾತ್ಮಕ ವಿಷಯಗಳಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಲು ಪ್ರಸ್ತಾಪಿಸಲಾಗಿದೆ. ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಘಟಕದಿಂದ ವರ್ಗಾಯಿಸಲು ಪ್ರಸ್ತಾಪಿಸಿರುವ 56 ಹುದ್ದೆ ಹೊರತುಪಡಿಸಿ, ವಿವಿಧ ದರ್ಜೆಯ 28 ಹುದ್ದೆಗಳ ಸೃಜನೆಗೆ ವಾರ್ಷಿಕ ಅಂದಾಜು 27.7 ಕೋಟಿ ರು. ವೆಚ್ಚ ಅಂದಾಜಿಸಲಾಗಿದೆ ಈ ಸಂಬಂಧ ಪೊಲೀಸ್ ಮಹಾನಿರ್ದೇಶಕರು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.




# ಸ್ಟ್ಯಾನ್‌ಫೋರ್ಡ್ ವಿವಿಯೊಂದಿಗೆ ಸಹಭಾಗಿತ್ವಕ್ಕೆ ಒಲವು

## ಗ್ರಾಮೀಣ ಆರೋಗ್ಯ, ತಂತ್ರಜ್ಞಾನ ಅಭಿವೃದ್ಧಿಗೆ ಹೊಸ ಹೆಜ್ಜೆ | ಸ್ಪೀಕರ್ ಯು.ಟಿ. ಖಾದರ್ ನೇತೃತ್ವದ ನಿಯೋಗದಿಂದ ಭೇಟಿ, ಪರಿಶೀಲನೆ

**ವಿಶ್ವವಾಣಿ ಸುದ್ದಿಮನೆ ಬೆಂಗಳೂರು**

ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ನೇತೃತ್ವದ ಉನ್ನತ ಮಟ್ಟದ ನಿಯೋಗ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಪ್ರತಿಷ್ಠಿತ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಗ್ರಾಮೀಣ ಭಾಗದ ಆರೋಗ್ಯ ಸುಧಾರಣೆ ಮತ್ತು ತಂತ್ರಜ್ಞಾನ ವಲಯದಲ್ಲಿ ಕರ್ನಾಟಕದೊಂದಿಗೆ ಸಹಭಾಗಿತ್ವ ವಹಿಸುವ ಕುರಿತು ಪ್ರಮುಖ ಮಾತುಕತೆ ನಡೆಸಿದೆ.

ನಿಯೋಗವು ಸ್ಟ್ಯಾನ್‌ಫೋರ್ಡ್ ವಿವಿ ಪ್ರೊಫೆಸರ್‌ಗಳಾದ ಅನುರಾಗ್ ಮತ್ತು ನಂದನ್ ಅವರನ್ನು ಭೇಟಿ ಮಾಡಿ, ಹೃದಯ, ಸ್ಟ್ರೋಕ್ ಮತ್ತು ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ತಂತ್ರಜ್ಞಾನಗಳ ಕುರಿತು ಚರ್ಚಿಸಿದೆ. ಅದರಲ್ಲಿಯೂ ಸ್ಟೆಂಟ್ ಅಳವಡಿಕೆ, ಹಾರ್ಟ್ ಬ್ಲಾಕೇಜ್, ರಕ್ತ ಹೆಪ್ಪುಗಟ್ಟುವಿಕೆ ಮತ್ತು ಸರ್ವಿಕಲ್ ಕ್ಯಾನ್ಸರ್ ತಡೆಗಟ್ಟುವ ಹೊಸ ತಂತ್ರಜ್ಞಾನಗಳ ಸಂಶೋಧನೆಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ಚಿಕಿತ್ಸೆ ಮತ್ತು ರೋಗನಿರ್ಣಯದಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಳಕೆಯ ಕುರಿತೂ ಚರ್ಚೆಗಳು ನಡೆದಿವೆ.

ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಸುಮಾರು 8000 ಎಕರೆ ಪ್ರದೇಶದಲ್ಲಿ ಇದೆ. ಇಲ್ಲಿ 9000 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಅತ್ಯಾಧುನಿಕ ವಿಶ್ವವಿದ್ಯಾಲಯವಾಗಿದ್ದು, ಈ ವಿವಿಯ ಅಧ್ಯಯನಕ್ಕಾಗಿಯೇ ವಿಶೇಷ ತಂಡವನ್ನು ರಚಿಸಿ ಕಳುಹಿಸಿಕೊಡಬೇಕಿದೆ. ಆ ಮೂಲಕ ಇಲ್ಲಿನ ಆಲೋಚನೆ, ಕಲಿಕಾ ರೀತಿ, ಗ್ರಾಮೀಣ ಜನರಿಗೆ ಆರೋಗ್ಯ, ತಂತ್ರಜ್ಞಾನಗಳ ಬಗ್ಗೆ ಕಲಿಕೆಗೆ ಅನುಕೂಲ ಮಾಡಿಕೊಡಲು ಇದು ಸಹಾಯಕವಾಗಲಿದೆ ಎಂದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡುವೆ.

- **ಮಂಜುನಾಥ್ ಭಂಡಾರಿ** ವಿಧಾನಪರಿಷತ್ ಸದಸ್ಯ

ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ನೇತೃತ್ವದ ಉನ್ನತ ಮಟ್ಟದ ನಿಯೋಗ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಪ್ರತಿಷ್ಠಿತ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಗ್ರಾಮೀಣ ಭಾಗದ ಆರೋಗ್ಯ ಸುಧಾರಣೆ ಮತ್ತು ತಂತ್ರಜ್ಞಾನ ವಲಯದಲ್ಲಿ ಕರ್ನಾಟಕದೊಂದಿಗೆ ಸಹಭಾಗಿತ್ವ ವಹಿಸುವ ಕುರಿತು ಪ್ರಮುಖ ಮಾತುಕತೆ ನಡೆಸಿತು.

ಗ್ರಾಮೀಣ ರೈತರಿಗೆ ಅನುಕೂಲವಾಗುವಂತೆ ಸುಧಾರಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿಯೂ ಮಾತುಕತೆಗಳು ನಡೆದಿವೆ. ಕಡಿಮೆ ದರದಲ್ಲಿ ಗ್ರಾಮೀಣ ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಎಲೆಕ್ಟ್ರಿಕಲ್ ಸ್ಕೂಟರ್, ಆಟೋ ಮತ್ತು ಸೌರಶಕ್ತಿ ಚಾಲಿತ ವಾಹನಗಳನ್ನು ತಲುಪಿಸುವ ನಿಟ್ಟಿನಲ್ಲಿಯೂ ಸಂಶೋಧನೆಗಳು ನಡೆಯುತ್ತಿವೆ. ಜಲ ಮತ್ತು ಇಂಧನ ಮರುಬಳಕೆ, ವಿಜ್ಞಾನ ಅಭಿವೃದ್ಧಿ ಮತ್ತು ದತ್ತಾಂಶ ವಿಜ್ಞಾನದ ಬಗ್ಗೆಯೂ ಸಂಶೋಧನೆಗಳು ನಡೆಯುತ್ತಿವೆ. ಈ ಎಲ್ಲಾ ಸಂಶೋಧನೆಗಳಿಗೆ ಕರ್ನಾಟಕ ಸರಕಾರವು ಆಸಕ್ತಿ ವಹಿಸಿದರೆ ಹೆಚ್ಚಿನ ಸಹಭಾಗಿತ್ವ ಸಾಧ್ಯವಾಗಲಿದೆ ಎಂದು ವಿವಿ ಪ್ರಾಧ್ಯಾಪಕರು ತಿಳಿಸಿದ್ದಾರೆ. ಈ ನಿಯೋಗದಲ್ಲಿ ಯು.ಟಿ. ಖಾದರ್ ಅವರೊಂದಿಗೆ ಮಂಜುನಾಥ್ ಭಂಡಾರಿ, ಶಾಸಕರಾದ ಬಿ.ಆರ್. ಪಾಟೀಲ್, ಸುರೇಶ ಬಾಬು, ಭೀಮಣ್ಣ ನಾಯಕ್, ಶ್ರೀನಿವಾಸ ಮಾನೆ, ಪಿ.ಎಂ. ಅಶೋಕ್, ಅಶೋಕ್ ರೈ, ಗುರುರಾಜ್ ಗಂಟಿಹೊಳಿ, ಸುರೇಶ್ ಶೆಟ್ಟಿ ಮತ್ತು ದಿನೇಶ್ ಗೂಳಿಗೌಡ ಅವರು ಉಪಸ್ಥಿತರಿದ್ದರು.

ಕರ್ನಾಟಕದಲ್ಲಿ ಏಳು ಕೋಟಿ ಜನಸಂಖ್ಯೆಯಿದ್ದು, ಬೆಂಗಳೂರಿನಲಿಯೇ 1 ಕೋಟಿ 47 ಲಕ್ಷ ಮಂದಿ ಇದ್ದಾರೆ. ರಾಜ್ಯದಲ್ಲಿ ದಿನಕ್ಕೆ 6000 ವಾಹನಗಳು ನೋಂದಣಿಯಾಗಿ ರಸ್ತೆಗಳಿಯುತ್ತಿದ್ದರೆ, ಬೆಂಗಳೂರಲ್ಲಿ ದಿನಕ್ಕೆ 2500 ವಾಹನಗಳು ನೋಂದಣಿಯಾಗಿ ರಸ್ತೆಗಿಳಿಯುತ್ತಿವೆ. ಸ್ಟ್ಯಾನ್‌ಫೋರ್ಡ್ ವಿವಿಯಲ್ಲಿ ಗ್ರಾಮೀಣ ಭಾಗದ ಮಹಿಳೆಯರು, ರೈತರಿಗೆ ಕಡಿಮೆ ವೆಚ್ಚದಲ್ಲಿ ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ನಿಟ್ಟಿನಲ್ಲಿ ಸಂಶೋಧನೆಗಳು ಸಾಗಿವೆ.

- **ದಿನೇಶ್ ಗೂಳಿಗೌಡ** ವಿಧಾನ ಪರಿಷತ್ ಸದಸ್ಯ

# ಟರ್ಕಿ ತಂತ್ರಜ್ಞಾನದಿಂದ ಪ್ರಜ್ವಲ್ ರೇವಣ್ಣ ಕಾಮಕಾಂಡ ಸಾಬೀತು

## ಭಾರತದಲ್ಲಿ ಮೊದಲ ಬಾರಿಗೆ ಅನಾಟೋಮಿಕಲ್ ಕಾಂಪಾರೀಷನ್ ಆಫ್ ಜನಿಟಲ್ ಫೀಚರ್ಸ್ ಬಳಕೆ | ಮುಖವೇ ಕಾಣದ ವಿಡಿಯೊಗಳಲ್ಲಿ ಪ್ರಜ್ವಲ್‌ನ ಖಚಿತ ಪಡಿಸಿದ ಅತ್ಯಾಧುನಿಕ ತಂತ್ರಜ್ಞಾನ

**ಬೆಂಗಳೂರು:** ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಜೀವನ ಪರ್ಯಂತ ಜೈಲು ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣನ ಪೆನ್‌ಡ್ರೈವ್‌ನಲ್ಲಿದ್ದ ಅಶ್ಲೀಲ ವಿಡಿಯೊ ಆತನದ್ದೇ ಎನ್ನುವುದನ್ನು ಕಂಡು ಹಿಡಿಯಲು ಎಸ್‌ಐಟಿ ಅಧಿಕಾರಿಗಳು ಹರಸಾಹಸ ಪಟ್ಟು ಸಾಬೀತು ಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ, ಹಾಸನದಲ್ಲಿ ಪ್ರಜ್ವಲ್ ರೇವಣ್ಣಗೆ ಸಂಬಂಧಿಸಿದ ಎನ್ನಲಾದ ಅಶ್ಲೀಲ ವಿಡಿಯೊಗಳು ಸಾಮಾಜಿಕ

ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಈ ವಿಡಿಯೊಗಳಲ್ಲಿ ಎಲ್ಲೂ ಪ್ರಜ್ವಲ್ ರೇವಣ್ಣ ಮುಖ ಕಂಡಿಲ್ಲ. ಆದ್ರೆ, ಕೆಲವು ಫೋಟೋಗಳಲ್ಲಿ ಮಾತ್ರ ಕಂಡಿತ್ತು. ಹೀಗಾಗಿ ವಿಡಿಯೊನಲ್ಲಿರುವುದು ಪ್ರಜ್ವಲ್ ಅಲ್ಲ ಎಂದು ಕೆಲವರು ವಾದ ಮಾಡಿದ್ದರೆ, ಇನ್ನು ಕೆಲವರು ಇದು ಪ್ರಜ್ವಲ್ ರೇವಣ್ಣ, ಅವರ ಧ್ವನಿ ಸಹ ಇದೆ ಎಂದು ವಾದಿಸಿದ್ದರು. ಹೀಗಾಗಿ ಈ ಪ್ರಕರಣದ ತನಿಖೆಗಾಗಿ ರಾಜ್ಯ ಸರಕಾರ ಎಸ್‌ಐಟಿಯನ್ನು ರಚಿಸಿತು. ಈ ತಂಡವು ವಿಡಿಯೊದಲ್ಲಿರುವ ವ್ಯಕ್ತಿಯ ಗುರುತನ್ನು ಖಚಿತಪಡಿಸಲು, ಎಸ್‌ಐಟಿಯು ಈ ಟರ್ಕಿ ದೇಶದ ತಂತ್ರಜ್ಞಾನವನ್ನು ಬಳಸಿದೆ ಎಂದು ತಿಳಿದುಬಂದಿದೆ.

**ಎಸ್‌ಐಟಿ ತನಿಖೆಗೆ ಕೋರ್ಟ್ ಶ್ಲಾಘನೆ:** ಪ್ರಜ್ವಲ್ ರೇವಣ್ಣ ಅವರ ಅತ್ಯಾಚಾರ ಪ್ರಕರಣದ ವಿಡಿಯೋ ವೈರಲ್ ಆಗಿತ್ತು. ಆದರೆ, ವಿಡಿಯೋದಲ್ಲಿರೋ ವ್ಯಕ್ತಿ ಯಾರೆಂದು ಗೊತ್ತಿರಲ್ಲ. ಹೀಗಿದ್ದರೂ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಎಸ್ ಐಟಿ ತನಿಖೆ ಮಾಡಿದೆ. ಡಿಜಿಟಲ್ ಎವಿಡೆನ್ಸ್, ಫಾರೆನ್ಸಿಕ್ ಎಕ್ಸ್‌ಪರ್ಟ್‌ಗಳ ಮೂಲಕ ಟೆಕ್ನಿಕಲ್ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ಎಸ್‌ಐಟಿ ಸಂಗ್ರಹಿಸಿದ ಸಾಕ್ಷ್ಯ ಮುಂದಿಟ್ಟು ಎಸ್‌ಪಿಪಿಗಳಾದ ಅಶೋಕ್ ನಾಯಕ್ ಮತ್ತು ಬಿ.ಎನ್ ಜಗದೀಶ್ ವಾದ ಮಂಡಿಸಿದ್ದಾರೆ. ಇವರ ವಾದಕ್ಕೆ ಕೋರ್ಟ್ ಪ್ರಶಂಸೆ ವ್ಯಕ್ತಪಡಿಸಿದ್ದು, 480 ಪುಟಗಳ ತೀರ್ಪು ಬರೆಸಿದ್ದಾರೆ.

### ಏನಿದು ಟರ್ಕಿ ತಂತ್ರಜ್ಞಾನ?

ಪ್ರಜ್ವಲ್ ರೇವಣ್ಣ ವೈರಲ್ ಆದ ವಿಡಿಯೊ ಪ್ರಕರಣದ ತನಿಖೆಯಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಟರ್ಕಿಯಲ್ಲಿ ಬಳಕೆಯಾಗುವ ಅನಾಟೋಮಿಕಲ್ ಕಾಂಪಾರೀಷನ್ ಆಫ್ ಜನಿಟಲ್ ಫೀಚರ್ಸ್ ಎಂಬ ಅತ್ಯಾಧುನಿಕ ತಂತ್ರಜ್ಞಾನವನ್ನು ವಿಶೇಷ ತನಿಖಾ ತಂಡ (ಎಸ್ ಐಟಿ) ಬಳಸಿದೆ. ಈ ತಂತ್ರಜ್ಞಾನದ ಮೂಲಕ ವಿಡಿಯೊದಲ್ಲಿರುವ ವ್ಯಕ್ತಿಯ ಗುರುತನ್ನು ಖಚಿತಪಡಿಸಲಾಗಿದೆ, ಇದು ತನಿಖೆಯಲ್ಲಿ ಪ್ರಮುಖ ಅಂಶವಾಗಿದೆ. ತಂತ್ರಜ್ಞಾನದ ಕಾರ್ಯವಿಧಾನ ಹೇಗಿತ್ತು? ಅನಾಟೋಮಿಕಲ್ ಕಾಂಪಾರೀಷನ್ ಆಫ್ ಜನಿಟಲ್ ಫೀಚರ್ಸ್ ಎಂಬ ತಂತ್ರಜ್ಞಾನವು ವ್ಯಕ್ತಿಯ ಜನನೇಂದ್ರಿಯದ ಭೌತಿಕ ಲಕ್ಷಣಗಳನ್ನು ಆಧರಿಸಿ ಗುರುತನ್ನು ಪತ್ತೆಹಚ್ಚುವ ವಿಧಾನವಾಗಿದೆ. ಈ ತಂತ್ರಜ್ಞಾನವು ಫಿಂಗರ್‌ಪ್ರಿಂಟ್ ಗುರುತಿನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಆದರೆ ಇದು ಖಾಸಗಿ ಅಂಗಗಳ ರಚನೆಯನ್ನು ವಿಶ್ಲೇಷಿಸುತ್ತದೆ. ಒಬ್ಬ ವ್ಯಕ್ತಿಯ ಜನನೇಂದ್ರಿಯದ ರಚನೆಯು ಇನ್ನೊಬ್ಬರಿಗಿಂತ ಭಿನ್ನವಾಗಿರುತ್ತದೆ. ಇದು ಈ ತಂತ್ರಜ್ಞಾನದ ವಿಶಿಷ್ಟತೆಯಾಗಿದೆ. ಈ ವಿಧಾನವನ್ನು ಟರ್ಕಿಯಲ್ಲಿ ಕೆಲವು ಕಾನೂನು ತನಿಖೆಗಳಲ್ಲಿ ಯಶಸ್ವಿಯಾಗಿ ಬಳಸಲಾಗಿದ್ದು, ಭಾರತದಲ್ಲಿ ಈಗ ಮೊದಲ ಬಾರಿಗೆ ಎಸ್ ಐಟಿಯಿಂದ ಅಳವಡಿಸಲಾಗಿದೆ. ತನಿಖೆಯ ಸಂದರ್ಭದಲ್ಲಿ ವಿಡಿಯೊದಿಂದ ಸ್ಕ್ರೀನ್‌ಶಾಟ್‌ಗಳನ್ನು ತೆಗೆದುಕೊಂಡು ಅವುಗಳನ್ನು ಹೈ-ರೆಸಲ್ಯೂಶನ್ ಚಿತ್ರಗಳಾಗಿ ಪರಿವರ್ತಿಸಲಾಗುತ್ತದೆ. ನಂತರ, ಆರೋಪಿಯ ಖಾಸಗಿ ಅಂಗ, ಸೊಂಟ ಮತ್ತು ಕೈಯ ಫೋಟೋಗಳನ್ನು ಮೆಡಿಕಲ್ ಪ್ರಕ್ರಿಯೆಯ ಪ್ರಕಾರ ತೆಗೆದುಕೊಳ್ಳಲಾಗುತ್ತದೆ. ಈ ಫೋಟೋಗಳನ್ನು ಚರ್ಮವೈದ್ಯರು (ಡರ್ಮಟಾಲಜಿಸ್ಟ್‌ಗಳು) ಮತ್ತು ಮೂತ್ರಶಾಸ್ತ್ರಜ್ಞರು (ಯೂರಾಲಜಿಸ್ಟ್‌ಗಳು) ಪರಿಶೀಲಿಸುತ್ತಾರೆ. ವಿಡಿಯೋದಿಂದ ಪಡೆದ ಚಿತ್ರವನ್ನು ಆರೋಪಿಯ ಫೋಟೋದೊಂದಿಗೆ ಹೋಲಿಕೆ ಮಾಡಲಾಗುತ್ತದೆ. ಒಂದು ಭಾಗವಾದರೂ ಹೊಂದಿಕೆಯಾದರೆ, ವಿಡಿಯೊದಲ್ಲಿರುವ ವ್ಯಕ್ತಿಯ ಗುರುತನ್ನು ಖಚಿತಪಡಿಸಲು ಸಾಕ್ಷಿಯಾಗಿ ಪರಿಗಣಿಸಲಾಗುತ್ತದೆ.

### ಕೋರ್ಟ್ ತೀರ್ಪಿಗೆ ತಲೆ ಬಾಗಬೇಕು: ನಿಖಿಲ್

**ಚಿತ್ರದುರ್ಗ:** ಕೋರ್ಟ್ ತೀರ್ಪಿಗೆ ಯಾರೇ ಆದರೂ ತಲೆ ಬಾಗಬೇಕಾಗುತ್ತದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಆಗಿರುವ ಸಂಬಂಧ ಹಿರಿಯೂರು ತಾಲೂಕಿನ ಮಸ್ಕಲ್ ಬಳಿ ಸುದ್ದಿಗಾರರೊಂದಿಗೆ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು. ಪ್ರಜ್ವಲ್ ರೇವಣ್ಣ ವಿರುದ್ಧ ಸೆಷನ್ ಕೋರ್ಟ್‌ನಲ್ಲಿ ಆದೇಶ ಪ್ರಕಟಗೊಂಡಿದೆ. ಕೋರ್ಟ್ ತೀರ್ಪಿನ ಬಗ್ಗೆ ಹೆಚ್ಚಿನ ವಿಶ್ಲೇಷಣೆಯ ಅಗತ್ಯವಿಲ್ಲ ಎಂದಿದ್ದಾರೆ.

ಪ್ರಜ್ವಲ್ ಮೇಲೆ ಆರೋಪ ಬಂದ ತಕ್ಷಣ ಪಕ್ಷದಿಂದ ಅಮಾನತು ಮಾಡಲಾಗಿತ್ತು. ನಮ್ಮ ಪಕ್ಷದ ವರಿಷ್ಠರು ಪಕ್ಷದಿಂದ ಅಮಾನತಿನಲ್ಲಿಟ್ಟಿದ್ದರು. ಆಗ ಅಪರಾಧಿನೋ, ಅಲ್ಲವೋ ಎಂಬ ತೀರ್ಪು ಬಂದಿರಲಿಲ್ಲ. ವರಿಷ್ಠರ ತೀರ್ಮಾನದ ಸ್ಪಷ್ಟತೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಈ ವಿಷಯದ ಬಗ್ಗೆ ನಾನು ಪ್ರಯಿಕ್ರಿಯಿಸಲ್ಲ ಎಂದರು.

## ಎಸ್‌ಐಟಿ ತಂಡಕ್ಕೆ ಸಿಎಂ, ರಾಷ್ಟ್ರಪತಿ ಪದಕ ಶಿಫಾರಸು

**ಬೆಂಗಳೂರು:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅತ್ಯಾಚಾರ ಪ್ರಕರಣದಲ್ಲಿ ಐತಿಹಾಸಿಕ ತೀರ್ಪು ಹೊರಬಿದ್ದಿದ್ದು, ಈ ಪ್ರಕರಣದ ಯಶಸ್ವಿ ತನಿಖೆ ನಡೆಸಿದ ವಿಶೇಷ ತನಿಖಾ ತಂಡಕ್ಕೆ ಎಲ್ಲೆಡೆಯಿಂದ ಮೆಚ್ಚುಗೆ ವ್ಯಕ್ತವಾಗಿದೆ. ರಾಜ್ಯ ಸರಕಾರವು ತಂಡದ ಕಾರ್ಯವನ್ನು

ವಿಶೇಷವಾಗಿ ಶ್ಲಾಘಿಸಿದ್ದು, ಮುಖ್ಯಮಂತ್ರಿ ಪದಕ ನೀಡಿ ಗೌರವಿಸುವುದಾಗಿ ಗೃಹ ಸಚಿವ ಡಾ. ಜಿ. ಪರಮೇಶ್ವರ ಘೋಷಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವರು, ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ನ್ಯಾಯಾಲಯ ನೀಡಿರುವುದು ಐತಿಹಾಸಿಕ ತೀರ್ಪು. ಈ ತೀರ್ಪಿನ ಸಂಪೂರ್ಣ ಶ್ರೇಯಸ್ಸು ವಿಶೇಷ ತನಿಖಾ ತಂಡಕ್ಕೆ ಸಲ್ಲಬೇಕು. ಎಷ್ಟೇ ರಾಜಕೀಯ ಒತ್ತಡಗಳಿದ್ದರೂ ಅದಕ್ಕೆ ಮಣಿಯದೆ, ಅತ್ಯಂತ ಅಚ್ಚುಕಟ್ಟಾಗಿ ಮತ್ತು ವೃತ್ತಿಪರವಾಗಿ ತನಿಖೆ ನಡೆಸಿ, ನ್ಯಾಯಾಲಯಕ್ಕೆ ಸಮರ್ಪಕ ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ ತಂಡ ಯಶಸ್ವಿಯಾಗಿದೆ. ಸರಕಾರದ ವತಿಯಿಂದ ಇಡೀ ತಂಡಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ತನಿಖಾ ತಂಡದ ಈ ಮಹತ್ವದ ಸಾಧನೆಯನ್ನು ಗುರುತಿಸಿ, ಈ ವಿಶೇಷ ತನಿಖಾ ತಂಡಕ್ಕೆ ಮುಖ್ಯಮಂತ್ರಿ ಪದಕ ನೀಡಿ ಗೌರವಿಸಲಾಗುವುದು. ಅಷ್ಟೇ ಅಲ್ಲದೆ, ರಾಷ್ಟ್ರಪತಿ ಪದಕಕ್ಕೂ ಶಿಫಾರಸು ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

## ಶಿಕ್ಷೆ ಆಗಿರುವುದು ಬಿಜೆಪಿಗೇಕೆ ಮುಜುಗರ

**ಹುಬ್ಬಳ್ಳಿ:** ಪ್ರಜ್ವಲ್ ರೇವಣ್ಣಗೆ ಶಿಕ್ಷೆ ವಿಧಿಸಿದ್ದು ಬಿಜೆಪಿಗೇಕೆ ಮುಜುಗರ ಆಗುತ್ತೆ? ಕಾಂಗ್ರೆಸ್‌ನವರು ಯಾವ ಯಾವ

ಅಪರಾಧಿಗಳ ಜತೆ ಇದ್ರು ಗೊತ್ತಾ? ಖಲಿಸ್ತಾನಿ ಟೆರರಿಸ್ಟ್ ಜತೆ ರಾಹುಲ್ ಗಾಂಧಿ ಫೋಟೋ ಇದೆ ಎಂದು ಕಾಂಗ್ರೆಸ್ ನಾಯಕರ ಆರೋಪಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿರುಗೇಟು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ಆಗಿದೆ, ನಮಗೆ ಮುಜುಗರ ಯಾಕೆ ಆಗುತ್ತೆ? ಕಾಂಗ್ರೆಸ್‌ನವರು ಯಾವ ಯಾವ ಅಪರಾಧಿಗಳ ಜತೆ ಇದ್ರು, ಗೊತ್ತಾ? ಖಲಿಸ್ತಾನಿ ಟೆರರಿಸ್ಟ್ ಜತೆ ರಾಹುಲ್ ಗಾಂಧಿ ಫೋಟೋ ಇದೆ. ಯಾಸಿನ್ ಮಲ್ಲಿಕ್ ಜತೆ ಇಲ್ಲಿರುವವರ ಫೋಟೋ ಇದೆ. ಅವರದ್ದು ಸಪ್ರೇಟ್ ಪಕ್ಷ, ನಮ್ಮದು ಅಲೈನ್ಸ್ ಆಗಿದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಿದೆ ಎಂದು ಹೇಳಿದರು.

## ಪ್ರಜ್ವಲ್ ಕೈದಿ ನಂ.15528

← ಮೊದಲಪುಟದಿಂದ

ಶನಿವಾರ ತಡರಾತ್ರಿವರೆಗೂ ಪುರುಷ ಕೈದಿಗಳ ಬ್ಯಾರಕ್‌ನಲ್ಲಿ ಚಿಂತೆಯಲ್ಲಿ ಮುಳುಗಿದ್ದ ಅವರು, ರಾತ್ರಿ ಊಟವನ್ನೂ ಮಾಡದೆ ಮೌನವಾಗಿದ್ದು ಕೊಂಡೇ ದಿನದೂಡಿದರು. ಭಾನುವಾರ ಬೆಳಗ್ಗೆ 6.30 ರ ಸುಮಾರಿಗೆ ಎಚ್ಚರಗೊಂಡ ಅವರು, ನಿತ್ಯಕರ್ಮ ಮುಗಿಸಿ, ಬೇರೇನೂ ಮಾತನಾಡದೇ ಒಬ್ಬಂಟಿಯಾಗಿ ಕುಳಿತಿದ್ದರು. ಪರಪ್ಪನ ಅಗ್ರಹಾರ ಜೈಲಿನ ನಿಯಮಾನುಸಾರ, ಪ್ರಜ್ವಲ್ ರೇವಣ್ಣ ಈಗ ದಿನಕ್ಕೆ 8 ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ನೀಡಲಾದ ಕೆಲಸದ ಪ್ರಕಾರ ಪ್ರಾರಂಭದಲ್ಲಿ 524 ರು. ಸಂಬಳ ನೀಡಲಾಗುತ್ತದೆ. ನಂತರ ಅನುಭವದ ಮೇಲೆ ಅವರ ವರ್ಗವನ್ನೂ ನಿಗದಿಪಡಿಸಲಾಗುತ್ತದೆ.

**ಮೇಲ್ಮನವಿಗೆ ಸಿದ್ಧತೆ:** ಪ್ರಜ್ವಲ್‌ಗೆ ಜೀವಿತಾವಧಿ ಶಿಕ್ಷೆ ಘೋಷಣೆಯ ಬೆನ್ನಲ್ಲೇ ಪ್ರಜ್ವಲ್ ಕುಟುಂಬದ ಸದಸ್ಯರು ಶಿಕ್ಷೆಯ ಪ್ರಮಾಣವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ. ವಿಶೇಷ ನ್ಯಾಯಾಲಯ ನೀಡಿರುವ ತೀರ್ಪಿನ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ಪಡೆಯುತ್ತಿರುವ ಕುಟುಂಬ ಸದಸ್ಯರು, ಮುಂದಿರುವ ದಾರಿಗಳ ಬಗ್ಗೆ ಚರ್ಚಿಸಿ ಶೀಘ್ರವೇ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ. ತೀರ್ಪಿನ ಪ್ರತಿ ಪಡೆದು ಪ್ರಜ್ವಲ್ ಪರ ವಕಾಲತ್ತು ವಹಿಸಿದ್ದ ವಕೀಲರು ಹಾಗೂ ಕಾನೂನು ತಜ್ಞರೊಂದಿಗೆ ಯಾವ ರೀತಿ ಮೇಲ್ಮನವಿ ಸಲ್ಲಿಸಬೇಕು ಎಂಬ ವಿಚಾರದ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

**ವಿಡಿಯೊ ಹಂಚಿದವರಗೂ ನಡುಕ:** ಪ್ರಜ್ವಲ್ ರೇವಣ್ಣ ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗುತ್ತಿದ್ದಂತೆಯೇ, ಈ ಅಶ್ಲೀಲ ವಿಡಿಯೋ ಹಂಚಿದವರಿಗೆ ನಡುಕ ಶುರುವಾಗಿದೆ. ಅಶ್ಲೀಲ ವಿಡಿಯೋ ಹಂಚಿದವರ ವಿರುದ್ಧ ಎಸ್‌ಐಟಿ ಅಧಿಕಾರಿಗಳು ಚಾರ್ಜ್‌ಶೀಟ್ ಸಲ್ಲಿಸಲು ತಯಾರಿ ಮಾಡಿಕೊಂಡಿದ್ದಾರೆ. ಇದರಿಂದ ಆರೋಪಿಗಳಿಗೆ ಭಯ ಶುರುವಾಗಿದೆ. ಈ ನಡುವೆ ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿದ್ದ 6 ಪ್ರಕರಣಗಳ ತನಿಖೆಯನ್ನು ಎಸ್‌ಐಟಿ ಅಧಿಕಾರಿಗಳು ಮುಗಿಸಿದ್ದಾರೆ. ಹೊಳೆನರಸೀಪುರ ಪ್ರಕರಣದಲ್ಲಿ ಪ್ರಜ್ವಲ್‌ಗೆ ಜೀವಾವಧಿ ಶಿಕ್ಷೆಯಾಗಿದ್ದರೆ, ಸಿಐಡಿ ಸೈಬರ್ ಕ್ರೈಂನಡಿ ದಾಖಲಿಸಿರುವ ಪ್ರಕರಣ ವಿಚಾರಣಾ ಹಂತದಲ್ಲಿದೆ. ಈ ಪ್ರಕರಣದ ತೀರ್ಪು ಸದ್ಯವೇ ಹೊರಬೀಳುವ ನಿರೀಕ್ಷೆ ಇದೆ. ಮುಂದಿನ ವಾರ ಹಾಸನ ಜಿಲ್ಲೆ ಯಾದ್ಯಂತ ಪ್ರಜ್ವಲ್ ಬೇರೆ ಬೇರೆ ಮಹಿಳೆಯರ ಜತೆ ಇರುವ ಅಶ್ಲೀಲ ವಿಡಿಯೋ ಹಂಚಿದವರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲು ಮಾಡಲು ಎಸ್‌ಐಟಿ ಅಧಿಕಾರಿಗಳು ಮುಂದಾಗಿದ್ದಾರೆ. ಇದರಿಂದ ಪ್ರಭಾವಿಗಳಿಗೆ ನಡುಕ ಉಂಟಾಗಿದೆ.

**ತನಿಖಾ ತಂಡಕ್ಕೆ ಪದಕ:** ಈ ತೀರ್ಪಿನ ಸಂಪೂರ್ಣ ಶ್ರೇಯಸ್ಸು ವಿಶೇಷ ತನಿಖಾ ತಂಡಕ್ಕೆ ಸಲ್ಲಬೇಕು. ಎಷ್ಟೇ ರಾಜಕೀಯ ಒತ್ತಡಗಳಿದ್ದರೂ ಅದಕ್ಕೆ ಮಣಿಯದೆ, ಅತ್ಯಂತ ಅಚ್ಚುಕಟ್ಟಾಗಿ ಮತ್ತು ವೃತ್ತಿಪರವಾಗಿ ತನಿಖೆ ನಡೆಸಿ, ನ್ಯಾಯಾಲಯಕ್ಕೆ ಸಮರ್ಪಕ ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ ತಂಡ ಯಶಸ್ವಿಯಾಗಿದೆ. ತನಿಖಾ ತಂಡದ ಈ ಮಹತ್ವದ ಸಾಧನೆಯನ್ನು ಗುರುತಿಸಿ, ಈ ವಿಶೇಷ ತನಿಖಾ ತಂಡಕ್ಕೆ ಮುಖ್ಯಮಂತ್ರಿ ಪದಕ ನೀಡಿ ಗೌರವಿಸಲಾಗುವುದು. ಅಷ್ಟೇ ಅಲ್ಲದೆ, ರಾಷ್ಟ್ರಪತಿ ಪದಕಕ್ಕೂ ಶಿಫಾರಸು ಮಾಡಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದ್ದಾರೆ.

**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
ಎ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್
CIN No. L65923KA2006PLC040028
ನೋಂದಾಯಿತ ಕಛೇರಿ: ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್ #10/1, 11/2, 12/2B, ಡೊಮ್ಲೂರ್ ಆಫ್, ಕೋರಮಂಗಲ ಒಳವರ್ತುಲ ರಸ್ತೆ, EGL ಪಕ್ಕ , ಚಲ್ಲಘಟ್ಟ , ಬೆಂಗಳೂರು 560071

**19ನೇ ವಾರ್ಷಿಕ ಪ್ರಧಾನ ಸಭೆಯ ವೀಡಿಯೋ ಕಾನ್ಫರೆನ್ಸ್ 29ನೇ ಆಗಸ್ಟ್ 2025 ಶುಕ್ರವಾರದಂದು ನಡೆಯುವುದು**

1. ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಬ್ಯಾಂಕ್") ನ 19ನೇ ವಾರ್ಷಿಕ ಪ್ರಧಾನ ಸಭೆಯನ್ನು ("AGM") ಸಭೆಯ ನೋಟಿಸ್‌ನಲ್ಲಿ ನಿಗದಿಸಿದ ವಹಿವಾಟನ್ನು ನಡೆಸಲು ಸಿಕ್ಯುರಿಟೀಸ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ ("SEBI"), ಕಂಪನಿಗಳ ರಿಜಿಸ್ಟ್ರಾರ್ / ಮಿನಿಸ್ಟ್ರಿ ಆಫ್ ಕಾರ್ಪೊರೇಟ್ ಅಫೇರ್ಸ್ ಹೊರಟಿಸಿದ ಸುತ್ತೋಲೆಗಳು ಮತ್ತು ಶಾಸನಾತ್ಮಕ/ನಿಯಂತ್ರಕ ಪ್ರಾಧಿಕಾರಗಳು ಹೊರಡಿಸಿದ ಎಲ್ಲ ಅನ್ವಯಿಸುವ ಕಾನೂನುಗಳು, ಸುತ್ತೋಲೆಗಳು ಮತ್ತು ಸೂಚನೆಗಳ ಪ್ರಕಾರ ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಸಲಾಗುತ್ತದೆ.
2. AGM ದಿನಾಂಕ ಮತ್ತು ಸಮಯವು: ಶುಕ್ರವಾರ 29 ಆಗಸ್ಟ್ 2025, ಬೆಳಗ್ಗೆ 11:00 (ಭಾರತೀಯ ಕಾಲಮಾನ).
3. 2013 ರ ಕಂಪನಿಗಳ ಕಾಯ್ದೆಯ ವಿಭಾಗ 101 ಕ್ಕೆ ಅನುಗುಣವಾಗಿ, ಈ ಮೇಲಿನ ಸುತ್ತೋಲೆಗಳಿಗೆ ಪೂರಕವಾಗಿ 2024-25 ನೇ ಹಣಕಾಸು ವರ್ಷದ ನೋಟಿಸ್ ಮತ್ತು ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಬ್ಯಾಂಕ್/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್/ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ನಲ್ಲಿ ನೋಂದಾಯಿಸಿರುವ ಇಮೇಲ್ ವಿಳಾಸಗಳನ್ನು ಹೊಂದಿರುವ ಎಲ್ಲ ಷೇರುದಾರರಿಗೆ ಕಳುಹಿಸಲಾಗಿದೆ. ಮುಂದುವರಿದು, ಈ ಮೇಲೆ ಹೇಳಲಾದ ನೋಟಿಸ್ ಮತ್ತು ವಾರ್ಷಿಕ ವರದಿಯನ್ನು ಬ್ಯಾಂಕ್‌ನ ವೆಬ್‌ಸೈಟ್ www.janabank.com ಮತ್ತು ಷೇರು ವಿನಿಮಯ ಮಂಡಳಿಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.
4. ತಮ್ಮ ಇಮೇಲ್ ಐಡಿ, ಮೊಬೈಲ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಈ ಕೆಳಗಿನ ರೀತಿಯಲ್ಲಿ ನವೀಕರಿಸುವಂತೆ / ನೋಂದಾಯಿಸುವಂತೆ ಷೇರುದಾರರಿಗೆ ವಿನಂತಿಸಲಾಗಿದೆ:
   a. ಮುದ್ರಿತ ರೂಪದಲ್ಲಿ ಹೊಂದಿರುವ ಷೇರುಗಳಿಗೆ: ಬ್ಯಾಂಕ್‌ನಲ್ಲಿ ಷೇರುದಾರರು ಹೊಂದಿರುವ ಶೇರುಗಳ 100% ರಷ್ಟನ್ನು ಡಿಮಟೀರಿಯಲೈಸ್ಡ್ ವಿಧಾನದ ಮೂಲಕ ಹೊಂದಿರುವುದರಿಂದ ಅನ್ವಯಿಸುವುದಿಲ್ಲ.
   b. ಡಿಮಟೀರಿಯಲೈಸ್ಡ್ ವಿಧಾನದಲ್ಲಿರುವ ಷೇರುಗಳಿಗಾಗಿ: ಆಯಾ ಡೆಪಾಸಿಟರಿ ಪಾರ್ಟಿಸಿಪಂಟ್(ಗಳ) ಜೊತೆಗಿನ ವಿವರಗಳನ್ನು ನವೀಕರಿಸುವ ಮೂಲಕ.
5. ತಮ್ಮ ಇಮೇಲ್ ಐಡಿಗಳನ್ನು ಬ್ಯಾಂಕ್/ಆರ್‌ಟಿಎ/ಠೇವಣಿದಾರರಲ್ಲಿ ನೋಂದಣಿ ಮಾಡಿಕೊಳ್ಳದ ಷೇರುದಾರರಿಗೆ ವಾರ್ಷಿಕ ವರದಿಯ ಸಂಪೂರ್ಣ ವಿವರಗಳು ಇರುವ ನಿಖರ ಪಾಥ್ ಒಳಗೊಂಡಿರುವ ವೆಬ್ ಲಿಂಕ್ ಇರುವ ಪತ್ರವನ್ನು ಬ್ಯಾಂಕ್ ಕಳುಹಿಸುತ್ತದೆ.
6. ಕಂಪನಿಗಳ ಕಾಯ್ದೆ 2013 ರ ನಿಯಮಗಳಾದ 107 ಮತ್ತು 108 ಹಾಗೂ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು 2014 ರ ನಿಬಂಧನೆ 20 (ತಿದ್ದುಪಡಿ ಮಾಡಿದ ಪ್ರಕಾರ) ಮತ್ತು ಸೆಬಿ (ಲಿಸ್ಟಿಂಗ್ ಒಬ್ಲಿಗೇಷನ್ಸ್ ಅಂಡ್ ಡಿಸ್ಕ್ಲೋಸರ್ ರಿಕ್ವೈರ್ಮೆಂಟ್ಸ್) ನಿಯಮಾವಳಿ 2015 ರ ನಿಯಮಾವಳಿ 44 (ತಿದ್ದುಪಡಿ ಮಾಡಿದ ಪ್ರಕಾರ) ಮತ್ತು ಮಿನಿಸ್ಟ್ರಿ ಆಫ್ ಕಾರ್ಪೊರೇಟ್ ಅಫೇರ್ಸ್ ಪ್ರಕಟಿಸಿದ ಸುತ್ತೋಲೆಗಳ ಪ್ರಕಾರ, ಎಲೆಕ್ಟ್ರಾನಿಕ್ ರೂಪದಲ್ಲಿ ಎಜಿಎಂ ಸಮಯದಲ್ಲಿ ತಮ್ಮ ಮತ ಚಲಾವಣೆ ಮಾಡಲು ಸೌಲಭ್ಯವನ್ನು ಷೇರುದಾರರಿಗೆ ಬ್ಯಾಂಕ್ ಒದಗಿಸುತ್ತದೆ. ಎಜಿಎಂಗೂ ಮೊದಲು ರಿಮೋಟ್ ಇ-ಮತದಾನದ ಮೂಲಕವೂ ವಹಿವಾಟನ್ನು ನಡೆಸಬಹುದು ಮತ್ತು ರಿಮೋಟ್ ಇ-ಮತದಾನದ ವೇಳಾಪಟ್ಟಿಯು ಈ ಕೆಳಗಿನಂತಿದೆ:

| ವಿವರಣೆ | ದಿನಾಂಕ ಮತ್ತು ಸಮಯ |
|---|---|
| ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಮತದಾನದ ಪ್ರಾರಂಭದ ದಿನಾಂಕ ಮತ್ತು ಸಮಯ | ಮಂಗಳವಾರ, 26 ಆಗಸ್ಟ್ 2025 ಬೆಳಗ್ಗೆ 09:00 |
| ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಮತದಾನದ ಮುಕ್ತಾಯದ ದಿನಾಂಕ ಮತ್ತು ಸಮಯ | ಗುರುವಾರ, 28 ಆಗಸ್ಟ್ 2025 ಸಂಜೆ 05:00 |

ದಿನಾಂಕ: 04 ಆಗಸ್ಟ್ 2025
ಸ್ಥಳ: ಬೆಂಗಳೂರು

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ
ಲಕ್ಷ್ಮಿ ಆರ್ ಎನ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

# ವಿಶ್ವಸಂಸ್ಕೃತಿಯ ಮಹಾಯಾನ ಸಂಪುಟ ಮೂರು ಬಿಡುಗಡೆ

## ದಿಂಗಾಲೇಶ್ವರ ಸ್ವಾಮೀಜಿ-ಸಾಹಿತಿ ವೀರಣ್ಣ ರಾಜೂರ ಮಧ್ಯೆ ವೀರಶೈವ ಲಿಂಗಾಯತ ಧರ್ಮದ ಬಗ್ಗೆ ವಾದ-ಪ್ರತಿವಾದ

**ಬಾಗಲಕೋಟೆ:** ನಗರದ ಕಲಾಭವನದಲ್ಲಿ ಮಾಜಿ ಸಿಎಂ ಡಾ. ಎಂ.ವೀರಪ್ಪ ಮೊಯಿಲಿ ರಚಿಸಿರುವ ವಿಶ್ವಸಂಸ್ಕೃತಿ ಮಹಾಯಾನ ಸಂಪುಟ-3 ಕೃತಿ ಬಿಡುಗಡೆ ಕಾರ್ಯಕ್ರಮ ವೀರಶೈವ-ಲಿಂಗಾಯತ ಧರ್ಮದ ಬಗ್ಗೆ ಜಟಾಪಟಿಗೆ ವೇದಿಕೆಯಾಯಿತು.

ಬಾಡಗಂಡಿಯ ಎಸ್.ಆರ್.ಪಾಟೀಲ ಸಮೂಹ ಸಂಸ್ಥೆ ಹಾಗೂ ಬೆಂಗಳೂರಿನ ಸಪ್ನ ಬುಕ್ ಹೌಸ್‌ನಿಂದ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕೃತಿ ವಿಶ್ಲೇಷಿಸಿದ ಧಾರವಾಡದ ಡಾ. ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ವೀರಣ್ಣ ರಾಜೂರ ಹಾಗೂ ಗದಗ ಜಿಲ್ಲೆಯ ಬಾಲೆಹೊಸೂರಿನ ಫಕೀರ ದಿಂಗಾಲೇಶ್ವರ ಸ್ವಾಮೀಜಿ ನಡುವೆ ಜಟಾಪಟಿ ಏರ್ಪಟ್ಟಿತು.

ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ವೀರಣ್ಣ ರಾಜೂರ ಮಾತನಾಡುತ್ತ, ಡಾ.ಮೊಯಿಲಿ ಅವರ ಕೃತಿಯಲ್ಲಿ ವೀರಶೈವ-ಲಿಂಗಾಯತ ಎರಡೂ ಒಂದೇ ಎಂಬಂತೆ ಬಿಂಬಿಸಲಾಗಿದೆ. ಆದರೆ, ಲಿಂಗಾಯತ ಸ್ವತಂತ್ರ ಧರ್ಮ ಎಂಬುದು ನಿರ್ಣಯವಾಗಿದೆ ಎಂದು ಹೇಳಿದರು. ಇದಕ್ಕೂ ಮೊದಲು ಆಶಯ ನುಡಿಗಳನ್ನಾಡಿದ ಹಿರಿಯ ಪತ್ರಕರ್ತ ಡಾ.ಸರಜೂ ಕಾಟ್ಕರ್ ಅವರು ಸಹ, ಎರಡನ್ನೂ ಮೋಯಿಲಿ ಅವರು ಒಂದೇ ಎಂದು ಭಾವಿಸಿದಂತಿದೆ ಎಂದು ಹೇಳಿದ್ದರು.

ಫಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡುತ್ತ, ವೀರಣ್ಣ ರಾಜೂರ ಅವರು ಲಿಂಗಾಯತ ಪ್ರತ್ಯೇಕ ಎಂಬುದು ತೀರ್ಮಾನವಾಗಿದೆ ಎಂದು ಹೇಳಿದ್ದಾರೆ. ಅದು ಎಲ್ಲಿ ತೀರ್ಮಾನವಾಗಿದೆ? ಹಿಂದಿನ ಸಿದ್ದರಾಮಯ್ಯ ಸರಕಾರದ ಅವಧಿಯಲ್ಲಿ ಈ ಬಗ್ಗೆ ವಿವಾದ ಉಂಟಾದಾಗ ನಾನೂ ತೀವ್ರವಾಗಿ ವಿರೋಧಿಸಿದ್ದೆ. ಇದೇ

> ನನ್ನ ಕೃತಿಗಳಲ್ಲಿ ಮನಸ್ಸುಗಳನ್ನು ಜೋಡಿಸುವ ವಿಶ್ವಸಂಸ್ಕೃತಿಗೆ ಆದ್ಯತೆ ನೀಡಿದ್ದೇನೆ ವಿನಃ ವೀರಶೈವ-ಲಿಂಗಾಯತ ಪ್ರತ್ಯೇಕತೆ ಸೇರಿದಂತೆ ನಾಗರಿಕತೆ-ಇತಿಹಾಸದ ಸಂಘರ್ಷದಂಥ ವಿಚಾರಗಳಿಗೆ ಆಸ್ಪದ ನೀಡಿಲ್ಲ.
>
> -**ಡಾ.ಎಂ.ವೀರಪ್ಪ ಮೊಯಿಲಿ** ಕೃತಿ ರಚನೆಕಾರ



ಬಾಗಲಕೋಟೆ ಕಲಾಭವನದಲ್ಲಿ ಡಾ. ಎಂ.ವೀರಪ್ಪ ಮೊಯಿಲಿ ಅವರ ವಿಶ್ವಸಂಸ್ಕೃತಿ ಮಹಾಯಾನ ಸಂಪುಟ-3 ಕೃತಿಯನ್ನು ಗಣ್ಯರು ಬಿಡುಗಡೆಗೊಳಿಸಿದರು.

ಕಲಬುರ್ಗಿ ಅವರು, ರಾಜೂರ ಅವರು ವಚನ ಸಂಪುಟ ಕೃತಿಯಲ್ಲಿ ಮೋಯಿಲಿ ಅವರು ಹೇಳಿರುವುದನ್ನೇ ಹೇಳಿ, ಇಂದು ವೇದಿಕೆಯಲ್ಲಿ ಭಿನ್ನ ಹೇಳಿಕೆ ನೀಡಿದ್ದಾರೆ ಎಂದರು.

ಇದಕ್ಕೆ ಉತ್ತರಿಸಿದ ರಾಜೂರ ಅವರು, ವಚನ ಸಂಪುಟ ಒಂದು ಬಂದಾಗ ಎಲ್ಲವೂ ಮಿಶ್ರಣವಾಗಿತ್ತು. ನಂತರ ಪರಿಷ್ಕರಣೆ ಮಾಡುತ್ತ ಬದಲಾಯಿತು. ಈಗ 5ನೇ ಸಂಪುಟದಲ್ಲಿ ನೈಜಬಸವಣ್ಣನವರ ವಚನಗಳನ್ನು ನೀಡುತ್ತಿದ್ದೇವೆ ಎಂದರು. ಇದಕ್ಕೆ ಉತ್ತರಿಸಿದ ಸ್ವಾಮೀಜಿ, ಹಿಂದೆ ವಾಹಿನಿಯೊಂದರಲ್ಲಿ ನಾನು ಹಾಗೂ ಮಾತೆಮಹಾದೇವಿ ಅವರು ಮುಖಾಮುಖಿಯಾಗಿದ್ದೇವು. ಆಗ ಮಾತೆಮಹಾದೇವಿಯವರು ಎರಡೂ ಪ್ರತ್ಯೇಕ ಎಂದು ಹೇಳಿದಾಗ ನಿಮ್ಮ 40 ಕೃತಿಗಳಲ್ಲಿ ವೀರಶೈವ-ಲಿಂಗಾಯತ ಒಂದೇ ಎಂದು ಬರೆದಿದ್ದೀರಿ. ಈಗ ಹೀಗೆ ಹೇಳಿದರೆ ಓದಿದವರ ಗತಿಯೇನು ಎಂದು ಪ್ರಶ್ನೆ ಮಾಡಿದೆ ಆಗ ನನಗೆ ಬುದ್ಧಿ ಇರಲಿಲ್ಲ ಎಂದು ಅವರು ಅದಕ್ಕೆ ಉತ್ತರಿಸಿದರು.

ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಎಚ್.ಎಂ.ರೇವಣ್ಣ, ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್.ಷಾ, ಕೆ.ಎಂ.ನಾಗರಾಜ ಇದ್ದರು.

## ಸಮಾಚಾರ ಸಣ್ಣದಲ್ಲ

### ಬಾಲ್ಯವಿವಾಹ ಕೇಸ್: ನಾಪತ್ತೆಯಾಗಿದ್ದವ ಸೆರೆ

**ರಾಯಚೂರು:** ಪತಿಯನ್ನು ಪತ್ನಿಯೇ ನದಿಗೆ ತಳ್ಳಿದ ಆರೋಪ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಬಾಲ್ಯ ವಿವಾಹ ಪ್ರಕರಣದಲ್ಲಿ ಈಗ ಪತಿಯೇ ಬಂಧನ ಆಗಿದ್ದಾನೆ. ರಾಯಚೂರಿನ ಗುರ್ಜಾಪುರ ಬ್ಯಾರೇಜ್ ಬಳಿ ಪತ್ನಿಯೇ ಪತಿಯನ್ನು ಕೃಷ್ಣಾ ನದಿಗೆ ತಳ್ಳಿದ ಆರೋಪ ಪ್ರಕರಣಕ್ಕೆ ಟ್ವಿಸ್ಟ್ ಮೇಲೆ ಟ್ವಿಸ್ಟ್ ಸಿಕ್ಕು ಬಳಿಕ ಪತಿ ತಾತಪ್ಪ ಮೇಲೆ ಪೋಕ್ಸೊ ಹಾಗೂ ಬಾಲ್ಯ ವಿವಾಹ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆ ಆರೋಪಿ ತಾತಪ್ಪನನ್ನು ರಾಯಚೂರಿನಲ್ಲಿ ಪೊಲೀಸರು ಬಂಧಿಸಿದ್ದಾರೆ. ನಾಪತ್ತೆಯಾಗಿದ್ದ ತಾತಪ್ಪನನ್ನು ಪತ್ತೆ ಹಚ್ಚುವಲ್ಲಿ ಕೊನೆಗೂ ಪೊಲೀಸರು ಯಶಸ್ವಿಯಾಗಿದ್ದಾರೆ.

### ಲೈಂಗಿಕ ದೌರ್ಜನ್ಯ: ಮೂವರ ಬಂಧನ

**ಕೋಲಾರ:** ಅಪ್ರಾಪ್ತೆ ಮೇಲೆ ನಿರಂತರ 6 ಜನ ಪ್ರತ್ಯೇಕವಾಗಿ ಲೈಂಗಿಕ ದೌರ್ಜನ್ಯಎಸಗಿರುವ ಘಟನೆ ಕೋಲಾರ ಜಿಲ್ಲೆಯ ವೇಮಗಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರನ್ನು ರಾಹುಲ್, ನಾಗೇಶ್ ಹಾಗೂ ಪುನೀತ್ ಎಂದು ಗುರುತಿಸಲಾಗಿದೆ. ತಲೆಮರೆಸಿ ಕೊಂಡಿರುವ ಚೇತನ್, ಕಿರಣ್, ಮಹೇಂದ್ರಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಬಾಲಕಿ ನೀಡಿದ ಹೇಳಿಕೆ ಆಧರಿಸಿ ಆರು ಜನರ ವಿರುದ್ಧ ಜು.18 ರಂದು ಕೋಲಾರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

### ಯುವತಿಯ ಫೋಟೊ ಶೇರ್: ಹಲ್ಲೆ

**ಬಳ್ಳಾರಿ:** ತಂಗಿಯ ಜತೆಗಿದ್ದ ಫೋಟೋವನ್ನು ಇನ್‌ಸ್ಟಾದಲ್ಲಿ ಶೇರ್ ಮಾಡಿದ್ದಕ್ಕೆ ಗುಂಪು ಕಟ್ಟಿಕೊಂಡು ಬಂದು ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಬಳ್ಳಾರಿಯಲ್ಲಿ ನಡೆದಿದೆ. ದೊಡ್ಡಬಸವ (19) ಹಲ್ಲೆಗೊಳಗಾದ ಯುವಕ. ಶಶಿಕುಮಾರ್, ಸಾಯಿಕುಮಾರ್ ಸೇರಿ ಒಟ್ಟು 10 ಜನರಿಂದ ಹಲ್ಲೆ ನಡೆದಿದೆ. ಹಲ್ಲೆ ನಡೆಸಿದ ಯುವಕನೊಬ್ಬನ ತಂಗಿಯ ಜತೆ ಕಾರ್ಯಕ್ರಮ ಒಂದರಲ್ಲಿ ದೊಡ್ಡಬಸವ ಫೋಟೋ ತೆಗೆಸಿದ್ದ. ಅದನ್ನು ಇನ್‌ಸ್ಟಾದಲ್ಲಿ ಸ್ಟೇಟಸ್ ಹಾಕಿದ್ದ. ಇದೇ ಕಾರಣಕ್ಕೆ ಬೈಕ್‌ನಲ್ಲಿ ಐಟಿಐ ಕಾಲೇಜು ಮೈದಾನಕ್ಕೆ ಕರೆದೊಯ್ದು ಕ್ರಿಕೆಟ್ ಬ್ಯಾಟ್ ಹಾಗೂ ಬೆಲ್ಟ್‌ನಿಂದ ಅಮಾನುಷವಾಗಿ ಹಲ್ಲೆ ನಡೆಸಲಾಗಿದೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಹಲ್ಲೆ ನಡೆಸಿದವರೆಲ್ಲರು ಕಾಲೇಜು ವಿದ್ಯಾರ್ಥಿಗಳು ಎಂದು ತಿಳಿದು ಬಂದಿದೆ. ಈ ಸಂಬಂಧ ಬಳ್ಳಾರಿಯ ಕೌಲ್ ಬಜಾರ್ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

### ಕೈದಿ ಆತ್ಮಹತ್ಯೆ

**ಶಿವಮೊಗ್ಗ:** ಪತ್ನಿಯನ್ನು ಕೊಂದ ಆರೋಪದಡಿ ಇಲ್ಲಿನ ಕೇಂದ್ರ ಕಾರಾಗೃಹದಲ್ಲಿದ್ದ ವಿಚಾರಣಾಧೀನ ಕೈದಿಯೊಬ್ಬ ಶನಿವಾರ ಸಂಜೆ ಆತ್ಮಹತ್ಯೆಗೆ ಶರಣಾಗಿದ್ದಾನೆ. ಬಸವ ರಾಜ ಸಾವನ್ನಪ್ಪಿದವ. ಕಾರಾ ಗೃಹದ ಶರಾವತಿ ವಿಭಾಗದ ಕೊಠಡಿ ಸಂಖ್ಯೆ 42ರಲ್ಲಿ ಘಟನೆ ನಡೆದಿದೆ. ಅಸ್ವಸ್ಥಗೊಂಡ ಕೈದಿಗೆ ತಕ್ಷಣ ಗಸ್ತು ಸಿಬ್ಬಂದಿ ಜೈಲಿನ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ನಂತರ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದ್ದು, ಅಷ್ಟರಲ್ಲಿ ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಮುಂದಿನ ಕಾನೂನು ಪ್ರಕ್ರಿಯೆ ನಡೆಯಲಿದೆ ಎಂದು ಕಾರಾಗೃಹದ ಮುಖ್ಯ ಅಧಿಕ್ಷಕ ಡಾ.ಪಿ.ರಂಗನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿದ್ಯಾರ್ಥಿನಿ ಆತ್ಮಹತ್ಯೆ: ಪ್ರಕರಣ ದಾಖಲು

**ಕಲಬುರಗಿ:** ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ವಸತಿ ನಿಲಯದಲ್ಲಿ ದಲಿತ ವಿದ್ಯಾರ್ಥಿನಿಯ ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ಗುರುವಾರ ವಿದ್ಯಾರ್ಥಿನಿಯ ತಂದೆ ನರೋಣಾ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಕಾನೂನಾತ್ಮಕ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ. ಜುಲೈ 30 ರಂದು ಒಡಿಶಾ ಮೂಲದ ಸಿಯುಕೆ 5ನೇ ಸೆಮಿಸ್ಟರ್ ವಿದ್ಯಾರ್ಥಿನಿ ಜಯಶ್ರೀ ನಾಯಕ್(28) ವಸತಿ ನಿಲಯದ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಮೃತ ವಿದ್ಯಾರ್ಥಿನಿ ತಂದೆ ದುರ್ಯೋಧನ ನಾಯಕ್ ನೀಡಿರುವ ದೂರಿನ ಮೇರೆಗೆ ಬಿಎನ್‌ಎಸ್ ಕಾಯ್ದೆ 2023ಯಡಿ ನರೋಣಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
04.8.2025
ಸೋಮವಾರದ ಅತಿಥಿ

ಪ್ರೊ.ಸುತ್ತೂರು ಎಸ್ ಮಾಲಿನಿ
ವಿಷಯ
ಮಂತ್ರಗಳ ಮಹತ್ವ
vishwavani.news

# ಜಲ ಮೂಲದ ಪ್ರಕಾರ ಬಫರ್‌ಝೋನ್ ನಿರ್ಮಾಣ

## ದೇಶದಲ್ಲಿಯೇ ಮೊದಲ ಬಾರಿಗೆ ಈ ತಿದ್ದುಪಡಿಗೆ ಮುಂದಾದ ಸರಕಾರ
## ವಿವಿಧ ರಾಜ್ಯಗಳ ನಿಯಮಾವಳಿಗಳು ಅಧ್ಯಯನದ ಬಳಿಕ ತಿದ್ದುಪಡಿ

**ಬೆಂಗಳೂರು:** ದೇಶದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಜಲಮೂಲದ ಗಾತ್ರಕ್ಕೆ ಅನುಗುಣವಾಗಿ ಬಫರ್ ಝೋನ್ ನಿಯಮಾವಳಿಗಳನ್ನು ರೂಪಿಸುವ ಮಹತ್ವದ ತಿದ್ದುಪಡಿಗೆ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ ಮುಂದಾಗಿದೆ.

ಈ ಮಹತ್ವದ ತೀರ್ಮಾನಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿರುವ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ, ಸಾಮಾನ್ಯವಾಗಿ ಬಫರ್ ವಲಯಗಳು ಮಾನವ ಚಟುವಟಿಕೆ ಮತ್ತು ಸೂಕ್ಷ್ಮ ಪರಿಸರವನ್ನು ಹೊಂದಿರುವ ಜಲ ಸಂಪನ್ಮೂಲಗಳ ನಡುವೆ ತಡೆಗೋಡೆಯಾಗಿ ಹಾಗೂ ರಕ್ಷಣಾ ಪ್ರದೇಶವಾಗಿ ಕಾರ್ಯನಿರ್ವಹಿಸುತ್ತವೆ. ಏಕರೂಪ ಬಫರ್ ಝೋನ್‌ಗಳಿಂದ ಸಮಸ್ಯೆಯಾಗುತ್ತದೆ ಎನ್ನುವುದನ್ನು ಗಮನಿಸಿ ಗಾತ್ರಕ್ಕೆ ಅನುಗುಣವಾಗಿ ಬಫರ್‌ಝೋನ್ ಮಾಡಲು ತೀರ್ಮಾನಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

ರಾಜ್ಯದಲ್ಲಿ 1 ಗುಂಟೆಯಿಂದ 1000 ಎಕರೆಗಳವರೆಗೆ ವಿವಿಧ ಗಾತ್ರದ 41,849 ಕೆರೆಗಳಿವೆ. ಸಾರ್ವಜನಿಕ ಉಪಯೋಗಕ್ಕಾಗಿ ಕುಡಿಯುವ ನೀರಿನ ಪೈಪ್‌ಲೈನ್‌ಗಳು, ಭೂಗತ ವಿದ್ಯುತ್ ಕೇಬಲ್‌ಗಳು, ಪ್ರಮುಖ ರಸ್ತೆಗಳನ್ನು ಸಂಪರ್ಕಿಸುವ ರಸ್ತೆ ಮತ್ತು ಸೇತುವೆಗಳು, ಏತ ನೀರಾವರಿ ಯೋಜನೆಗಳು, ಜ್ಯಾಕ್ವೆಲ್ / ಪಂಪ್ ಹೌಸ್, ಕೊಳಚೆ ನೀರು ಶುದ್ಧೀಕರಣ ಘಟಕಗಳು ಮುಂತಾದ ಸಾರ್ವಜನಿಕ ಉಪಯೋಗ ಕಾಮಗಾರಿಗಳನ್ನು ಕೆರೆ ಬಫರ್‌ನಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಕೂಲಂಕುಷ ಪರಿಶೀಲನೆಯ ನಂತರ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ, ದೇಶದ ಇತರೆ ರಾಜ್ಯಗಳು ಅನುಸರಿಸಿರುವ ಕೆರೆ ಬಫರ್‌ಗಳನ್ನು ಪರಿಗಣಿಸಿ, ಕೆರೆಯ ಗಾತ್ರದ ಆಧಾರದ ಮೇಲೆ ಬಫರ್ ವಲಯವನ್ನು ಪ್ರಸ್ತಾಪಿಸಲಾಗಿದೆ ಎಂದು ಹೇಳಿದೆ.

ಈ ಬಫರ್ ಅಂತರವನ್ನು ರೂಪಿಸುವಾಗ ವೈಜ್ಞಾನಿಕ ದೃಷ್ಟಿಕೋನವನ್ನು ಅನುಸರಿಸಲಾಗಿದೆ. ಕೆರೆ ಬಫರ್ ಎಂದರೆ ಕೆರೆಯ ಸುತ್ತಲಿನ ಪ್ರದೇಶವು ಮಳೆ ನೀರನ್ನು ಕೆರೆಗೆ ಹರಿಯಲು ಅನುಕೂಲವಾಗುವಂತೆ ಮಾಡುವುದು. ಅನೇಕ ಸಂದರ್ಭಗಳಲ್ಲಿ, ಅದರಲ್ಲೂ ವಿಶೇಷವಾಗಿ ಉಡುಪಿ ಜಿಲ್ಲೆಯಲ್ಲಿ, ಹಳೆಯ ಬಫರ್ ಝೋನ್ ಪ್ರದೇಶವು ಕೆರೆಯ ಗಾತ್ರಕ್ಕಿಂತ ಹೆಚ್ಚಿತ್ತು. ಕರ್ನಾಟಕ ರಾಜ್ಯದಲ್ಲಿ ಮೊದಲು, ಕೆರೆಗಳ ಮೇಲೆ ಬಂಡೆ ನಿರ್ಮಿಸಲಾಗುತ್ತಿತ್ತು ಮತ್ತು ಸಾರ್ವಜನಿಕರು ತಮ್ಮ ಸಂಚಾರಕ್ಕಾಗಿ ಕೆರೆ ಬಂಡೆಯನ್ನು ರಸ್ತೆವಾಗಿ ಬಳಸುತ್ತಿದ್ದರು. ಹೀಗಾಗಿ, ಇದೇ ರೀತಿಯಲ್ಲಿ ಈ ಬಾರಿ ಕೆರೆಗಳ ಗಾತ್ರದ ಆಧಾರದ ಮೇಲೆ ಬಫರ್ ಝೋನ್ ನಿಗದಿಪಡಿಸಲಾಗಿದೆ - ಕೆರೆ ಸಣ್ಣದಾಗಿದ್ದರೆ ಕಡಿಮೆ ಬಫರ್ ಝೋನ್, ಕೆರೆ ದೊಡ್ಡದಾಗಿದ್ದರೆ ಹೆಚ್ಚು ಬಫರ್ ಝೋನ್ ನಿಗದಿಪಡಿಸಲಾಗಿದೆ.

**ವಿವಿಧ ರಾಜ್ಯಗಳಲ್ಲಿ ಸಮೀಕ್ಷೆ:** ಹಾಗೇ ನೋಡಿದರೆ, ಗುಜರಾತ್‌ನಲ್ಲಿ ಜಲಮೂಲಗಳ ಪ್ರದೇಶದಿಂದ ಒಂಬತ್ತು ಮೀ ಬಫರ್ ನಿಗದಿಪಡಿಸಲಾಗಿದೆ. ತೆಲಂಗಾಣದಲ್ಲಿ 10 ಹೆಕ್ಟೇರ್‌ಗಿಂತ ದೊಡ್ಡದಾದ ಕೆರೆಗೆ 30 ಮೀ ಮತ್ತು 9 ಹೆಕ್ಟೇರ್‌ಗಿಂತ ಕಡಿಮೆ ವಿಸ್ತೀರ್ಣದ ಕೆರೆಗೆ 9 ಮೀ ಬಫರ್ ನಿಗದಿಪಡಿಸಲಾಗಿದೆ. ತಮಿಳುನಾಡಿನಲ್ಲಿ ಏಕರೂಪವಾಗಿ ಕೆರೆಗಳ ಅಂಚಿನಿಂದ 3 ಮೀ ಬಫರ್ ಝೋನ್ ಅನುಸರಿಸಲಾಗಿದೆ. ಇನ್ನು ಕಾಲುವೆ ಬಫರ್ ವಲಯದ ವಿಷಯದಲ್ಲಿ, ಪ್ರಸ್ತುತ 30 ಮೀ (ಪ್ರಾಥಮಿಕ ಕಾಲುವೆ), 15 ಮೀ (ದ್ವಿತೀಯ ಕಾಲುವೆ), 10 ಮೀ (ತೃತೀಯ ಕಾಲುವೆ) ಅವೈಜ್ಞಾನಿಕವಾಗಿದ್ದು, ಅನೇಕ ಸಂದರ್ಭಗಳಲ್ಲಿ ಕಾಲುವೆಯ ಅಗಲವೇ ಬಫರ್‌ಗಿಂತ ಕಡಿಮೆಯಾಗಿದೆ. ಆದ್ದರಿಂದ, ಪ್ರಸ್ತಾವಿತ ವರದಿಯಲ್ಲಿ ಪ್ರಾಥಮಿಕ ಕಾಲುವೆ - 15 ಮೀ, ದ್ವಿತೀಯ ಕಾಲುವೆ - 10 ಮೀ ಹಾಗೂ ತೃತೀಯ ಕಾಲುವೆ - 5 ಮೀಗೆ ನಿಗದಿಪಡಿಸಲಾಗಿದೆ.

### ಪ್ರಸ್ತಾವಿತ ಬಫರ್ ಝೋನ್ ಎಷ್ಟು?

| ಕೆರೆಗಳ ವಿಸ್ತೀರ್ಣ | ಬಫರ್ ಜಾಗ |
|---|---|
| 5 ಗುಂಟೆವರೆಗೆ | 0 ಮೀಟರ್ |
| 5 ಗುಂಟೆಯಿಂದ 1 ಎಕರೆಯವರೆಗೆ | 03 ಮೀ.ಡಿಡಿ |
| 1 ಎಕರೆಯಿಂದ 10 ಎಕರೆಯವರೆಗೆ | - 06 ಮೀ. |
| 10 ಎಕರೆಯಿಂದ 25 ಎಕರೆ | 12 ಮೀ. |
| 25 ಎಕರೆಯಿಂದ 100 ಎಕರೆ | 24 ಮೀ. |
| 100 ಎಕರೆಗಿಂತ ದೊಡ್ಡದಾದ ಕೆರೆಗಳಿಗೆ | 30.0 ಮೀ. |



### ತಿದ್ದುಪಡಿಯಿಂದ ಲಾಭವೇನು?

- ಬಫರ್ ವಲಯದಲ್ಲಿ ಕೆರೆಯ ಸಾಮರ್ಥ್ಯವನ್ನು ಕುಗ್ಗಿಸದೆ ಹಾಗೂ ನೀರಿನ ಹರಿವಿಗೆ ಅಡ್ಡಿಪಡಿಸದಂತಹ ಸಾರ್ವಜನಿಕರಿಗೆ ಉಪಯೋಗವಾಗುವ ಯೋಜನೆಗಳನ್ನು ಮಾತ್ರ ಕೈಗೊಳ್ಳಲಾಗುತ್ತದೆ.
- ಹಲವಾರು ಪ್ರಕರಣಗಳಲ್ಲಿ ಕೆರೆ ಬಫರ್ ಝೋನ್ ಖಾಸಗಿ ಭೂಮಿಯಾಗಿದ್ದು, ನಿರ್ಮಾಣ ನಿಷೇಧ ವಲಯ ಎಂದು ಘೋಷಿಸಲಾಗಿದೆ.
- ತಿದ್ದುಪಡಿ ಮಾಡಿರುವುದು ರಿಯಲ್ ಎಸ್ಟೇಟ್ ಅಭಿವೃದ್ಧಿಗಲ್ಲ. ಕೆರೆಯ ಗಾತ್ರಕ್ಕೆ ಅನುಗುಣವಾಗಿ ಬಫರ್ ವಲಯಗಳಲ್ಲಿ ಏಕರೂಪತೆಯನ್ನು ನಿಗದಿಪಡಿಸುವ ಗುರಿಯನ್ನು ಹೊಂದಿದೆ.
- ಈ ತಿದ್ದುಪಡಿ ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ ಅಗತ್ಯಗಳ ನಡುವಿನ ಸಮತೋಲನವನ್ನು ಸಾಧಿಸುತ್ತದೆ.
- ಬಫರ್ ವಲಯದಲ್ಲಿ ನೀರು, ಒಳಚರಂಡಿ, ವಿದ್ಯುತ್ ಮುಂತಾದ ಉಪಯೋಗ ಜಾಲಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ.

## ಮೈಸೂರಿಗೆ ಇಂದು ದಸರಾ ಗಜಪಡೆ

**ಮೈಸೂರು:** 2025ರ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು ಆಗಸ್ಟ್ 4ರ ಸೋಮವಾರ ಅಭಿಮನ್ಯು ನೇತೃತ್ವದ ಆನೆಗಳ ತಂಡ ಮೈಸೂರಿಗೆ ಆಗಮಿಸಲಿವೆ. 9 ಆನೆಗಳ ಮೊದಲ ತಂಡ ಹುಣಸೂರು ತಾಲೂಕಿನ ವೀರನಹೊಸಹಳ್ಳಿಯಿಂದ ಮೈಸೂರಿನತ್ತ ಪಯಣ ಬೆಳೆಸಲಿವೆ.

ಮೊದಲ ತಂಡದ ಆನೆಗಳೊಂದಿಗೆ ಮೈಸೂರಿಗೆ ಆಗಮಿಸುವ ಗಜಪಡೆ ಹಾಗೂ ಅವುಗಳ ಪಾಲಕರ ವಾಸ್ತವ್ಯಕ್ಕಾಗಿ ಅರಮನೆ ಅಂಗಳದಲ್ಲಿ ಸಿದ್ಧತೆ ಸಾಗಿದ್ದು, 40ಕ್ಕೂ ಹೆಚ್ಚು ಶೆಡ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಮೊದಲ ತಂಡದಲ್ಲಿ 9 ಹಾಗೂ ಎರಡನೇ ತಂಡದಲ್ಲಿ 5 ಸೇರಿದಂತೆ ಒಟ್ಟು 14 ಆನೆಗಳು ಈ ಬಾರಿಯ ದಸರಾ ಮಹೋತ್ಸವದಲ್ಲಿ ಭಾಗಿಯಾಗಲಿವೆ. ಅರಮನೆ ಅಂಗಳದಲ್ಲಿರುವ ಖಾಯಂ ಕಾಂಕ್ರಿಟ್ ಪ್ಲಾಟ್ ಫಾರ್ಮ್ ಮೇಲೆ ಶೆಡ್‌ಗಳನ್ನು ನಿರ್ಮಿಸಲಾಗಿದೆ. ಇದರೊಂದಿಗೆ ಕುಡಿಯುವ ನೀರು, ತಾತ್ಕಾಲಿಕ ಶೌಚಗೃಹ ಇನ್ನಿತರ ಮೂಲಸೌಕರ್ಯ ಕಲ್ಪಿಸುವ ಕಾರ್ಯ ಭರದಿಂದ ಸಾಗಿದೆ.

ಅಭಿಮನ್ಯು, ಧನಂಜಯ, ಭೀಮ, ಕಂಜನ್, ಏಕಲವ್ಯ, ಪ್ರಶಾಂತ, ಕಾವೇರಿ, ಮಹೇಂದ್ರ ಹಾಗೂ ಲಕ್ಷ್ಮಿ ಆನೆಗಳು ಮೊದಲ ತಂಡದಲ್ಲಿ ಆಗಮಿಸಲಿವೆ. ಸೋಮವಾರ ಮಧ್ಯಾಹ್ನ 12.24ರಿಂದ 12.59ರೊಳಗೆ ಸಲ್ಲುವ ಶುಭ ಲಗ್ನದಲ್ಲಿ ಗಜಪೂಜೆ ನೆರವೇರಲಿದೆ. ನಂತರ ಗಣ್ಯರು ಪುಷ್ಪಾರ್ಚನೆ ಮಾಡಿ ಗಜಪಯಣಕ್ಕೆ ಚಾಲನೆ ನೀಡಲಿದ್ದಾರೆ.

## ಕೆಆರ್‌ಎಸ್‌ಗೆ ಟಿಪ್ಪು ಶಂಕು: ಹೇಳಿಕೆ ವಿವಾದ

**ಮಂಡ್ಯ:** ಕೆಆರ್‌ಎಸ್ ಡ್ಯಾಂಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂದು ಸಚಿವ ಹೆಚ್.ಸಿ. ಮಹದೇವಪ್ಪ ಹೇಳಿಕೆಗೆ ಈಗ ವಿವಾದ ಆಗಿದ್ದು, ಹೇಳಿಕೆಗೆ ಖಂಡನೆ ವ್ಯಕ್ತವಾಗಿದೆ.

ಶ್ರೀರಂಗಪಟ್ಟಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕನ್ನಂಬಾಡಿ ಕಟ್ಟೋದಕ್ಕೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದರು. ಆದರೆ, ಈಗ ಅದನ್ನು ಹೇಳೋಕೆ ಯಾರಿಗೂ ಧೈರ್ಯ ಇಲ್ಲ. ಕೆಆರ್‌ಎಸ್ ಗೇಟ್ ಹೆಬ್ಬಾಗಿಲಿನಲ್ಲಿ ಈಗಲೂ ಅದನ್ನು ಕಾಣಬಹುದು ಎಂದರು.

ಚರಿತ್ರೆ ಗೊತ್ತಿಲ್ಲದವರು ಚರಿತ್ರೆ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಟಿಪ್ಪು ಮಸೀದಿ ಇದೆ, ಪಕ್ಕದಲ್ಲಿ ದೇವಸ್ಥಾನ ಇದೆ. ಈಕಡೆ ಅಲ್ಲವೋ ಅಕ್ಬರ್ ಅಂತಾರೆ, ಆಕಡೆ ಗಂಟೆ ಟಣ್, ಟಣ್ ಅನ್ನುತ್ತೆ. ಎರಡನ್ನು ಕೇಳ್ತಿದ್ರು ಅವರು. ಟಿಪ್ಪು ಸಮಚಿತ್ತರಾಗಿದ್ದವರು. ದೇವದಾಸಿ ಪದ್ಧತಿಯನ್ನು ರದ್ದು ಮಾಡಿದರು. ಶೋಷಿತ ಮಹಿಳೆಯರನ್ನು ದೇವದಾಸಿ ಪದ್ಧತಿಗೆ ದೂಡಲಾಗುತ್ತಿತ್ತು. ಆ ಕಾಲದಲ್ಲೇ ದೇವದಾಸಿ ಪದ್ಧತಿ ರದ್ದು ಮಾಡಿದ್ದು ಟಿಪ್ಪು. ಅವರ ಕಾಲದಲ್ಲಿ ಒಂದೇ ಒಂದು ಇಂಚು ಭೂಮಿಯನ್ನು ಉಳ್ಳವರಿಗೆ ಕೊಟ್ಟಿರಲಿಲ್ಲ ಎಂದು ಹೇಳಿದರು.

### ಕಾಂಗ್ರೆಸ್ ನಾಯಕರಿಗೆ ಮಾಜಿ ಸಿಎಂ ಬೊಮ್ಮಾಯಿ ಸವಾಲು
### ರಾಜಕೀಯ ಉದ್ದೇಶಕ್ಕೆ ಸಾಂವಿಧಾನಿಕ ಸಂಸ್ಥೆ ಮೇಲೆ ಆರೋಪ ಸಲ್ಲ

# ಮತಗಳ್ಳತನಕ್ಕೆ ದಾಖಲೆ ಇದ್ದರೆ ಬಿಡುಗಡೆ ಮಾಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮತಗಳ್ಳತನದ ಹೆಸರಿನಲ್ಲಿ ಕಾಂಗ್ರೆಸ್ ರಾಜಕೀಯ ಉದ್ದೇಶಕ್ಕಾಗಿ ಸಾಂವಿಧಾನಿಕ ಸಂಸ್ಥೆ ಮೇಲೆ ಆರೋಪ ಮಾಡುವುದು ಸರಿಯಲ್ಲ. ದಾಖಲೆ ಇದ್ದರೆ ಕ್ಷಣವೂ ಕಾಯದೆ ಬಿಡುಗಡೆ ಮಾಡಲಿ, ಆಟಂ ಬಾಂಬ್ ಇದ್ದರೆ ಬಿಡಿ, ನಿಮಲ್ಲೆ ಇದ್ದರೆ ಅಲ್ಲೇ ಸ್ಫೋಟ ಆಗಬಹುದು ಎಂದು ಮಾಜಿ ಮುಖ್ಯಮಂತ್ರಿ ಬಸರವಾಜ ಬೊಮ್ಮಾಯಿ ಸವಾಲು ಹಾಕಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಗಳ್ಳತನದ ಹೆಸರಿನಲ್ಲಿ ಸಂವಿಧಾನ ಬದ್ಧ ಸಂಸ್ಥೆಗಳ ಮೇಲೆ ಸಂಶಯ ಬರುವಂತೆ ನಡೆದುಕೊಳ್ಳುತ್ತಿದೆ. ಮೊದಲು ಇವಿಎಂ ಮೇಲೆ, ಈಗ ಚುನಾವಣಾ ಆಯೋಗದ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಇವಿಎಂ ಹ್ಯಾಕ್ ಗೊಂದಲ ನಿವಾರಣೆಗೆ ಪ್ರಾತ್ಯಕ್ಷಿಕೆಗೆ ಕರೆದಾಗ ಕಾಂಗ್ರೆಸ್‌ನವರು ಬಂದಿಲ್ಲ. ರಾಜ್ಯ ಸರಕಾರದ ಅಧಿಕಾರಿಗಳೇ ರಾಜ್ಯದಲ್ಲಿ ಚುನಾವಣೆ ಮುಖ್ಯಸ್ಥರು. ರಾಜಕೀಯ ಪಕ್ಷಗಳಿಗೂ ಬೂತ್‌ಗಳಲ್ಲಿ ವ್ಯಕ್ತಿ ನೇಮಕಕ್ಕೆ ಅವಕಾಶ ಇದೆ. ಇದರಲ್ಲಿ ಚುನಾವಣಾ ಆಯೋಗ ಭಾಗಿ ಆಗಿದೆ ಅನ್ನುವುದು ಸರಿಯಲ್ಲ. ಮತದಾರರ ಹೆಸರು ಡಿಲೀಟ್ ಅಥವಾ ಸೇರ್ಪಡೆ ಆಗಿರುವ ಬಗ್ಗೆ ಅಂದೇ ಕೇಳಬೇಕಿತ್ತು ಎಂದು ಹೇಳಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ. ಮಂಜುನಾಥ್ ಚುನಾವಣೆ ವೇಳೆ ರಾಜಕೀಯಕ್ಕೆ ಬಂದವರು. ಚುನಾವಣೆ ಆಯೋಗದ ಮೇಲೆ ಆರೋಪ ಸರಿಯಲ್ಲ, ಅಧಿಕಾರಿಗಳ ಹಸ್ತಕ್ಷೇಪ ಇದ್ದರೆ ಸಾಕ್ಷಿ ಕೊಡಿ, ಚುನಾವಣಾ ಆಯೋಗದ ವಿಶ್ವಾಸರ್ಹತೆಗೆ ಧಕ್ಕೆ ತರುವ ಕೆಲಸ ಮಾಡಬಾರದು. ಚುನಾವಣಾ ಆಯೋಗ ಏನಾಗಿದೆ ಹೇಳಿ ಎಂದು ಕೇಳಿದೆ. ಆದರೆ, ಕಾಂಗ್ರೆಸ್ ಲಿಖಿತ ದೂರನ್ನೂ ಕೊಟ್ಟಿಲ್ಲ. ಇವಿಎಂ ಮೇಲಿನ ಆರೋಪಕ್ಕೆ ಕೋರ್ಟ್ ಉತ್ತರ ಕೊಟ್ಟಿದೆ. ನರೇಂದ್ರ ಮೋದಿ ಮೂರನೆ ಬಾರಿ ಪ್ರಧಾನಿ ಆಗಿದ್ದು, ಆ ಆಘಾತ ಕಾಂಗ್ರೆಸ್‌ಗೆ ಆಗಿದೆ. ಚುನಾವಣಾ ಆಯೋಗವೇ ಆರೋಪಿ ಎಂದು ಹೇಳುವ ಯತ್ನದಿಂದ ಸಂವಿಧಾನಕ್ಕೆ ಧಕ್ಕೆ ಯಾಗುವ ಸಾಧ್ಯತೆ ಇದೆ. ಆ ಕಾರಣಕ್ಕಾಗಿ ಬಿಜೆಪಿ ವಿರೋಧಿಸುತ್ತಿದೆ ಎಂದು ಹೇಳಿದರು.

### ಜಾರಿ ನಂಬಿಕೆಯಿಲ್ಲ

ಒಳಮೀಸಲಾತಿ ವರದಿ ಸಲ್ಲಿಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ವಿಚಾರದಲ್ಲಿ ಇವತ್ತಿಗೂ ಸಿಎಂ ಸಿದ್ದರಾಮಯ್ಯ ಪ್ರಾಮಾಣಿಕರಾಗಿಲ್ಲ. ಒಳಮೀಸಲಾತಿ ಜಾರಿಗೆ ಸಂವಿಧಾನ ತಿದ್ದುಪಡಿ ಆಗಬೇಕು ಅನ್ನುತ್ತಿದ್ದರು. ಕಳೆದ ವರ್ಷ ಸುಪ್ರೀಂಕೋರ್ಟ್ ತೀರ್ಪು ಬಂದ ಮೇಲೆ ಸುಮ್ಮನಾಗಿದ್ದಾರೆ 2013ರಿಂದಲೂ ಎಸ್ಸಿ ಸಮುದಾಯಗಳಿಗೆ ಕಾಂಗ್ರೆಸ್ ಮೂಗಿಗೆ ತುಪ್ಪ ಸವರಿಕೊಂಡೇ ಬಂದಿದೆ. ನಾಳೆ ವರದಿ ಸಲ್ಲಿಕೆ ಆಗಲಿದೆ, ಆದರೆ, ಈ ಸರಕಾರ ವರದಿ ಜಾರಿ ಮಾಡುತ್ತದೆ ಅನ್ನುವ ವಿಶ್ವಾಸ ಎಸ್ಸಿ ಸಮುದಾಯಕ್ಕೇ ಇಲ್ಲ. ಒಳಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ನಮ್ಮ ಮೇಲೆ ಆರೋಪ ಮಾಡುವ ಅಗತ್ಯ ಇಲ್ಲ. ನಾವು ಒಳಮೀಸಲಾತಿಗೆ ಸಂಪುಟ ಉಪಸಮಿತಿ ರಚನೆ ಮಾಡಿ ವರದಿ ಪಡೆದಿದ್ದೇವು. ಆದರೆ, ಇವರು ಸಂವಿಧಾನ ತಿದ್ದುಪಡಿ ಆಗಬೇಕು ಅಂತ ಸಬೂಬು ಕೊಡುತ್ತಿದ್ದರು. ಈಗ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆ ಜಾರಿ ಮಾಡಲೇಬೇಕು. ನ್ಯಾ. ನಾಗಮೋಹನ್ ದಾಸ್ ವರದಿ ಏನು ಹೇಳುತ್ತದೆ ನೋಡಬೇಕು. ಎಷ್ಟು ಪ್ರಮಾಣದಲ್ಲಿ ಒಳಮೀಸಲಾತಿ ಹಂಚುತ್ತಾರೆ ಅಂತ ನೋಡೋಣ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

> ಪ್ರಜ್ವಲ್ ರೇವಣ್ಣ ಅವರಿಗೆ ಜೀವಿತಾವಧಿ ಶಿಕ್ಷೆಯಾಗಿದೆ. ಎಲ್ಲವೂ ಕಾನೂನು ಪ್ರಕಾರ ಎಲ್ಲ ಆಗಿದೆ. ಇದರಲ್ಲಿ ಮಾತನಾಡುವಂತದ್ದು ಏನಿಲ್ಲ. ಆದರೆ ಈ ಘಟನೆಯಿಂದ ಬಿಜೆಪಿ-ಜೆಡಿಎಸ್ ಮೈತ್ರಿ ಮೇಲೆ ಯಾವುದೇ ಪರಿಣಾಮ ಬೀರಲ್ಲ.
> - ಬಸವರಾಜ ಬೊಮ್ಮಾಯಿ ಮಾಜಿ ಮುಖ್ಯಮಂತ್ರಿ

# ಕಿಡಿಗೇಡಿಗಳ ಕೃತ್ಯಕ್ಕೆ ಸಿಎಂ ಕಳವಳ

## ಮುಸ್ಲಿಮ್ ಶಿಕ್ಷಕನ ಎತ್ತಂಗಡಿ ಉದ್ದೇಶಕ್ಕೆ ನೀರಿಗೆ ಕೀಟನಾಶಕ ಬೆರಕೆ

**ಬೆಳಗಾವಿ:** ಮುಸ್ಲಿಮ್ ಶಿಕ್ಷಕನನ್ನು ಎತ್ತಂಗಡಿ ಮಾಡುವ ಉದ್ದೇಶದಿಂದ ಶಾಲಾ ಮಕ್ಕಳ ಕುಡಿಯುವ ನೀರಿಗೆ ಕೀಟನಾಶಕ ಹಾಕಿದ್ದ ಪ್ರಕರಣ ಖಂಡಿಸಿ ಸಿಎಂ ಸಿದ್ದರಾಮಯ್ಯ ಆಕ್ರೋಶ ಹೊರಹಾಕಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಸಿಎಂ, ಧಾರ್ಮಿಕ ಮೂಲಭೂತವಾದ, ಕೋಮುವೈಷಮ್ಯ ಎನ್ನುವುದು ಎಂತಹ ಹೀನ ಕೃತ್ಯವನ್ನೂ ಮಾಡಿಸಬಲ್ಲುದು ಎಂಬುದಕ್ಕೆ ಪುಟ್ಟಮಕ್ಕಳ ಮಾರಣ ಹೋಮಕ್ಕೆ ಕಾರಣವಾಗ ಬಹುದಾಗಿದ್ದ ಈ ಘಟನೆಯೇ ಸಾಕ್ಷಿ. ದಯೆಯೇ ಧರ್ಮದ ಮೂಲವಯ್ಯ ಎಂದು ಸಾರಿದ ಶರಣರ ನಾಡಿನಲ್ಲಿ ಈ ಮಟ್ಟಿನ ಕ್ರೌರ್ಯ, ದ್ವೇಷ ಹುಟ್ಟಲು ಸಾಧ್ಯವೇ? ಎಂಬುದನ್ನು ಈ ಕ್ಷಣಕ್ಕೂ ನನ್ನಿಂದ ನಂಬಲಾಗುತ್ತಿಲ್ಲ.

- ಬೆಳಗಾವಿ ಜಿಲ್ಲೆಯ ಹೂಲಿಕಟ್ಟಿ ಗ್ರಾಮದಲ್ಲಿ ಜುಲೈ 14 ರಂದು ನಡೆದಿದ್ದ ಘಟನೆ
- ಆರೋಪಿ ಸಾಗರ್ ಪಾಟೀಲ್, ಕೃಷ್ಣಾ ಮಾದರ್, ನಾಗನಗೌಡ ಪಾಟೀಲ್ ಬಂಧನ

ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ದ್ವೇಷ ಬಿತ್ತಿ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಬಿಜೆಪಿ ನಾಯಕರು ಒಮ್ಮೆ ತಮ್ಮ ಆತ್ಮವಿಮರ್ಶೆ ಮಾಡಿಕೊಳ್ಳಲಿ. ಈ ಘಟನೆಯ ಹೊಣೆಯನ್ನು ಪ್ರಮೋದ್ ಮುತಾಲಿಕ್ ಹೊರುವರೇ? ವಿಜಯೇಂದ್ರ ಹೊರುವರೇ? ಆರ್.ಅಶೋಕ್ ಹೊರುವರೇ? ಇಂಥವರು ಮಾಡುವ ಸಮಾಜಘಾತುಕ ಕೃತ್ಯಗಳಿಗೆ ಸದಾ ಬೆಂಬಲವಾಗಿ ನಿಲ್ಲುವ ನಾಯಕರು ಈಗ ಮುಂದೆ ಬಂದು ತಮ್ಮ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲಿ.

ಎಲ್ಲ ಬಗೆಯ ಮತೀಯವಾದ, ಮೂಲಭೂತವಾದಿತನಗಳು ಮನುಷ್ಯ ಸಮಾಜಕ್ಕೆ ಅಪಾಯಕಾರಿ. ದ್ವೇಷ ಭಾಷಣಗಳು, ಕೋಮು ಗಲಭೆಗಳ ತಡೆಗಾಗಿಯೇ ನಾವು ವಿಶೇಷ ಟಾಸ್ಕ್ ಫೋರ್ಸ್ ರಚನೆ ಮಾಡಿದ್ದೇವೆ, ಅಂಥವರ ವಿರುದ್ಧ ಕಾನೂನಿನ ಪರಿಧಿಯೊಳಗೆ ಸಾಧ್ಯವಾದ ಎಲ್ಲಾ ಕ್ರಮವನ್ನು ವಹಿಸುತ್ತಿದ್ದೇವೆ. ನಮ್ಮ ಎಲ್ಲಾ ಪ್ರಯತ್ನಗಳು ಫಲ ಕೊಡಬೇಕಾದರೆ ಸಾರ್ವಜನಿಕರೂ ಇಂಥಾ ಶಕ್ತಿಗಳ ವಿರುದ್ಧ ಧ್ವನಿಯೆತ್ತಬೇಕು, ಪ್ರತಿರೋಧ ಒಡ್ಡಬೇಕು, ದೂರು ದಾಖಲಿಸಬೇಕು. ನನಗೆ ಈಗಲೂ ನಂಬಿಕೆಯಿದೆ, ಕೋಮುವಾದಿಗಳ ಸಂಖ್ಯೆಗಿಂತ ಕೂಡಿ ಬಾಳಬೇಕೆಂದು ಬಯಸುವ ಜನರ ಸಂಖ್ಯೆ ನೂರು ಪಟ್ಟು ಹೆಚ್ಚಿದೆ. ಮಕ್ಕಳ ಹತ್ಯಾಕಾಂಡ ನಡೆಸುವ ದುಷ್ಟ ಹುನ್ನಾರವನ್ನು ಭೇದಿಸಿದ ಪೊಲೀಸ್ ಸಿಬ್ಬಂದಿಗಳಿಗೆ ಅಭಿನಂದನೆಗಳು. ಇಂಥ ಹೀನಕೃತ್ಯ ಎಸಗಿದ ದುರುಳರಿಗೆ ನ್ಯಾಯ ವ್ಯವಸ್ಥೆ ತಕ್ಕಶಿಕ್ಷೆ ನೀಡಲಿದೆ ಎಂಬ ಪೂರ್ಣ ವಿಶ್ವಾಸವಿದೆ ಎಂದಿದ್ದಾರೆ.

### ಅಸ್ವಸ್ಥರಾಗಿದ್ದ 11 ವಿದ್ಯಾರ್ಥಿಗಳು

ಶಾಲಾ ಮುಖ್ಯ ಶಿಕ್ಷಕ ಮುಸ್ಲಿಮ್ ಎಂಬ ಕಾರಣಕ್ಕೆ ಆತನನ್ನು ಶಾಲೆಯಿಂದ ಎತ್ತಂಗಡಿ ಮಾಡಿಸುವ ಉದ್ದೇಶದಿಂದ ಶಾಲಾ ಮಕ್ಕಳು ಕುಡಿಯುವ ನೀರಿನ ಟ್ಯಾಂಕ್‌ಗೆ ವಿಷ ಸೇರಿಸಿದ ಘಟನೆ ಸವದತ್ತಿ ತಾಲೂಕಿನ ಹೂಲಿಕಟ್ಟಿ ಗ್ರಾಮದಲ್ಲಿ ನಡೆದಿತ್ತು. ಹೂಲಿಕಟ್ಟಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 41 ಮಕ್ಕಳು ವ್ಯಾಸಾಂಗ ಮಾಡುತ್ತಿದ್ದು ಮುಖ್ಯ ಶಿಕ್ಷಕ ಸುಲೇಮಾನ್ ಗೋರಿನಾಯಕ್ ಕೆಲಸ ಮಾಡುತ್ತಿದ್ದಾರೆ. ಇವರನ್ನು ಎತ್ತಂಗಡಿ ಮಾಡಿಸುವ ಉದ್ದೇಶದಿಂದ ಗ್ರಾಮದ ಸಾಗರ್ ಪಾಟೀಲ್ ಎಂಬಾತ ಕೃಷ್ಣಾ ಮಾದರ್ ಎಂಬುವವನ ಕಡೆಯಿಂದ ಕೀಟನಾಶಕ ಪಡೆದು ಮಕ್ಕಳು ನೀರು ಕುಡಿಯುವ ಟ್ಯಾಂಕ್ ಗೆ ಬೆರೆಸಿದ್ದರು. ಕಳೆದ ಜುಲೈ 14 ರಂದು ಕೀಟನಾಶಕ ಬೆರೆಸಿದ್ದ ನೀರು ಕುಡಿದು ಅಸ್ವಸ್ಥರಾಗಿದ್ದ 11 ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಸಧ್ಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀರಿಗೆ ಕೀಟನಾಶಕ ಬೆರೆಸಿದ್ದ ಪ್ರಮುಖ ಆರೋಪಿ ಸಾಗರ್ ಪಾಟೀಲ್, ಕೃಷ್ಣಾ ಮಾದರ್, ಹಾಗೂ ನಾಗನಗೌಡ ಪಾಟೀಲ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

# ಅರ್ಥಪೂರ್ಣವಾಗಿ ಸಿಎಂ ಸಿದ್ದರಾಮಯ್ಯ ಜನ್ಮದಿನಾಚರಣೆ

## ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಿದ ಶಾಸಕ ಎಚ್.ವೈ.ಮೇಟಿ, ಹೊಳಬಸು ಶೆಟ್ಟರ

**ಬಾಗಲಕೋಟೆ:** ರಾಜ್ಯದ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರ 78ನೇ ಜನ್ಮದಿನವನ್ನು ಜಿಲ್ಲೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಿದ್ದರಾಮಯ್ಯ ಅವರ ಜನ್ಮದಿನದ ಅಂಗವಾಗಿ ಶಾಸಕ ಎಚ್.ವೈ. ಮೇಟಿ ಅವರ ಬಾಗಲಕೋಟೆ ಕಚೇರಿಯಲ್ಲಿ ಕೇಕ್ ಕಟ್ ಮಾಡಿ ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮಿಸಿದರು. ನಂತರ ಶಾಸಕ ಮೇಟಿ ನೇತೃತ್ವದಲ್ಲಿ ಜಿಲ್ಲಾಸ್ಪತ್ರೆಯಲ್ಲಿರುವ ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ಹಾಗೂ ಬಿಸ್ಕೇತ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಮುಖಂಡರಾದ ಎಸ್.ಎನ್.ರಾಂಪೂರ, ಮುತ್ತು ಜೋಳದ, ಸಿಕಂದರ್ ಅಥಣಿ, ರಜಾಕ್ ಬೆನೂರ ಸೇರಿದಂತೆ ನೂರಾರು ಕಾರ್ಯಕರ್ತರಿದ್ದರು.

ರೋಗಿಗಳಿಗೆ ಹಾಲು, ಹಣ್ಣು ವಿತರಣೆ:

ಸಿದ್ದರಾಮಯ್ಯ ಅವರ ಜನ್ಮದಿನದ ಅಂಗವಾಗಿ ಯುವ ಮುಖಂಡರಾದ ಹೊಳಬಸು ಶೆಟ್ಟರ ನೇತೃತ್ವದಲ್ಲಿ ಗುಳೇದಗುಡ್ಡದ ಸರಕಾರಿ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಣ್ಣು, ಹಾಲು ಹಾಗೂ ಬ್ರೆಡ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಸಂಗನಬಸಪ್ಪ ಚಿಂದಿ, ರಾಜು ತಾಪಡಿಯಾ, ನಾಗೇಶ ಪಾಗಿ, ಅಮಾತೆಪ್ಪ ಕೊಪ್ಪಳ, ಮಹಾಂತಯ್ಯ ಸರಗಣಾಚಾರಿ, ಚಂದ್ರಶೇಖರ ಪಟ್ಟಣಶೆಟ್ಟಿ, ಸ್ಥಾಯಿ ಸಮಿತಿಯ ಅಧ್ಯಕ್ಷ ಅಂಬು ಕವಡಿಮಟ್ಟಿ, ಪುರಸಭೆ ಸದಸ್ಯರಾದ ವಿಠ್ಠಲ ಕಾವಡೆ, ಶ್ಯಾಮ್ ಮೇಡಿ, ವಿನೋದ ಮದ್ದಾನಿ, ಶಂಕರ ಲಕ್ಕುಂಡಿ, ಶಿಲ್ಪಾ ನಾಗರಾಜ ಹಳ್ಳಿ, ಮಲ್ಲು ಆಲೂರ, ಶಿವನಯ್ಯ ಮಳ್ಳಿಮಠ, ವಿರೇಶ ಚಿಂದಿ, ಮೆಹಬೂಬ್ ಕಂಟ್ರಾಕ್ಟರ್, ಸಲೀಂ ಇಲಕಲ್ಲ, ರಂಗಪ್ಪ ಅಮರಣ್ಣವರ, ಪ್ರವೀಣ ಪವಾರ ಸೇರಿ ಇತರರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಜನ್ಮದಿನದ ಅಂಗವಾಗಿ ಗುಳೇದಗುಡ್ಡದ ಸರಕಾರಿ ಆಸ್ಪತ್ರೆಯ ರೋಗಿಗಳಿಗೆ ಯುವ ಮುಖಂಡ ಹೊಳಬಸು ಶೆಟ್ಟರ ಅವರು ಹಣ್ಣು, ಹಾಲು ಹಾಗೂ ಬ್ರೆಡ್ ವಿತರಿಸಿದರು.

### ಬನಶಂಕರಿ ದೇವಿಗೆ ವಿಶೇಷ ಪೂಜೆ

ರಾಜ್ಯದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಿಎಂ ಸಿದ್ದರಾಮಯ್ಯ ಹೆಚ್ಚಿನ ಆಯುರಾರೋಗ್ಯ ಕಲ್ಪಿಸಿ ಎಂದು ಹೊಳಬಸು ಶೆಟ್ಟರ ನೇತೃತ್ವದಲ್ಲಿ ಬಾದಾಮಿ ಸಮೀಪದ ಬನಶಂಕರಿ ದೇವಾಲಯದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಬಾದಾಮಿ ತಾಲೂಕು ಆಸ್ಪತ್ರೆಯ ರೋಗಿಗಳಿಗೆ ಹಣ್ಣು, ಹಾಲು ಹಾಗೂ ಬ್ರೆಡ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ಹನಮಂತಗೌಡ ಯಕಪ್ಪನವರ, ಹಿರಿಯರಾದ ಮುಚಖಂಡಯ್ಯ ಹಂಗರಗಿ, ಪಿ.ಆರ್.ಗೌಡರ, ಹನುಮಂತ ದೇವರಮನಿ, ಮಲ್ಲಣ್ಣ ಯಲಿಗಾರ, ರಾಜಮಹ್ಮದ್ ಬಾಗವಾನ್, ಶಶಿ ಉದಗಟ್ಟಿ, ರೇವಣಸಿದ್ದಪ್ಪ ನೋಟಗಾರ, ಸಣ್ಣಬೀರಪ್ಪ ಪೂಜಾರ, ಮುತ್ತಪ್ಪ ಗಾಜಿ, ಸಿದ್ದು ಹಾರಿನ, ಎಚ್.ಎಚ್.ವಡ್ಡರ, ಬಸವರಾಜ ಚಿರ್ಲಕೊಪ್ಪ, ಕರಿಗೌಡ ಮುಷ್ಟಿಗೇರಿ, ಸಕ್ರಪ್ಪ ತಪ್ಪಸಕಟ್ಟಿ, ಮಂಜು ಸೋಮನಕೊಪ್ಪ, ಚಂದ್ರಶೇಖರ ಉಂಡಿ, ಸಿದ್ದಪ್ಪ ಉದ್ದನವರ ಸೇರಿ ಇತರರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜನ್ಮದಿನದ ಅಂಗವಾಗಿ ಶಾಸಕ ಎಚ್.ವೈ.ಮೇಟಿ ನೇತೃತ್ವದಲ್ಲಿ ಬಾಗಲಕೋಟೆಯ ಜಿಲ್ಲಾಸ್ಪತ್ರೆಯ ರೋಗಿಗಳಿಗೆ ಹಾಲು, ಹಣ್ಣು ವಿತರಿಸಲಾಯಿತು.

ವಿಶ್ವವಾಣಿ

## ಸಂಪಾದಕೀಯ

# ಇದು ಹತಾಶೆಯ ಪರಮಾವಧಿ

ಭಾರತವನ್ನು ತಮ್ಮ ಕಣ್ಣ ಇಶಾರೆಗೆ ತಕ್ಕಂತೆ ಕುಣಿಸಿಬಿಡಬಹುದು ಎಂಬ ಭ್ರಮೆಯಲ್ಲಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಮತ್ತೆ ಮತ್ತೆ ಮುಖಭಂಗವಾಗುತ್ತಿದೆ. ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತಿಯಾಗಿ ಭಾರತವು ಪಾಕಿಸ್ತಾನದ ವಿರುದ್ಧ ಶುರುಹಚ್ಚಿಕೊಂಡಿದ್ದ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯು ನಿಲ್ಲುವಂತೆ ಮಾಡಿದ್ದು ತಾವೇ ಎಂದು ಡಾಣಾಡಂಗುರ ಬಾರಿಸಿಕೊಂಡು ಬಂದಿದ್ದರು ಟ್ರಂಪ್; ಆದರೆ ಈ ಸಂಘರ್ಷವು ಸ್ಥಗಿತಗೊಳ್ಳುವಲ್ಲಿ ಯಾವುದೇ ಅಂತಾರಾಷ್ಟ್ರೀಯ ನಾಯಕನ ಪಾತ್ರವಿಲ್ಲ ಎಂದು ಭಾರತ ಸ್ಪಷ್ಟೀಕರಣ ನೀಡುತ್ತಿದ್ದಂತೆ, 'ಭಾರತ ನನ್ನ ನಿರೀಕ್ಷೆಗೆ ತಕ್ಕಂತೆಯೇ ಬಾಗುತ್ತದೆ, ನಡೆದುಕೊಳ್ಳುತ್ತದೆ' ಎಂದು ಭಾವಿಸಿದ್ದ ಟ್ರಂಪ್‌ಗೆ ಮೊದಲ ಬಾರಿಗೆ ಮುಖಭಂಗವಾಯಿತು. ತೀರಾ ಇತ್ತೀಚೆಗೆ, 'ರಷ್ಯಾ ಮತ್ತು ಭಾರತದ ಆರ್ಥಿಕತೆಗಳು ಕುಸಿಯಲಿವೆ' ಎಂಬ ಭವಿಷ್ಯ ನುಡಿದು ಭಾರತವನ್ನು ದಿಕ್ಕೆಡಿಸಲು ಯತ್ನಿಸಿದ್ದೂ ಟ್ರಂಪ್ ಮಹಾಶಯರೇ; ಆದರೆ ಭಾರತದ ಆರ್ಥಿಕತೆಯು ಏರುಗತಿಯಲ್ಲಿರುವುದನ್ನು ಬಲ್ಲ ವಿಷಯ ತಜ್ಞರು, ಟ್ರಂಪ್‌ರ ಈ ಭವಿಷ್ಯವನ್ನು ಕೇಳಿ ನಕ್ಕರಷ್ಟೇ. ಇದು ಟ್ರಂಪ್‌ರಿಗಾದ ಎರಡನೇ ಮುಖಭಂಗ. ಇಷ್ಟಾಗಿದ್ದು ಸಾಲದೆಂಬಂತೆ, 'ಭಾರತ ಇನ್ನು ಮುಂದೆ ರಷ್ಯಾದಿಂದ ಕಚ್ಚಾತೈಲವನ್ನು ಖರೀದಿಸುವುದಿಲ್ಲ ಎಂಬುದು ನನಗೆ ತಿಳಿದುಬಂದಿದೆ' ಎಂಬ ಮತ್ತೊಂದು ಹಸಿಸುಳ್ಳನ್ನು ಉದುರಿಸಿದ್ದಾರೆ ಟ್ರಂಪ್! ಈ ಹೇಳಿಕೆಯನ್ನು ಭಾರತ ಸರಾಸಗಟಾಗಿ ತಳ್ಳಿಹಾಕಿದೆ ಎನ್ನಿ. 'ಅಮೆರಿಕವು ಭಾರತದ ಆಪ್ತಮಿತ್ರ' ಎಂದು ಕಾಗೆ ಹಾರಿಸುತ್ತಿದ್ದ ಟ್ರಂಪ್ ಈಗ, ಭಾರತದಿಂದ ಅಮೆರಿಕಕ್ಕೆ ಆಮದಾಗುವ ಸರಕು-ಸಾಮಗ್ರಿಗಳ ಮೇಲೆ ಆಗಸ್ಟ್ 1ರಿಂದ ಅನ್ವಯವಾಗುವಂತೆ ಶೇ.25ರಷ್ಟು ಸುಂಕವನ್ನು ಹೇರಿದ್ದಾರೆ. ಕಳೆದ ಕೆಲ ದಿನಗಳ ಬೆಳವಣಿಗೆಗಳನ್ನು ಗಮನಿಸಿದರೆ, ಟ್ರಂಪ್‌ರ ಹತಾಶೆಯು ಪರಮಾವಧಿಯನ್ನು ಮುಟ್ಟಿದೆ ಎಂಬುದು ಯಾರಿಗಾದರೂ ಅರ್ಥವಾಗುತ್ತದೆ. ವಿವಿಧ ರಂಗಗಳಲ್ಲಿ ಭಾರತವು ಸಾಧಿಸುತ್ತಿರುವ ಅನುಪಮ ಬೆಳವಣಿಗೆಯನ್ನು ಸಹಿಸಲಾಗದ ಕಾರಣಕ್ಕೆ ಮತ್ತು 'ವಿಶ್ವದ ದೊಡ್ಡಣ್ಣ' ಎಂಬ ಹಣೆಪಟ್ಟಿಯು ಅಮೆರಿಕದ ಶಿರದಿಂದ ಕಳಚಿಕೊಳ್ಳುವುದೇನೋ ಎಂಬ ಭಯದ ಕಾರಣಕ್ಕೆ ಹುಟ್ಟಿಕೊಂಡಿರುವ ಹತಾಶೆಯಿದು. ಅಮೆರಿಕಕ್ಕೆ ಹತಾಶೆಯಾಗುತ್ತದೆ ಅಂತ ಭಾರತವು ಅಭಿವೃದ್ಧಿ ಪಥದಿಂದ ಹಿಂದಡಿ ಇಡಲಾದೀತೆ?!!

## ಸೊಂಪಾದಕೀಯ

# ನಮಗೆ ಮದುವೆ ಬೇಡ ಸ್ವಾಮಿ

ಮದುವೆಗಳು ಸ್ವರ್ಗದಲ್ಲಿ ನಿಶ್ಚಯ ಆಗಿರುತ್ತವೆ ಅಂತಾರೆ. ಆದರೆ ಇನ್ನು ಕೆಲವರು 'ಮದುವೆಗಳು ಮನೆಗಳಲ್ಲಿ ನಿಶ್ಚಯವಾಗಿ, ಛತ್ರಗಳಲ್ಲಿ ನಡೆಯುತ್ತವೆ' ಅಂತಾರೆ. ಆದರೆ ಇತ್ತೀಚೆಗೆ ಛತ್ರಗಳಲ್ಲಿ ನಡೆಯಬೇಕಾದ ಮದುವೆಗಳೂ ನಡೆಯೋದು ಕಷ್ಟ ಅನ್ನೋ ಥರ ಆಗಿದೆ. ಎಲ್ಲ ಸುಸೂತ್ರವಾಗಿ ರೆಡಿ ಆದಮೇಲೂ ಕೊನೆಯ ಕ್ಷಣದಲ್ಲಿ ಕ್ಯಾನ್ಸಲ್ ಆಗುತ್ತಿವೆ. ಕೆಲ ತಿಂಗಳ ಹಿಂದೆ, ಇದೇ ರೀತಿ ಅಂತಿಮ ಕ್ಷಣದಲ್ಲಿ ವಧು ಮನಸ್ಸು ಬದಲಾಯಿಸಿದ್ದರಿಂದ ಮದುವೆಯೊಂದು ನಿಂತುಹೋಯಿತು. ಅಂದರೆ, ಆಗ ಬೇಕಾದ ಹುಡುಗನ ಜತೆ ಆಗದೆ, ಬೇರೊಬ್ಬನ ಜತೆ ಮದುವೆ ಆಯಿತು. ಹಿಂದಿನ ರಾತ್ರಿ ಕೂಡಾ ಯಾರಿಗೂ ಲಗ್ನಕ್ಕೆ ವಿಘ್ನ ಬರುತ್ತೆ ಅಂತ ಗೊತ್ತಾಗಿರಲಿಲ್ಲ. ಯಾಕಂದ್ರೆ ಆರತಕ್ಷತೆಯಲ್ಲೂ ವಧು ನೀಟಾಗಿ ಅಕ್ಷತೆ ಹಾಕಿಸಿಕೊಂಡು ಕಾರ್ಯಕ್ರಮ ಮುಗಿಸಿದ್ದಳು. ಮರುದಿನ ಹಸೆಮಣೆಯಲ್ಲಿ ವರನಿಂದ ತಾಳಿ ಕಟ್ಟಿಸಿಕೊಳ್ಳುವುದಕ್ಕೂ ತಯಾರಾಗಿದ್ದಳು. ಆದರೆ, ತಾಳಿ ಕಟ್ಟೋ ಸಮಯಕ್ಕೆ, 'ತಾಳಿ' ಅಂತ ಹುಡುಗಿಯ ಪ್ರಿಯಕರ ಎಂಟ್ರಿ ಕೊಟ್ಟ. ಅವನನ್ನು ನೋಡಿದ ವಧು, 'ನಂಗೆ ಈ ಮದ್ವೆ ಬೇಡ' ಅಂತ ವರಾತ ತೆಗೆದಳು. ಹಳೆಯ ಪ್ರೀತಿಯು ತಾಳಿ ಕಟ್ಟೋ ಸಮಯದಲ್ಲಿ ಮರುಕಳಿಸಿದ್ದಕ್ಕೆ ಮದುವೆ ಆಗೋ ಹುಡುಗನನ್ನು ಹೊರಗೆ ಕಳುಹಿಸಿ, ಪ್ರಿಯಕರನಿಂದಲೇ ತಾಳಿ ಕಟ್ಟಿಸಿಕೊಂಡಳು ಹುಡುಗನ ಕಡೆಯವರು, ''ನಿಮ್ಮ ಹುಡುಗಿಗಾಗಿ ನಾವು ಮಾಡಿದ ಖರ್ಚನ್ನು ಕೊಡಿ'' ಅಂತ ಖರ್ಚಿಗೆ ಕಾಸು ತೆಗೆದುಕೊಂಡವರಂತೆ ಅಲ್ಲಿಂದ ಹೊರಬಂದರು. ವರ ನಿರಾಶನಾದ. ಇದನ್ನೆಲ್ಲಾ ನೋಡಿದವರು, ''ಹುಡುಗ-ಹುಡುಗಿಯ ಜಾತಕ ನೋಡಿ, ಹಸೆಮಣೆ ಏರೋದು ಅಂತ ಫಿಕ್ಸ್ ಆಗಿದ್ದರೂ ತಾಳಿ ಕಟ್ಟುವ ಶುಭವೇಳೆ ಮುಗಿಯುವವರೆಗೂ ಮದುವೆ ಆಗೋದು ಗ್ಯಾರಂಟಿ ಇಲ್ಲ, ಯಾಕಂದ್ರೆ, ಎವ್ವೆರಿ ಡೇ ಈಸ್ ನಾಟ್ WEDnesday'' ಎಂದರಂತೆ!

## ಸಂಪಾದಕರ ಸದ್ಯಶೋಧನೆ

# ರನ್‌ವೇ ಎಕ್ಸ್‌ಕರ್ಷನ್ ಎಂದರೇನು?

ವಿಮಾನಯಾನವು ಆಧುನಿಕ ಸಾರಿಗೆಯ ಅತ್ಯಂತ ಸುರಕ್ಷಿತ ವಿಧಾನಗಳಲ್ಲಿ ಒಂದು ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ, ಈ ಸುರಕ್ಷತೆಯನ್ನು ಕಾಪಾಡಿಕೊಳ್ಳಲು ನಿರಂತರ ಪ್ರಯತ್ನಗಳು ಮತ್ತು ಸುಧಾರಣೆಗಳು ಅಗತ್ಯ. ವಿಮಾನಯಾನ ಸುರಕ್ಷತೆಯಲ್ಲಿ ಎದುರಾಗುವ ಪ್ರಮುಖ ಸವಾಲುಗಳಲ್ಲಿ 'ರನ್‌ವೇ ಎಕ್ಸ್‌ಕರ್ಷನ್' (Runway Excursion) ಕೂಡ ಒಂದು. ಇದು ವಿಮಾನವು ಟೇಕಾಫ್ ಅಥವಾ ಲ್ಯಾಂಡಿಂಗ್ ಸಮಯ ದಲ್ಲಿ ರನ್‌ವೇಯಿಂದ ಹೊರಗೆ ಚಲಿಸುವ ಘಟನೆ. ಇಂಥ ಘಟನೆಗಳು ವಿಮಾನಕ್ಕೆ ಹಾನಿ, ಪ್ರಯಾಣಿಕರಿಗೆ ಗಾಯಗಳು ಮತ್ತು ವಿಮಾನ ನಿಲ್ದಾಣದ ಕಾರ್ಯಾಚರಣೆಗಳಲ್ಲಿ ಅಡಚಣೆಗಳನ್ನು ಉಂಟುಮಾಡಬಹುದು. ರನ್‌ವೇ ಎಕ್ಸ್‌ಕರ್ಷನ್‌ಗಳನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. ಮೊದಲನೆಯದು, ಓವರ್‌ರನ್ (Overrun). ಇದು ವಿಮಾನವು ಲ್ಯಾಂಡಿಂಗ್ ಸಮಯದಲ್ಲಿ ರನ್‌ವೇಯ ನಿಗದಿತ ಅಂತ್ಯವನ್ನು ಮೀರಿ ಚಲಿಸುವ ಘಟನೆಯಾಗಿದೆ. ವಿಮಾನವು ರನ್‌ವೇಯ ಕೊನೆಯಲ್ಲಿ ನಿಲ್ಲಲು ಸಾಧ್ಯವಾಗದೆ, ರನ್‌ವೇಯಿಂದ ಹೊರಗೆ, ಸಾಮಾನ್ಯವಾಗಿ ರನ್‌ವೇ ಎಂಡ್ ಸೇಫ್ಟಿ ಏರಿಯಾ (RESA) ಅಥವಾ ಅದರಾಚೆಗೆ ಚಲಿಸುತ್ತದೆ. ಇದು ಸಾಮಾನ್ಯವಾಗಿ ವಿಮಾನದ ವೇಗ, ಬ್ರೇಕಿಂಗ್ ಸಾಮರ್ಥ್ಯ, ರನ್‌ವೇಯ ಸ್ಥಿತಿ (ಒದ್ದೆ, ಮಂಜುಗಡ್ಡೆ ಇತ್ಯಾದಿ) ಮತ್ತು ಪೈಲಟ್‌ನ ನಿರ್ಧಾರಗಳ ಮೇಲೆ ಅವಲಂಬಿತವಾಗಿರುತ್ತದೆ. ಎರಡನೆಯದು, ವೀರ್-ಆಫ್ (Veer-off). ಇದು ವಿಮಾನವು ಟೇಕಾಫ್ ಅಥವಾ ಲ್ಯಾಂಡಿಂಗ್ ಸಮಯದಲ್ಲಿ ರನ್‌ವೇಯ ಬದಿಗೆ ಚಲಿಸುವ ಘಟನೆಯಾಗಿದೆ. ವಿಮಾನವು ರನ್‌ವೇಯ ಮಧ್ಯರೇಖೆಯಿಂದ ವಿಚಲಿತವಾಗಿ, ರನ್‌ವೇಯ ಪಕ್ಕದ ಪ್ರದೇಶಕ್ಕೆ (ರನ್‌ವೇ ಸೈಡ್ ಸೇಫ್ಟಿ ಏರಿಯಾ- RSA) ಚಲಿಸುತ್ತದೆ. ಇದು ಸಾಮಾನ್ಯವಾಗಿ ಕ್ರಾಸ್‌ವಿಂಡ್ (ಅಡ್ಡಗಾಳಿ), ಎಂಜಿನ್ ವೈಫಲ್ಯ, ಬ್ರೇಕಿಂಗ್ ಸಮಸ್ಯೆಗಳು ಅಥವಾ ಪೈಲಟ್‌ನ ನಿಯಂತ್ರಣ ದೋಷಗಳಿಂದ ಸಂಭವಿಸಬಹುದು. ಈ ಎರಡೂ ವಿಧದ ಎಕ್ಸ್‌ಕರ್ಷನ್‌ಗಳು ವಿಮಾನಯಾನ ಸುರಕ್ಷತೆಗೆ ಗಂಭೀರ ಅಪಾಯವನ್ನುಂಟುಮಾಡುತ್ತವೆ. ಹಾಗಾದರೆ ರನ್‌ವೇ ಎಕ್ಸ್‌ಕರ್ಷನ್‌ಗೆ ಕಾರಣಗಳೇನು? ರನ್‌ವೇ ಎಕ್ಸ್‌ಕರ್ಷನ್‌ಗಳು ಒಂದೇ ಒಂದು ಕಾರಣದಿಂದ ಸಂಭವಿಸುವುದಿಲ್ಲ; ಬದಲಿಗೆ, ಇದು ಅನೇಕ ಅಂಶಗಳ ಸಂಯೋಜಿತ ಪರಿಣಾಮವಾಗಿದೆ. ಈ ಕಾರಣಗಳನ್ನು ಸ್ಥೂಲವಾಗಿ, ಮಾನವ ಅಂಶಗಳು, ಪರಿಸರ ಅಂಶಗಳು ಮತ್ತು ಯಾಂತ್ರಿಕ ಅಂಶಗಳು ಎಂದು 3 ಮುಖ್ಯ ವರ್ಗಗಳಾಗಿ ವಿಂಗಡಿಸಬಹುದು. ಮೊದಲನೆಯದಾಗಿ, ಮಾನವ ಅಂಶಗಳು (Human Factors). ಪೈಲಟ್ ದೋಷ (Pilot Error) ರನ್‌ವೇ ಎಕ್ಸ್‌ಕರ್ಷನ್‌ಗಳಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಪೈಲಟ್‌ಗಳು ಲ್ಯಾಂಡಿಂಗ್ ಅಥವಾ ಟೇಕಾಫ್ ಸಮಯದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಉದಾಹರಣೆಗೆ, ವಿಮಾನವು ರನ್‌ವೇ ಮೇಲೆ ಲ್ಯಾಂಡ್ ಆಗುವಾಗ ಅತಿ ಎತ್ತರದಲ್ಲಿ, ಅತಿ ವೇಗದಲ್ಲಿ, ಅಥವಾ ರನ್‌ವೇಯ ಮಧ್ಯರೇಖೆಯಿಂದ ವಿಚಲಿತವಾಗಿರುವುದು. ಇಂಥ ಅಸ್ಥಿರ ವಿಧಾನಗಳು ಪೈಲಟ್‌ಗೆ ವಿಮಾನವನ್ನು ನಿಯಂತ್ರಿಸಲು ಕಷ್ಟವಾಗಬಹುದು ಮತ್ತು ರನ್‌ವೇಯಿಂದ ಹೊರಗೆ ಹೋಗಲು ಕಾರಣವಾಗಬಹುದು. ವಿಮಾನವು ರನ್‌ವೇಯ ಆರಂಭಿಕ ಭಾಗದಲ್ಲಿ ಇಳಿಯುವ ಬದಲು, ಮಧ್ಯ ಅಥವಾ ಕೊನೆಯ ಭಾಗದಲ್ಲಿ ಇಳಿಯುವ ಮೂಲಕ ತಡವಾಗಿ ಲೇಟ್ ಟಚ್‌ಡೌನ್ (Late Touchdown) ಆಗಬಹುದು. ಇದರಿಂದ ವಿಮಾನಕ್ಕೆ ನಿಲ್ಲಲು ಸಾಕಷ್ಟು ರನ್‌ವೇ ಲಭ್ಯವಾಗುವುದಿಲ್ಲ. ಅಸಮರ್ಪಕ ಬ್ರೇಕಿಂಗ್ ತಂತ್ರಗಳು (Improper Braking Techniques) ಕೂಡ ಒಮ್ಮೊಮ್ಮೆ ಇದಕ್ಕೆ ಕಾರಣವಾಗಬಹುದು. ಲ್ಯಾಂಡಿಂಗ್ ನಂತರ ಬ್ರೇಕಿಂಗ್ ಅನ್ನು ಸರಿಯಾಗಿ ಅನ್ವಯಿಸದಿರುವುದು ಅಥವಾ ರಿವರ್ಸ್ ಥ್ರಸ್ಟ್ ಅನ್ನು ಪರಿಣಾಮಕಾರಿಯಾಗಿ ಬಳಸದಿರುವುದು ಸಹ ರನ್‌ವೇ ಎಕ್ಸ್‌ಕರ್ಷನ್‌ಗೆ ಕಾರಣವಾಗಬಹುದು. ಒಮ್ಮೊಮ್ಮೆ ಪೈಲಟ್‌ಗಳು ಅನಿವಾರ್ಯ ಸಂದರ್ಭಗಳಲ್ಲಿ ತಪ್ಪು ರನ್‌ವೇ ಆಯ್ಕೆ (Incorrect Runway Selection) ಮಾಡುವುದುಂಟು. ಪೈಲಟ್‌ಗಳು ತಪ್ಪಾದ ರನ್‌ವೇಯಲ್ಲಿ ಇಳಿಯಲು ಪ್ರಯತ್ನಿಸುವುದು, ಅದು ವಿಮಾನಕ್ಕೆ ಸೂಕ್ತವಲ್ಲದಿರಬಹುದು. ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಳಂಬ (Delayed Decision Making)ವೂ ಸಮಸ್ಯೆಯನ್ನುಂಟು ಮಾಡಬಹುದು. ಟೇಕಾಫ್ ಅನ್ನು ರದ್ದುಗೊಳಿಸುವ (rejected takeoff) ನಿರ್ಧಾರವನ್ನು ತಡವಾಗಿ ತೆಗೆದುಕೊಳ್ಳುವುದು ಅಪಾಯಕಾರಿ. ಏರ್ ಟ್ರಾಫಿಕ್ ಕಂಟ್ರೋಲ್ (ATC) ದೋಷಗಳು ಹಾಗೂ ಸೂಚನೆಗಳು ಸಹ ರನ್‌ವೇ ಎಕ್ಸ್‌ಕರ್ಷನ್‌ಗೆ ಕಾರಣವಾಗಬಹುದು. ಆದರೆ ಇದು ಅಪರೂಪ.

# ಇದು ಡಿಕೆಶಿ ಕ್ಯಾಂಪಿನ ಲೇಟೆಸ್ಟು ಚಿಂತೆ



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕ್ಯಾಂಪಿನಲ್ಲಿ ಅನುಮಾನ ಶುರುವಾಗಿದೆ. ಒಂದೆಡೆ, ಸಿಎಂ ಸಿದ್ದರಾಮಯ್ಯ ಅವರ ಜಾಗಕ್ಕೆ ಬರಲು ಡಿಕೆಶಿ ಕಸರತ್ತು ನಡೆಸುತ್ತಿದ್ದರೆ, ಮತ್ತೊಂದೆಡೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಾವೇ ಸಿಎಂ ಆಗಲು ಸಜ್ಜಾಗಿದ್ದಾರಾ ಎಂಬುದು ಈ ಅನುಮಾನ. ಪರಿಣಾಮ? ಸಿದ್ದರಾಮಯ್ಯ ಅವರ ಜಾಗಕ್ಕೆ ಬರಲು ಇದುವರೆಗೆ ಖರ್ಗೆಯವರ ನೆರವು ನಿರೀಕ್ಷಿಸುತ್ತಿದ್ದ ಡಿ.ಕೆ.ಶಿವಕುಮಾರ್, ಇನ್ನು ಮುಂದೆ ಪ್ರಿಯಾಂಕಾ ಗಾಂಧಿ ಅವರನ್ನಷ್ಟೇ ನೆಚ್ಚಿಕೊಳ್ಳುವುದು ಅನಿವಾರ್ಯ ಎಂಬುದು ಈ ಕ್ಯಾಂಪಿನ ಯೋಚನೆ.

ಅಂದ ಹಾಗೆ, ಡಿಕೆಶಿ ಕ್ಯಾಂಪಿಗೆ ಇಂಥ ಅನುಮಾನ ಮೂಡಲು ಸಿದ್ದು ಸಂಪುಟದ ಸಪ್ತ ಸಚಿವರ ಹೆಜ್ಜೆಗಳೇ ಕಾರಣ. ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಈ ಸಪ್ತ ಸಚಿವರ ಪಡೆ ಕೆಲ ದಿನಗಳ ಹಿಂದೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದೆ. ಅಷ್ಟೊತ್ತಿಗಾಗಲೇ ಸಿಎಂ ಸಿದ್ದರಾಮಯ್ಯ ಅವರು ದಿಲ್ಲಿಯಲ್ಲಿ ಕೂತು 'ನಾನೇ ಐದು ವರ್ಷ ಸಿಎಂ' ಅಂತ ಗುಟುರು ಹಾಕಿದ್ದರಲ್ಲ? ಈ ಸಂದರ್ಭದಲ್ಲಿ ಬೆಂಗಳೂರಿನಲ್ಲಿದ್ದ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿದ ಸಪ್ತ ಸಚಿವರ ಪಡೆ 'ಎಮ್ಮೆಲ್ಸಿ ಪಟ್ಟಿ'ಯ ಬಗ್ಗೆ ಚರ್ಚಿಸಿದೆ. ಇವತ್ತು ಅವಕಾಶ ವಂಚಿತ ಸಮುದಾಯಗಳಿಂದ ಬಂದವರಿಗೆ ಪಟ್ಟಿಯಲ್ಲಿ ಜಾಗ ನೀಡಬೇಕು ಅಂತ ಒತ್ತಾಯಿಸಿ ಎಂ.ಸಿ.ವೇಣುಗೋಪಾಲ್ ಸೇರಿದಂತೆ ಕೆಲ ಹೆಸರುಗಳನ್ನು ಸೂಚಿಸಿದೆ. ಮೂಲಗಳ ಪ್ರಕಾರ, ಈ ಸಂದರ್ಭದಲ್ಲಿ ಮಾತನಾಡಿದ ಕೆಲ ಸಚಿವರು, ''ಸರ್, ನಾಯಕತ್ವದ ವಿಷಯ ಬಂದಾಗ ನಾವು ಸಿದ್ದರಾಮಯ್ಯ ಅವರನ್ನು ಬೆಂಬಲಿಸುತ್ತೇವೆ. ಈ ವಿಷಯದಲ್ಲಿ ಅಂತಿಮವಾಗಿ ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ನಾವದನ್ನು ಒಪ್ಪುತ್ತೇವೆ. ಅದರೆ ಒಂದು ವಿಷಯ ನಿಮ್ಮ ಮನಸ್ಸಿನಲ್ಲಿರಲಿ- ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವುದೇ ಆದಲ್ಲಿ ಆ ಜಾಗಕ್ಕೆ ನೀವು ಬನ್ನಿ. ನಿಮ್ಮನ್ನು ನಾವು ಒಪ್ಪುತ್ತೇವೆ'' ಎಂದಿದ್ದಾರೆ.



ಈ ಸಂದರ್ಭದಲ್ಲಿ ಮಾತುಕತೆ ಬೇರೆ ಬೇರೆ ದಿಕ್ಕಿನತ್ತ ಹೊರಳಿ, 'ಐದು ವರ್ಷ ನಾನೇ ಸಿಎಂ' ಎಂಬ ಸಿದ್ದರಾಮಯ್ಯ ಅವರ ಸ್ಟೇಟ್‌ಮೆಂಟಿನತ್ತ ಅದು ಬಂದು ಮುಟ್ಟಿದೆ. ಆಗ ಫುಲ್ಲು ಸೀರಿಯಸ್ಸಾದ ಖರ್ಗೆಯವರು, ''ಯಾಕ್ರೀ ಲೀಡರ್‌ಶಿಪ್ ಬದಲಾಗಲ್ಲ?ನೋಡೋಣ. ಅವರು ಹೇಳಿದ್ದೇ ಫೈನಲ್ಲಾ?'' ಅಂತ ಪ್ರಶ್ನಿಸಿದ್ದಾರೆ. ಈ ಬೆಳವಣಿಗೆ ನಡೆದ ಕೆಲ ದಿನಗಳ ನಂತರ ಸಭೆಯೊಂದರಲ್ಲಿ ಪಾಲ್ಗೊಂಡ ಮಲ್ಲಿಕಾರ್ಜುನ ಖರ್ಗೆಯವರು 1999ರಲ್ಲಿ ನಡೆದ ಒಂದು ಎಪಿಸೋಡನ್ನು ಪ್ರಸ್ತಾಪಿಸಿ ಹಳಹಳಿಸಿದ್ದಾರೆ. ''ಅವತ್ತು ಸಿಎಲ್‌ಪಿ ನಾಯಕನಾಗಿ ನಾನು ದುಡಿದೆ. ಆದರೆ ಚುನಾವಣೆಗಿಂತ ಕೆಲ ತಿಂಗಳ ಮುಂಚೆ ಕೆಪಿಸಿಸಿ ಅಧ್ಯಕ್ಷರಾದ ಎಸ್.ಎಂ.ಕೃಷ್ಣ ಸಿಎಂ ಆದರು. ನನಗೆ ಅವಕಾಶ ತಪ್ಪಿ ಹೋಯಿತು'' ಅಂತ ನೋವಿನಿಂದ ಹೇಳಿದ್ದಾರೆ.

ಅಂದ ಹಾಗೆ, ತಮ್ಮ ನೋವನ್ನು ಖರ್ಗೆ ಅವರು ಬಹಿರಂಗವಾಗಿ ಹೇಳಿದ್ದು ಇದೇ ಮೊದಲಾದರೂ, ಅವರ ನೋವಿನ ಕತೆಯನ್ನು ಕೇಳದ ಕಾಂಗ್ರೆಸ್ ನಾಯಕರು ಅಪರೂಪ. ಯಾಕೆಂದರೆ ಇತ್ತೀಚೆಗೆ ದಿಲ್ಲಿಗೆ ಬಂದು ತಮ್ಮನ್ನು ಭೇಟಿಯಾದ ರಾಜ್ಯ ಕಾಂಗ್ರೆಸ್‌ನ ಬಹುತೇಕ ನಾಯಕರಿಗೆ ತಮ್ಮ ನೋವಿನ ಕತೆಯನ್ನು ಖರ್ಗೆ ವಿವರಿಸಿದ್ದಾರೆ. ಹೀಗೆ ಅವರು ತಮ್ಮ ನೋವನ್ನು ಆಪ್ತರ ಮುಂದೆ ಪದೇ ಪದೆ ಹೇಳಿಕೊಂಡಿದ್ದಾರೆ ಎಂದರೆ ಏನರ್ಥ? ಅವರಿಗೆ ಸಿಎಂ ಆಗುವ ಕನಸು ಉಳಿದಿದೆ ಅಂತ ತಾನೇ? ಆದರೆ ಇಷ್ಟು ಕಾಲ ತೆರೆಮರೆಯಲ್ಲಿ ತಮ್ಮ ನೋವಿನ ಕತೆ ಹೇಳುತ್ತಿದ್ದ ಖರ್ಗೆಯವರು ಈಗ ಬಹಿರಂಗವಾಗಿ ಮಾತನಾಡುತ್ತಿದ್ದಾರೆ ಎಂದರೆ ಸಿಎಂ ಪೋಸ್ಟಿಗೆ ಅವರು ಆಟ ಶುರು ಮಾಡಿದ್ದಾರೆ ಅಂತಲೇ ಅರ್ಥ ಎಂಬುದು ಡಿಕೆಶಿ ಕ್ಯಾಂಪಿನ ಮಾತು. ಹೀಗಾಗಿ ಅದು ಡಿಕೆಶಿ ಇಡುವ ಮುಂದಿನ ಹೆಜ್ಜೆಗಳ ಬಗ್ಗೆ ಚಿಂತೆಯಲ್ಲಿದೆ. ಯಾಕೆಂದರೆ ಸಿಎಂ ಹುದ್ದೆಯ ಮೇಲೆ ಕಣ್ಣಿಟ್ಟಿರುವ ಡಿಕೆಶಿ ಇದುವರೆಗೆ ದಿಲ್ಲಿ ಲೆವೆಲ್ಲಿನಲ್ಲಿ ಪಾನು ಉರುಳಿಸುತ್ತಿದ್ದಾಗ ಖರ್ಗೆ ಅವರ ಉಪಸ್ಥಿತಿ ಇರುತ್ತಿತ್ತು. ಆದರೆ ಈಗ ಖರ್ಗೆಯವರೇ ಖುದ್ದು ಪಾನು ಉರುಳಿಸಿದ್ದಾರೆ ಎಂದರೆ ಡಿಕೆಶಿ ಗೇಮ್‌ಪ್ಲಾನು ಬದಲಾಗಬೇಕು ಎಂಬುದು ಅದರ ವಾದ. ಪರಿಣಾಮ? ಕರ್ನಾಟಕದ ಸಿಎಂ ಹುದ್ದೆಯ ವಿಷಯದಲ್ಲಿ ಇದುವರೆಗೆ ಇಬ್ಬರು ಫೈಟು ಮಾಡುತ್ತಿದ್ದರು. ಆದರೆ ಅದೀಗ 'ಟ್ರಯಾಂಗಲ್ ಫೈಟ್' ಆಗಿ ಪರಿವರ್ತನೆಯಾಗಿದೆ ಎಂಬುದು ಆ ಕ್ಯಾಂಪಿನ ಗ್ರಹಿಕೆ.

## ವರಿಷ್ಠರು 'ಯೆಸ್' ಅನ್ನುತ್ತಾರಾ?

ಅಂದ ಹಾಗೆ, ಡಿಕೆಶಿ ಕ್ಯಾಂಪಿನ ಈ ಅನುಮಾನದ ನಡುವೆ ಖರ್ಗೆ ಸಿಎಂ ಆಗುವ ಸಾಧ್ಯತೆಗಳ ಬಗ್ಗೆ ಗುಸುಗುಸು ಶುರುವಾಗಿದೆ. ಕೆಲ ನಾಯಕರ ಪ್ರಕಾರ, ಖರ್ಗೆಯವರು ರಾಜ್ಯ ರಾಜಕಾರಣಕ್ಕೆ ಮರಳಲು ಬಯಸಿದರೆ ಕಾಂಗ್ರೆಸ್ ವರಿಷ್ಠರು ಒಪ್ಪಬಹುದು. ಯಾಕೆಂದರೆ ಪಕ್ಷ ನಿಷ್ಠೆ, ಅನುಭವ, ಹಿರಿತನಗಳೆಲ್ಲ ಖರ್ಗೆಯವರ ಪ್ಲಸ್ ಪಾಯಿಂಟುಗಳು ಎಂಬುದು ಇವರ ವಾದ. ಎಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಅವರನ್ನು ಬದಲಿಸಿದರೆ ಸರಕಾರ ಅಲುಗಾಡುತ್ತದೆ. ಅದು ಅಲುಗಾಡದೆ ಭದ್ರವಾಗಿರಬೇಕು ಎಂದರೆ ದಲಿತ ನಾಯಕರಾದ ಖರ್ಗೆಯವರನ್ನು ತಂದು ಕೂರಿಸಬೇಕು ಎಂಬುದು ಇವರ ಲೆಕ್ಕಾಚಾರ.

ಆದರೆ ಇನ್ನು ಕೆಲವರು ಈ ಮಾತನ್ನು ಒಪ್ಪುವುದಿಲ್ಲ. ಆಂಧ್ರದಲ್ಲಿ ಈ ಹಿಂದೆ ಹಿರಿಯ ನಾಯಕ ಕೆ.ರೋಸಯ್ಯ ಅವರನ್ನು ಸಿಎಂ ಮಾಡಿದ ಕ್ರಮವು ಪಕ್ಷಕ್ಕೆ ಲಾಭ ತರಲಿಲ್ಲ, ಹೀಗಾಗಿ ಕರ್ನಾಟಕದಲ್ಲಿ ಹಿರಿಯ ನಾಯಕರನ್ನು ತಂದು ಕೂರಿಸಲು ವರಿಷ್ಠರು ಬಯಸುವುದಿಲ್ಲ ಎಂಬುದು ಇವರ ಮಾತು. ಆದರೆ ಇಂಥ ಮಾತುಗಳೆಲ್ಲದರ ನಡುವೆ ಕೇಳಿ ಬರುತ್ತಿರುವ ಇನ್ನೊಂದು ವಾದವೆಂದರೆ, ಈ ಹಿಂದೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವೆ ಅಧಿಕಾರ ಹಂಚಿಕೆಯ ಒಪ್ಪಂದವಾಗಿದೆ ಎಂಬ ಮಾತಿಗಾಗಿ ನಾಯಕತ್ವ ಬದಲಾವಣೆಯ ಮಾತು ಚಾಲ್ತಿಯಲ್ಲಿದೆ. ಆದರೆ ಈ ಮೂಲ ವಿಷಯ ಇಂಪ್ಲಿಮೆಂಟ್ ಆಗುವುದಿಲ್ಲ ಎಂದರೆ ಸಿದ್ದರಾಮಯ್ಯ ಏಕೆ ಬದಲಾಗಬೇಕು? ಅವರು ಬದಲಾಗುವುದಿಲ್ಲ ಎಂದರೆ ಸರಕಾರ ಅಲುಗಾಡುವುದೇ ಇಲ್ಲವಲ್ಲ? ಎಂಬುದು.

ಹೀಗೆ ಇಂಥ ವಾದಗಳೇನೇ ಇರಲಿ, ಸಿದ್ದರಾಮಯ್ಯ ಅವರ ಪರವಾಗಿ ರಾಹುಲ್ ಗಾಂಧಿ ಮತ್ತು ಡಿಕೆಶಿ ಪರವಾಗಿ ಪ್ರಿಯಾಂಕಾ ಗಾಂಧಿ ನಿಂತಿರುವುದು ರಹಸ್ಯವೇನಲ್ಲ ಮತ್ತು ಸಿಎಂ ಆಗುವ ಆಟದಿಂದ ಡಿಕೆಶಿ ಯಾವ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ.

## ಬಿಜೆಪಿ ಭಿನ್ನರಿಗೆ ತಲೆನೋವು

ಈ ಮಧ್ಯೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಪದಚ್ಯುತಿಗೆ ಹವಣಿಸುತ್ತಿರುವ ಬಿಜೆಪಿ ಭಿನ್ನರ ಪಡೆಯು ದಿಲ್ಲಿಯತ್ತ ಮುಖ ಮಾಡಿ ಕುಳಿತಿದೆ. ಕಾರಣ? ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಯಾಗದೆ ಕರ್ನಾಟಕದ ಎಪಿಸೋಡು ಸೆಟ್ಲ್ ಆಗುವುದಿಲ್ಲ ಎಂಬ ಯೋಚನೆ.

ಅಂದ ಹಾಗೆ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಹಲ ತಿಂಗಳ ಹಿಂದೆಯೇ ಮುಗಿಯಬೇಕಿತ್ತು. ಆದರೆ ಆರೆಸ್ಸೆಸ್ ವರಿಷ್ಠರು ಪಕ್ಷಾಧ್ಯಕ್ಷ ಸ್ಥಾನಕ್ಕೆ ಶಿವರಾಜ್ ಸಿಂಗ್ ಚೌಹಾಣ್ ಬರಲಿ ಅಂತ ಪಟ್ಟು ಹಿಡಿದಿದ್ದರೆ, ಧರ್ಮೇಂದ್ರ ಪ್ರಧಾನ್ ಇಲ್ಲವೇ ಭೂಪೇಂದ್ರ ಯಾದವ್ ಬರಲಿ ಅಂತ ಮೋದಿ-ಅಮಿತ್ ಶಾ ಜೋಡಿ ಪಟ್ಟು ಹಿಡಿದಿದೆ. ಹೀಗೆ ಮೋದಿ-ಅಮಿತ್ ಶಾ ಜೋಡಿ ಮತ್ತು ಆರೆಸ್ಸೆಸ್ ನಡುವೆ ಫೈಟು ನಡೆಯುತ್ತಿರುವುದಕ್ಕೆ ವಿಶೇಷ ಕಾರಣಗಳೂ ಇವೆ. ಈ ಪೈಕಿ ಮೋದಿ-ಅಮಿತ್ ಶಾ ಅವರಿಗೆ, ಅದರಲ್ಲೂ ಅಮಿತ್ ಶಾ ಅವರಿಗೆ ಭವಿಷ್ಯದಲ್ಲಿ ಪ್ರಧಾನಿ ಹುದ್ದೆಗೇರುವ ಕನಸಿದೆ. ಇಂಥ ಕನಸು ಈಡೇರುವ ಕಾಲದಲ್ಲಿ ತಮಗೆ ಬೇಕಾದವರು ಪಕ್ಷದ ಅಧ್ಯಕ್ಷರಾಗಿರಬೇಕು ಎಂಬುದು ಅವರ ಯೋಚನೆ. ಒಂದು ವೇಳೆ ಹಾಗಾಗದೆ ಆರೆಸ್ಸೆಸ್ ಸೂಚಿಸಿದವರು ಅಧ್ಯಕ್ಷರಾದರೆ ತಮಗೆ ಅಡ್ಡಿಯಾಗುತ್ತದೆ. ಯಾಕೆಂದರೆ ಆರೆಸ್ಸೆಸ್ ವರಿಷ್ಠರಿಗೆ ಮೋದಿಯವರ ನಂತರ ನಿತಿನ್ ಗಡ್ಕರಿ ಇಲ್ಲವೇ ಯೋಗಿ ಆದಿತ್ಯನಾಥ್ ಪ್ರಧಾನಿಯಾಗಲಿ ಎಂಬ ಬಯಕೆ ಇದೆ. ಹೀಗಾಗಿ ಆರೆಸ್ಸೆಸ್ ಹೇಳಿದಂತೆ ಶಿವರಾಜ್‌ಸಿಂಗ್ ಚೌಹಾಣ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಬಂದರೆ ತಮಗೆ ಅಡ್ಡಿಯಾಗುತ್ತದೆ ಎಂಬುದು ಅಮಿತ್ ಶಾ ಚಿಂತೆ.

ಇನ್ನು ಮೋದಿ-ಅಮಿತ್ ಶಾ ಹೇಳಿದಂತೆ ಧರ್ಮೇಂದ್ರ ಪ್ರಧಾನ್ ಇಲ್ಲವೇ ಭೂಪೇಂದ್ರ ಯಾದವ್ ಅಧ್ಯಕ್ಷ ಸ್ಥಾನಕ್ಕೆ ಬಂದು ಕೂರುವುದು ಆರೆಸ್ಸೆಸ್ ವರಿಷ್ಠರಿಗೆ ಇಷ್ಟವಿಲ್ಲ. ಯಾಕೆಂದರೆ ಧರ್ಮೇಂದ್ರ ಪ್ರಧಾನ್ ಮತ್ತು ಭೂಪೇಂದ್ರ ಯಾದವ್ ಅವರಿಗೆ ಸಂಘ ನಿಷ್ಠೆಗಿಂತ ಮೋದಿ-ಅಮಿತ್ ಶಾ ಬಗ್ಗೆ ಹೆಚ್ಚು ನಿಷ್ಠೆ. ಹೀಗಾಗಿ ಅನಿವಾರ್ಯ ಸನ್ನಿವೇಶಗಳಲ್ಲಿ ಅವರು ಆ ಕಡೆಗೇ ವಾಲುತ್ತಾರೆ. ಕೀ ಪೋಸ್ಟುಗಳಲ್ಲಿ ಸಂಘನಿಷ್ಠರೇ ಇರಬೇಕು ಅಂತ ಈ ಹಿಂದೆ ಹೇಳಿದರೆ ಮೋದಿ-ಅಮಿತ್ ಶಾ ಜೋಡಿ ನಿರ್ಲಕ್ಷ್ಯ ಮಾಡಿತು. ಬೇರೆ ಪಕ್ಷದಿಂದ ವಲಸೆ ಬಂದ ಜೈದೀಪ್ ಧನಕರ್ ಅವರನ್ನು ರಾಜ್ಯಸಭೆಯ ಅಧ್ಯಕ್ಷ ಸ್ಥಾನಕ್ಕೆ ತಂದು ಕೂರಿಸಿತು. ಪಕ್ಷಕ್ಕೆ ಬಂದಾಗಿನಿಂದ ಧನಕರ್ ಅವರಿಗೆ ವಿವಿಧ ಹುದ್ದೆಗಳನ್ನು ದಯಪಾಲಿಸಿದ್ದ ಮೋದಿ-ಅಮಿತ್ ಶಾ ಜೋಡಿ ರಾಜ್ಯಸಭೆಯ ಅಧ್ಯಕ್ಷ ಸ್ಥಾನ ಕೊಡುವಾಗಲೂ ಮೈ ಮರೆಯಿತು. ಪರಿಣಾಮ? ಟೈಮು ನೋಡಿ ಧನಕರ್ ಬಿಜೆಪಿಯ ಬುಡಕ್ಕೇ ಬಿಸಿ ಕಾಯಿಸಿದರು! ಭವಿಷ್ಯದಲ್ಲಿ ಇಂಥ ಎಪಿಸೋಡು ಪುನರಾವರ್ತನೆ ಆಗಬಾರದು ಎಂದರೆ, ತಮ್ಮ ನಿಷ್ಠರಿಗಿಂತ ಸಂಘನಿಷ್ಠರಿಗೆ ಮೋದಿ-ಅಮಿತ್ ಶಾ ಆದ್ಯತೆ ಕೊಡಬೇಕು ಎಂಬುದು ಆರೆಸ್ಸೆಸ್‌ನ ಪಟ್ಟು. ಪರಿಣಾಮ? ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ವಿಳಂಬವಾಗುತ್ತಲೇ ಇದೆ. ಅರ್ಥಾತ್, ದಿಲ್ಲಿ ಎಪಿಸೋಡು ಮುಗಿಯದೆ ಕರ್ನಾಟಕದ ಎಪಿಸೋಡಿಗೆ ಚಾಲನೆ ಸಿಗುವುದಿಲ್ಲ ಎಂಬುದು ಬಿಜೆಪಿ ಭಿನ್ನರ ಚಿಂತೆ.

## ಜೋಡೆತ್ತುಗಳ ಬೆಂಬಲ ಬೇಕು

ಅಂದ ಹಾಗೆ, ದಿಲ್ಲಿಯತ್ತ ಕಣ್ಣುನೆಟ್ಟು ಕುಳಿತಿರುವ ಭಿನ್ನರಿಗೆ ವಿಜಯೇಂದ್ರ ಅವರ ಡ್ರಾಬ್ಯಾಕುಗಳು ಕಾಣುತ್ತಲೇ ಇವೆಯಂತೆ. ಎಲ್ಲಕ್ಕಿಂತ ಮುಖ್ಯವಾಗಿ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವ ಅವರಿಗೆ ಜೋಡೆತ್ತುಗಳ ಬೆಂಬಲವಿಲ್ಲ ಎಂಬುದು ಭಿನ್ನರ ಲೇಟೆಸ್ಟು ವರ್ಷನ್ನು.

ರಾಜ್ಯ ಬಿಜೆಪಿಯಲ್ಲಿ ಬಿ.ಬಿ.ಶಿವಪ್ಪ ಯುಗ ಮುಗಿದ ನಂತರ ಅಧ್ಯಕ್ಷರಾದ ಬಹುತೇಕ ಎಲ್ಲರಿಗೂ ಜೋಡೆತ್ತುಗಳ ಬೆಂಬಲವಿತ್ತು. ಅರ್ಥಾತ್, ಪಕ್ಷದ ಅಧ್ಯಕ್ಷರು ಯಾರೇ ಆಗಲಿ, ಬಹುತೇಕ ಸಂದರ್ಭಗಳಲ್ಲಿ ಯಡಿಯೂರಪ್ಪ ಮತ್ತು ಅನಂತಕುಮಾರ್ ಎಂಬ ಜೋಡೆತ್ತುಗಳ ಬೆಂಬಲ ಅವರಿಗಿರುತ್ತಿತ್ತು. ಅದು ಬಸವರಾಜ ಪಾಟೀಲ್ ಸೇಡಂ ಇರಲಿ, ಕೆ.ಎಸ್.ಈಶ್ವರಪ್ಪ ಇರಲಿ, ಜಗದೀಶ್ ಶೆಟ್ಟರ್, ಸದಾನಂದಗೌಡ, ಪ್ರಲ್ಹಾದ್ ಜೋಷಿ ಅವರಿರಲಿ, ಒಟ್ಟಿನಲ್ಲಿ ಈ ಎಲ್ಲರಿಗೂ ಯಡಿಯೂರಪ್ಪ ಮತ್ತು ಅನಂತಕುಮಾರ್ ಆಸರೆ ಇತ್ತು. ಈ ಮಧ್ಯೆ, ಯಡಿಯೂರಪ್ಪ ಮತ್ತು ಅನಂತಕುಮಾರ್ ಪಕ್ಷದ ಅಧ್ಯಕ್ಷರಾದ ಕಾಲದ ಬಗ್ಗೆ ಹೇಳುವುದೇ ಬೇಡ. ಯಾಕೆಂದರೆ ಪಕ್ಷ ಈ ಜೋಡೆತ್ತುಗಳ ಶಕ್ತಿಯಿಂದಲೇ ನಡೆಯುತ್ತಿತ್ತು. ಬಸವರಾಜ ಪಾಟೀಲ್ ಸೇಡಂ ಅಧ್ಯಕ್ಷರಾಗುವ ಕಾಲದಲ್ಲಿ ಹಿರಿಯ ನಾಯಕ ಎಂ.ಆರ್.ತಂಗಾ ಫೈಟು ಕೊಟ್ಟಿದ್ದರೂ ಯಡಿಯೂರಪ್ಪ ಸೇಡಂ ಜತೆ ನಿಂತಿದ್ದರು. ಸದಾನಂದಗೌಡರ ನಂತರ ನಳಿನ್ ಕುಮಾರ್ ಕಟೀಲ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ತರುವ ಬಯಕೆ ಸಂತೋಷ್ ಅವರಿಗಿತ್ತಾದರೂ ಅನಂತಕುಮಾರ್ ಬಲದಿಂದ ಪ್ರಲ್ಹಾದ ಜೋಷಿ ಅಟ್ಟ ಹತ್ತಿದ್ದರು.

ಮುಂದೆ ಅನಂತಕುಮಾರ್ ಯುಗ ಮುಗಿದ ನಂತರ ಸಂತೋಷ್ ಅವರು ಕಟೀಲರನ್ನು ಪ್ರತಿಷ್ಠಾಪಿಸಿದ ಕಾಲದಲ್ಲಿ ಯಡಿಯೂರಪ್ಪ ಮತ್ತು ಸಂತೋಷ್ ಬಲ ಕಟೀಲರ ಜತೆಗಿತ್ತು. ಹೀಗೆ ಹಿಂದಿನ ಅಧ್ಯಕ್ಷರಿಗೆ ಹೋಲಿಸಿದರೆ ಹಾಲಿ ಅಧ್ಯಕ್ಷರಿಗೆ ಬಲ ತುಂಬುವ ಜೋಡೆತ್ತುಗಳು ಇಲ್ಲ. ಯಡಿಯೂರಪ್ಪ ಅವರ ಆಸರೆ ಇದ್ದರೂ, ಸಕ್ರಿಯ ರಾಜಕಾರಣದಿಂದ ಅವರು ದೂರವಾಗಿದ್ದರಿಂದ ಪಕ್ಷ ಸಂಘಟನೆ ಮಾಡುವುದು ವಿಜಯೇಂದ್ರ ಅವರಿಗೆ ಕಷ್ಟ. ಇದೇ ರೀತಿ, ಈ ಹಿಂದೆ ಅನಂತಕುಮಾರ್ ಇದ್ದ ಜಾಗದಲ್ಲಿ ಬಿ.ಎಲ್.ಸಂತೋಷ್ ನೆಲೆಯಾಗಿದ್ದರೂ ಅವರು ವಿಜಯೇಂದ್ರರ ಪರವಾಗಿಲ್ಲ, ಹೀಗಾಗಿ ಜೋಡೆತ್ತುಗಳ ಬಲವಿಲ್ಲದ ವಿಜಯೇಂದ್ರ ಕೆಳಗಿಳಿಯಲಿ ಎಂಬುದು ಬಿಜೆಪಿ ಭಿನ್ನರ ವರ್ಷನ್ನು. ಅದರೆ ಇಂಥ ವರ್ಷನ್ನುಗಳೇನೇ ಇದ್ದರೂ ಮೌನವಾಗಿ ಕೆಲಸ ಮಾಡಿಕೊಂಡು ಹೋಗುವಂತೆ ಯಡಿಯೂರಪ್ಪ ಅವರು ವಿಜಯೇಂದ್ರ ಅವರಿಗೆ ಹೇಳಿದ್ದಾರಂತೆ. ಪರಿಣಾಮ? ವಿಜಯೇಂದ್ರ ಅವರು ತಮ್ಮ ಪಾಡಿಗೆ ತಾವು ಸರಕಾರದ ವಿರುದ್ಧದ ಸರಣಿ ಹೋರಾಟಗಳಲ್ಲಿ ಮುಳುಗಿದ್ದಾರೆ.

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಎಲ್ಲರೂ ಸಮಾನರು

ಮಹಿಳೆಯರ ಮೇಲಿನ ಅತ್ಯಾಚಾರ ಕೃತ್ಯವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಈಗ ಜೈಲುಪಾಲಾಗುವಂತಾಗಿದೆ. ಈ ಪ್ರಕರಣದಲ್ಲಿ ಹೊಮ್ಮಿದ ತೀರ್ಪಿನಿಂದಾಗಿ ನಮ್ಮ ತನಿಖಾ ವ್ಯವಸ್ಥೆ, ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗದ ಮೇಲಿನ ಸಾರ್ವಜನಿಕರ ನಂಬಿಕೆ ಮತ್ತಷ್ಟು ಹೆಚ್ಚಿದೆ. ಆರೋಪಿಗಳು ಎಷ್ಟೇ ಪ್ರಭಾವಿಗಳಾಗಿದ್ದರೂ, ನ್ಯಾಯ ಎಲ್ಲರಿಗೂ ಸರಿಸಮಾನ ಎಂಬುದು ಈ ಪ್ರಕರಣದಿಂದ ಸಾಬೀತಾಗಿದೆ. ತನಿಖೆ ಪ್ರಾರಂಭವಾದಾಗ, ಈ ಪ್ರಕರಣ ಮುಚ್ಚಿಹೋಗಬಹುದು ಎಂದೇ ಬಹುತೇಕ ಜನರು ಭಾವಿಸಿದ್ದರು. ಆದರೆ ಪ್ರಕರಣದ ದಕ್ಷ ನಿರ್ವಹಣೆಯಿಂದಾಗಿ ಆರೋಪಿಗೆ ಜೀವಾವಧಿ ಜೈಲುಶಿಕ್ಷೆಯಾಗಿದೆ. ಇದು ಸತ್ಯಕ್ಕೆ ಮತ್ತು ನ್ಯಾಯಕ್ಕೆ ದೊರೆತ ಜಯ ಎಂದೇ ಹೇಳಬಹುದು. ದುರುಳರಿಗೆ, ಅತ್ಯಾಚಾರಿಗಳಿಗೆ ಇನ್ನು ಮುಂದೆ ಇದು ಪಾಠವಾಗಬಹುದು.

**- ಬೂಕನಕೆರೆ ವಿಜೇಂದ್ರ, ಮೈಸೂರು**

### ನ್ಯಾಯ ಇಲ್ಲಿದೆ...

ಮಾಜಿ ಪ್ರಧಾನಿಗಳ ಮೊಮ್ಮಗ ಹಾಗೂ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅತ್ಯಾಚಾರ ಅಪರಾಧ ಕೃತ್ಯವು ಸಾಬೀತಾಗಿ ಘನ ನ್ಯಾಯಾಲಯವು ಶಿಕ್ಷೆಯನ್ನು ಪ್ರಕಟಿಸಿದೆ. ಸದರಿ ಪ್ರಕರಣವನ್ನು ಆಮೂಲಾಗ್ರವಾಗಿ ಕೆದಕಿದ ತನಿಖಾ ತಂಡಕ್ಕೆ, ಸರಕಾರಿ ವಕೀಲರಿಗೆ ಮತ್ತು ತನಿಖೆಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟ ಆಡಳಿತ ವ್ಯವಸ್ಥೆಗೆ ನಮನಗಳನ್ನು ಸಲ್ಲಿಸಬೇಕು. ಅಪರಾಧಿಯ ಆರ್ಥಿಕ ಮತ್ತು ಅಧಿಕಾರದ ಹಿನ್ನೆಲೆಯನ್ನು ಬದಿಗಿಟ್ಟು, ಕೇವಲ ಅಪರಾಧವನ್ನು ಪರಿಗಣನೆಗೆ ತೆಗೆದುಕೊಂಡು ಸೂಕ್ತ ಶಿಕ್ಷೆ ವಿಧಿಸಿದ ನ್ಯಾಯಮೂರ್ತಿಗಳ ಮೇಲಿನ ಜನರ ಗೌರವ ಹೆಚ್ಚಾಗಿದೆ. ಅಧಿಕಾರ, ಪ್ರಭಾವ ಇರುವವರು ಏನು ಮಾಡಿದರೂ ದಕ್ಕಿಸಿಕೊಳ್ಳಬಹುದು ಎಂಬ ಗ್ರಹಿಕೆ ಸುಳ್ಳಾಗಿದೆ. ಇಂಥ ತೀರ್ಪುಗಳಿಂದಾಗಿ ನ್ಯಾಯಾಲಯದ ಮೇಲೆ ಜನರು ಇಟ್ಟಿರುವ ನಂಬಿಕೆಯು ಮತ್ತಷ್ಟು ಗಟ್ಟಿಗೊಳ್ಳುವುದರಲ್ಲಿ ಸಂದೇಹವಿಲ್ಲ.

ಶಾಸನವನ್ನು ರೂಪಿಸಬೇಕಾದವರ ಸ್ಥಾನದಲ್ಲಿ ಕುಳಿತು ಅತ್ಯಾಚಾರದಂಥ ಘೋರ ಅಪರಾಧವನ್ನು ಎಸಗಿದ ವ್ಯಕ್ತಿಗೆ ಹೀಗೆ ತಕ್ಕ ಶಿಕ್ಷೆಯಾಗಿರುವುದು, ಇಂಥ ಅಪರಾಧಿಕ ಮನಸ್ಥಿತಿ ಇರುವವರಿಗೆ ಒಂದು ಪಾಠವಾಗಿದೆ. ಹಣದ ಮದ ಹಾಗೂ ಅಧಿಕಾರದ ಅಮಲು ತಲೆಗೇರಿದ ಕಾರಣಕ್ಕೆ ಎಸಗುವ ಅಪರಾಧದ ಪರಿಣಾಮ ಏನಾಗುತ್ತದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಇನ್ನಾದರೂ ಇಂಥ ಅಪರಾಧ ಪ್ರಕರಣಗಳು ಕಡಿಮೆಯಾಗಲಿ ಎಂಬುದು ಜನರ ನಿರೀಕ್ಷೆ.

**- ಪತ್ತಂಗಿ ಎಸ್.ಮುರಳಿ, ಬೆಂಗಳೂರು**

### ಶ್ಲಾಘನೀಯ ಸಂಗತಿ

ಭಾರತದ ಆರ್ಥಿಕತೆ ಸಾಯುವ ಹಂತದಲ್ಲಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಾತಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಪ್ರತಿಕ್ರಿಯಿಸಿ, ''ಟ್ರಂಪ್ ಅವರು ಕುರುಡರಾಗಿರಬೇಕು ಇಲ್ಲವೇ ಅಜ್ಞಾನಿಯಾಗಿರಬೇಕು'' ಎಂಬ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿರುವುದು ಶ್ಲಾಘನೀಯ ಸಂಗತಿ. ಭಾರತದಲ್ಲಿ ಒಬ್ಬ ಸಣ್ಣ ವ್ಯಾಪಾರಿ ಮತ್ತು ಬಡರೈತ ಕೂಡ ತನ್ನ ವ್ಯವಹಾರವನ್ನು ಘನತೆ, ಸಮಗ್ರತೆ ಮತ್ತು ಮಾನವೀಯತೆಯಿಂದ ನಡೆಸುತ್ತಿದ್ದಾನೆ ಎಂದು ಅವರು ಹೇಳಿರುವುದು ಪ್ರತಿಯೊಬ್ಬರೂ ಮೆಚ್ಚುವಂಥದ್ದು.

**- ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು**

### ಹಾಯ್ ಟ್ರಂಪಣ್ಣ...!

ಸುಳ್ಳೇಟಿಗಿಂತ ನಿನ್ನ ಸುಂಕದೇಟು ಜೋರಾಗಿ
ನಡುಗಿಲ್ಲ ಗಡಗಡ ಟ್ರಂಪಣ್ಣಾ...
ನಿನ್ನ ಎದೆಯಲ್ಲಿ ಢವಢವ
ಢವಢವ ಏಕಣ್ಣಾ...!

**- ಬಿ ಎನ್ ಭರತ್, ಬೆಂಗಳೂರು**

# ಭಾರತೀಯರ ವಿದೇಶಿ ಕನಸು ಕನಸಾಗಿಯೇ ಉಳಿಯುವುದೇ?

ಯಕ್ಷಪ್ರಶ್ನೆ

ರಮಾನಂದ ಶರ್ಮಾ

vveditoped@gmail.com

ಭಾರತೀಯರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗೂಗಲ್, ಮೈಕ್ರೋಸಾಫ್ಟ್ ಸೇರಿದಂತೆ ತಮ್ಮ ದೇಶದ ಟೆಕ್ ಕಂಪನಿಗಳಿಗೆ ತಾಕೀತು ಮಾಡಿದ್ದಾರೆ. ವಾಷಿಂಗ್ಟನ್‌ನಲ್ಲಿ ಇತ್ತೀಚೆಗೆ ನಡೆದ 'ಅಮೆರಿಕ ಎಐ ಟೆಕ್ ಶೃಂಗಸಭೆ'ಯಲ್ಲಿ ಮಾತನಾಡಿದ ಅವರು, ''ಅಮೆರಿಕದ ಕಂಪನಿಗಳು ಸ್ಥಳೀಯರಿಗೆ ಉದ್ಯೋಗಗಳನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕು; ಉದ್ಯೋಗಗಳಿಗೆ ಭಾರತ ಮತ್ತು ಚೀನಾದವರ ನೇಮಕವನ್ನು ತಪ್ಪಿಸಬೇಕು ಹಾಗೂ ಆ ದೇಶಗಳಲ್ಲಿ ಕಾರ್ಖಾನೆಗಳ ಸ್ಥಾಪನೆಯನ್ನು ನಿಲ್ಲಿಸಬೇಕು'' ಎಂದು ಸೂಚಿಸಿದ್ದಾರೆ. ಮಾತ್ರವಲ್ಲದೆ, ''ನಿಮ್ಮ ಜಾಗತಿಕವಾದಿ ಮನಸ್ಥಿತಿಯು ಅಮೆರಿಕವನ್ನು ಹಿಂದಕ್ಕೆ ತಳ್ಳಿದೆ. ಅಮೆರಿಕವು ನೀಡಿರುವ ಸ್ವಾತಂತ್ರ್ಯವನ್ನು ಬಳಸಿಕೊಂಡು ಸಾಕಷ್ಟು ಲಾಭ ಮಾಡಿಕೊಂಡಿದ್ದೀರಿ, ಆದರೆ ಅದನ್ನು ಹೊರದೇಶಗಳಲ್ಲಿ ಹೂಡಿಕೆ ಮಾಡಿದ್ದೀರಿ'' ಎಂದು ಕೂಡ ಟ್ರಂಪ್ ಅಸಮಾಧಾನವನ್ನು ಹೊರಹಾಕಿ, ''ಚೀನಾದಲ್ಲಿ ಕಂಪನಿಯ ಘಟಕಗಳನ್ನು ತೆರೆಯುತ್ತೀರಿ, ಭಾರತದ ಪ್ರತಿಭಾವಂತರನ್ನು ನೇಮಿಸಿಕೊಳ್ಳುತ್ತೀರಿ, ಐರ್ಲೆಂಡ್‌ನಲ್ಲಿ ಹೂಡಿಕೆ ಮಾಡುತ್ತೀರಿ. ನನ್ನ ಆಡಳಿತದಲ್ಲಿ ಇನ್ನು ಮುಂದೆ ಇಂಥದ್ದು ನಡೆಯುವುದಿಲ್ಲ'' ಎಂದು ಗುಡುಗಿ, ಅಲ್ಲಿನ ಟೆಕ್ ಕಂಪನಿಗಳಿಗೆ ನೇರವಾಗಿ ಎಚ್ಚರಿಕೆ ನೀಡಿದ್ದಾರೆ.

ಟ್ರಂಪ್ ತಮ್ಮ ಹೇಳಿಕೆಗೆ ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬಹುದೇ ವಿನಾ, ಎಂದೂ ರಾಜಿಮಾಡಿಕೊಳ್ಳುವುದಿಲ್ಲ. ಅಂತೆಯೇ ಆ ಹೇಳಿಕೆ ಭಾರತದಲ್ಲಿ ಸಂಚಲನ ಮೂಡಿಸಿದೆ. ಬಾಗಿದ ಬೆನ್ನ ಮೇಲೆ ಇನ್ನೊಂದು ಗುದ್ದು ಎನ್ನುವಂತೆ, ಭಾರತೀಯರಿಗೆ ಉದ್ಯೋಗ ನಿರಾಕರಣೆಯ ಸುದ್ದಿ ಮಾಸುವ ಮೊದಲೇ, ತಾವು ಭಾರತದ ಆಪ್ತಸ್ನೇಹಿತ ಎಂದೇ ಹೇಳಿಕೊಳ್ಳುತ್ತಿದ್ದ ಟ್ರಂಪ್ ಭಾರತೀಯ ಸರಕುಗಳಿಗೆ ಶೇ.25ರಷ್ಟು ಸುಂಕ ವಿಧಿಸಲು ಮುಂದಾಗಿದ್ದಾರೆ. ಅಮೆರಿಕದೊಂದಿಗೆ ಭಾರತವು ಸುಮಾರು 7 ಲಕ್ಷ ಕೋಟಿ ರುಪಾಯಿ ಮೌಲ್ಯದಷ್ಟು ವ್ಯಾಪಾರ-ವ್ಯವಹಾರವನ್ನು ಹೊಂದಿದ್ದು, ಟ್ರಂಪ್‌ರ ಈ ನಿರ್ಣಯದಿಂದಾಗಿ ಭಾರತದಿಂದ ರಫ್ತಾಗುವ ಉತ್ಪನ್ನಗಳಿಗೆ ಅಮೆರಿಕದಲ್ಲಿ ಬೆಲೆ ಹೆಚ್ಚಿ ಬೇಡಿಕೆ ಕುಸಿಯುವುದು ಗ್ಯಾರಂಟಿ. ಒಟ್ಟಿನಲ್ಲಿ, ಈವರೆಗಿನ ಆಪ್ತಸ್ನೇಹಿತ ಭಾರತವು ಅಮೆರಿಕದ ಪಾಲಿಗೆ ಕಡುವೈರಿಯಂತಾಗಿರುವುದು ಅಚ್ಚರಿಯೇ ಸರಿ!

ಮತ್ತೊಂದೆಡೆ, ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ ಸ್ವಾಮಿನಾರಾಯಣ ಮಂದಿರದ ಗೋಡೆಯ ಮೇಲೆ ಹಾಗೂ ಏಷ್ಯನ್ನರು ನಡೆಸುತ್ತಿದ್ದ ಎರಡು ರೆಸ್ಟೋರೆಂಟುಗಳ ಗೋಡೆಗಳ ಮೇಲೆ ದುಷ್ಕರ್ಮಿಗಳು ಜನಾಂಗೀಯ ನಿಂದನೆಯ ದ್ವೇಷಬರಹ ಬರೆದು ವಿರೂಪಗೊಳಿಸಿದ್ದಾರೆ. ಆಸ್ಟ್ರೇಲಿಯಾದಲ್ಲಿ ಸುಮಾರು ಹತ್ತು ದಿನಗಳ ಹಿಂದೆ ಭಾರತೀಯರ ಮೇಲೆ ಜನಾಂಗೀಯ ಹಲ್ಲೆಯಾಗಿದೆ. ಐರ್ಲೆಂಡ್‌ನಲ್ಲಿ 40ರ ಹರೆಯದ ಭಾರತೀಯನೊಬ್ಬನ ಮೇಲೆ ಜನಾಂಗೀಯ ದಾಳಿ ನಡೆದ ವರದಿಯಾಗಿದೆ. 'ಇಂಗ್ಲಿಷ್ ಮಾತನಾಡದ ಭಾರತೀಯ ಮತ್ತು ಏಷ್ಯನ್ ಮೂಲದವರನ್ನು ಅವರವರ ದೇಶಗಳಿಗೆ ಗಡೀಪಾರು ಮಾಡಬೇಕು' ಎಂಬುದಾಗಿ ಬ್ರಿಟಿಷ್ ಮಹಿಳೆಯೊಬ್ಬಳು ಸಾಮಾಜಿಕ ಮಾಧ್ಯಮಗಳಲ್ಲಿ ಬರೆದುಕೊಂಡಿದ್ದು, ಅದು ಭಾರಿ ವೈರಲ್ ಆಗಿದೆ. ಲಂಡನ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ 'ಮಾರ್ಕ್ಸ್ ಆ್ಯಂಡ್ ಸ್ಪೆನ್ಸರ್ ಶಾಪ್'ನಲ್ಲಿ ಸಿಬ್ಬಂದಿಗಳಿಬ್ಬರು ಹಿಂದಿ ಭಾಷೆಯಲ್ಲಿ ಮಾತನಾಡುತ್ತಿದ್ದುದಕ್ಕೆ ಕೆರಳಿದ ಇಂಗ್ಲಿಷ್ ಮಹಿಳೆಯೊಬ್ಬಳು, ಆ ಮಳಿಗೆಯ ಮೇಲಧಿಕಾರಿಗಳಿಗೆ ತಾನು ದೂರು ನೀಡುತ್ತಿರುವುದಾಗಿ 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಬರೆದುಕೊಂಡಿದ್ದಾಳಂತೆ. ಇದಕ್ಕೆ ನೆಟ್ಟಿಗರು, 'ಇದು ಜನಾಂಗೀಯ ದ್ವೇಷ' ಎಂದು ಪ್ರತಿಕ್ರಿಯಿಸಿದ್ದಾರಂತೆ.

ಜನಾಂಗೀಯ ದ್ವೇಷ ಅಥವಾ ವರ್ಣದ್ವೇಷ ಮತ್ತು ಮಣ್ಣಿನ ಮಕ್ಕಳಿಗೆ ಉದ್ಯೋಗ ಬೇಡಿಕೆಯು ಹೊಸ ಬೆಳವಣಿಗೆಯೇನಲ್ಲ, ಅದು ಹಲವು ರಾಷ್ಟ್ರಗಳಲ್ಲಿದೆ. ಆದರೆ, ಬಹಳ ಕಾಲದವರೆಗೆ ಆಗೊಮ್ಮೆ ಈಗೊಮ್ಮೆ ಕೇಳುತ್ತಿದ್ದ ಆ ಬೆಳವಣಿಗೆಯು ಈಗ ಬಹುತೇಕವಾಗಿ ದೈನಂದಿನ ಸುದ್ದಿಯಾಗಿ ಸದ್ದುಮಾಡುತ್ತಿದೆ. ತಮಗೆ ನ್ಯಾಯಯುತವಾಗಿ ದೊರಕಬೇಕಾದ ಉದ್ಯೋಗಗಳನ್ನು ವಲಸಿಗರು, ಮುಖ್ಯವಾಗಿ ಭಾರತೀಯರು ಮತ್ತು ಚೀನಿಯರು ಕಬಳಿಸುತ್ತಿದ್ದಾರೆ ಎಂಬ ಭಾವನೆಯು ಅಮೆರಿಕದಂಥ ದೇಶಗಳಲ್ಲಿ ಕ್ರಮೇಣ ಬೇರೂರುತ್ತಿದೆ. 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಹಾಗೂ 'ಅಮೆರಿಕವು ಅಮೆರಿಕನ್ನರಿಗೆ ಮೊದಲು' ಎಂಬ ಮಹತ್ವಾಕಾಂಕ್ಷಿ ಘೋಷವಾಕ್ಯಗಳ ಮೂಲಕ ಡೊನಾಲ್ಡ್ ಟ್ರಂಪ್ ಅಧಿಕಾರದ ಗದ್ದುಗೆ ಹಿಡಿದಿರುವುದು ಗೊತ್ತಿರುವ ಸಂಗತಿಯೇ. ಹೀಗಾಗಿ, ಅಧಿಕಾರದ ಮೊದಲ ದಿನದಿಂದಲೇ ಈ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವ ಅವರು, ತಮ್ಮ ಒಂದೊಂದೇ ಅಜೆಂಡಾವನ್ನು ಯಾವ ಮುಲಾಜಿಲ್ಲದೆ ಜಾರಿಮಾಡುತ್ತಿದ್ದಾರೆ. ಅಕ್ರಮ ವಲಸಿಗರನ್ನು ಹೊರಹಾಕುವುದು; ಜನ್ಮಜಾತ ನಾಗರಿಕ ಹಕ್ಕುಗಳಿಗೆ ಕೊಕ್; ಬ್ರಿಕ್ಸ್ ರಾಷ್ಟ್ರಗಳಿಂದಾಗುವ ಆಮದುಗಳಿಗೆ ಅತಿರೇಕದ ಸುಂಕ ಹೇರುವ ಧಮಕಿ; 'ಬ್ಯೂಟಿಫುಲ್ ಬಿಲ್' ವಿಧೇಯಕದ ಹೆಸರಿನಲ್ಲಿ, ಅಮೆರಿಕದಲ್ಲಿರುವ ವಲಸಿಗರು ಸ್ವದೇಶಕ್ಕೆ ಕಳಿಸುವ ಹಣ ಮತ್ತು ತಾಯ್ನಾಡಿನಲ್ಲಿ ಹೂಡಿಕೆ ಮಾಡುವ ಹಣದ ಮೇಲೆ ಶೇ.3.50ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪ; ಪರಸ್ಪರ ವ್ಯಾಪಾರ-ವ್ಯವಹಾರದಲ್ಲಿ ಪ್ರತಿಸುಂಕ; ವೀಸಾ ನಿಯಮಾವಳಿಯಲ್ಲಿ ನಿರಂತರ ಬದಲಾವಣೆ ಮಾಡುವ ಮೂಲಕ ವಲಸಿಗರ ನಿದ್ರಾಭಂಗ; ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವಿದೇಶಿ ವಿದ್ಯಾರ್ಥಿಗಳಿಗೆ ನಿಷೇಧ ಅಥವಾ ನಿಯಂತ್ರಣ- ಇಂಥ ಕ್ರಮಗಳಿಗೆ ಮುಂದಾದ ನಂತರ ಟ್ರಂಪ್ ಈಗ ಕಂಪನಿಗಳಲ್ಲಿ ಭಾರತೀಯರನ್ನು ಮತ್ತು ಚೀನಿಯರನ್ನು ನೇಮಿಸಿಕೊಳ್ಳದಂತೆ, ಭಾರತ ಮತ್ತು ಚೀನಾದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸದಂತೆ ತಮ್ಮ ದೇಶದ ಟೆಕ್ ಕಂಪನಿಗಳಿಗೆ ಎಚ್ಚರಿಸಿದ್ದಾರೆ. ಇದು ಭಾರತೀಯರ 'ಅಮೆರಿಕ ಕನಸಿಗೆ' ಕೊಳ್ಳಿಯಿಟ್ಟಿದೆ. ಮುಖ್ಯವಾಗಿ 'ಎಚ್‌ಬಿ 1' ವೀಸಾ ಆಕಾಂಕ್ಷಿಗಳನ್ನು ಧೃತಿಗೆಡಿಸಿದೆ. ಏಕೆಂದರೆ, ಇತ್ತೀಚಿನ ದಿನಗಳಲ್ಲಿ ಭಾರತದಿಂದ ಅಮೆರಿಕಕ್ಕೆ ಹೋಗುತ್ತಿರುವವರಲ್ಲಿ ಟೆಕ್ಕಿಗಳೇ ಹೆಚ್ಚು ಎಂಬುದು ಗಮನಿಸಬೇಕಾದ ಅಂಶ.

ಜಾಗತಿಕ ಪರಿಗಣನೆಯಲ್ಲಿ ಹೇಳುವುದಾದರೆ, 'ಅಮೆರಿಕ ದೊಡ್ಡಣ್ಣ, ಒಂದಿಡೀ ಜಗತ್ತು ಅಮೆರಿಕದ ಸುತ್ತ ಗಿರಕಿ ಹೊಡೆಯುತ್ತದೆ' ಎಂಬುದರಲ್ಲಿ ಅತಿಶಯೋಕ್ತಿ ಇಲ್ಲ. ಇಂದು ಅಮೆರಿಕ ಆಲೋಚಿಸಿದ್ದನ್ನು-ಮಾಡಿದ್ದನ್ನು ಜಗತ್ತು ನಾಳೆ ಮಾಡುತ್ತದೆ ಎಂಬ ಗ್ರಹಿಕೆಯಲ್ಲಿ ಸತ್ಯವಿದೆ. ಬಹುತೇಕ ರಾಷ್ಟ್ರಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಮೆರಿಕವನ್ನು ಅನುಸರಿಸುತ್ತವೆ. 'ಭಾರತೀಯರಿಗೆ ಉದ್ಯೋಗವನ್ನು ನೀಡಬೇಡಿ, ಭಾರತದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಬೇಡಿ' ಎನ್ನುವ ಅಮೆರಿಕದ ನೀತಿಯನ್ನು ಉಳಿದ ರಾಷ್ಟ್ರಗಳೂ ಒಂದೊಮ್ಮೆ ಅನುಸರಿಸಿದರೆ, ನಮ್ಮ ದೇಶದ ಗತಿಯೇನು? ನಮ್ಮ ವಿದೇಶಿ ಆಕಾಂಕ್ಷಿಗಳ ಭವಿಷ್ಯವೇನು? ಅಮೆರಿಕದ 'ವಲಸೆಗಾರ-ವಿರೋಧಿ ನೀತಿ' ಮತ್ತು 'ಮಣ್ಣಿನ ಮಕ್ಕಳಿಗೇ ಮೊದಲ ಆದ್ಯತೆ' ಪರಿಕಲ್ಪನೆಯನ್ನು ಅಳವಡಿಸಿಕೊಂಡು ಜಪಾನಿನ ಬಲಪಂಥೀಯ ರಾಷ್ಟ್ರೀಯ ಪಕ್ಷವು, ಬಹುಕಾಲ ಅಧಿಕಾರದಲ್ಲಿದ್ದ ಲಿಬರಲ್ ಡೆಮಾಕ್ರಟಿಕ್ ಪಕ್ಷವನ್ನು ಮಕಾಡೆ ಮಲಗಿಸಿ ಐತಿಹಾಸಿಕ ವಿಜಯವನ್ನು ಸಾಧಿಸಿದೆ. ಅಪಾರ ಪ್ರಮಾಣದಲ್ಲಿ ಭಾರತೀಯ ವಲಸೆಗಾರರಿರುವ ಸೌದಿ ಅರೇಬಿಯಾ ಮತ್ತಿತರ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ವಲಸೆ ನೀತಿಯನ್ನು ಕ್ರಮೇಣ ಮರುಪರಿಶೀಲಿಸಲಾಗುತ್ತಿದೆಯಂತೆ.

ಅಮೆರಿಕದ ಒಟ್ಟು ಜನಸಂಖ್ಯೆ 345 ಮಿಲಿಯನ್ ಇದ್ದು, ಇದರಲ್ಲಿ ಭಾರತೀಯರ ಸಂಖ್ಯೆಯು 5.40 ಮಿಲಿಯನ್‌ನಷ್ಟಿದೆ (ಅಂದರೆ ಸುಮಾರು ಶೇ.1.6ರಷ್ಟು). ವಿದೇಶಗಳಲ್ಲಿರುವ ಭಾರತೀಯರ ಸಂಖ್ಯೆ ಸುಮಾರು 35.4 ಮಿಲಿಯನ್. ಪ್ರತಿವರ್ಷ ಸುಮಾರು 2.50 ಮಿಲಿಯನ್ ಭಾರತೀಯರು ವಲಸಿಗರಾಗಿ ವಿದೇಶಗಳಿಗೆ ತೆರಳುತ್ತಾರೆ. ಜಾಗತಿಕವಾಗಿ ಈ ನಿಟ್ಟಿನಲ್ಲಿ ತುಲನೆ ಮಾಡಿದಾಗ ಭಾರತೀಯರ ಪ್ರಮಾಣವೇ ಹೆಚ್ಚು. 2011-2023ರ ಅವಧಿಯಲ್ಲಿ ಸುಮಾರು 1.80 ಮಿಲಿಯನ್ ಭಾರತೀಯರು ಭಾರತದ ಪೌರತ್ವವನ್ನು ತ್ಯಜಿಸಿ ಅನ್ಯದೇಶಗಳ ಪೌರತ್ವವನ್ನು ಪಡೆದಿದ್ದಾರೆ. ಅದರಲ್ಲೂ ಅಮೆರಿಕದ ವಿಮಾನ ಹತ್ತುವವರ ಸಂಖ್ಯೆ ದಿಗಿಲುಬೀಳುವಷ್ಟು ದೊಡ್ಡ ಪ್ರಮಾಣದಲ್ಲಿದೆ ಎನ್ನಲಾಗುತ್ತಿದ್ದು, ಸಮಸ್ಯೆಯ ಆಳವನ್ನು ಚೆನ್ನಾಗಿ ತಿಳಿದ ಟ್ರಂಪ್ ಈ ನಿಟ್ಟಿನಲ್ಲಿ ಗಂಭೀರವಾಗಿ ಫೀಲ್ಡ್‌ಗೆ ಇಳಿದಿದ್ದಾರೆ. ನಮ್ಮ ಊರು, ಪಕ್ಕದ ಊರು, ತಾಲೂಕು, ಜಿಲ್ಲೆ, ಉತ್ತರ-ದಕ್ಷಿಣ, ನಮ್ಮ ಭಾಷೆ ಎಂದೆಲ್ಲಾ ಬಡಿದಾಡುವ ನಾವು, ಟ್ರಂಪ್ ಅವರು ತಮ್ಮ ರಾಷ್ಟ್ರದ ಹಿತದೃಷ್ಟಿಯಿಟ್ಟುಕೊಂಡು ಅಲ್ಲಿನ ಮಣ್ಣಿನ ಮಕ್ಕಳಿಗೆ ಶರಣಾಗುವುದನ್ನು ವಿರೋಧಿಸುವ ನೈತಿಕತೆ ನಮ್ಮಲ್ಲಿದೆಯೇ ಎಂಬುದು ಯಕ್ಷಪ್ರಶ್ನೆ.

ಡೊನಾಲ್ಡ್ ಟ್ರಂಪ್ ಮೇಲ್ನೋಟಕ್ಕೆ ನಮಗೆ ಖಳನಾಯಕರಾಗಿ ಕಾಣುತ್ತಾರೆ. ಅಮೆರಿಕದಲ್ಲಿ ಬದುಕು ಪಡೆದವರು ಮತ್ತು ಬದುಕು ಪಡೆಯಲು ಮುಂದಾದವರು ಟ್ರಂಪ್‌ರ ಈ ನಿಲುವನ್ನು ವಿರೋಧಿಸುವುದರಲ್ಲಿ ಅರ್ಥವಿದೆ. ಆದರೆ ಟ್ರಂಪ್‌ರ ಸ್ಥಾನದಲ್ಲಿ ಕುಳಿತು ನೋಡಿದಾಗ ಅವರ ನಿಲುವು ಸರಿ ಎನಿಸುತ್ತದೆ. ಪ್ರತಿಯೊಬ್ಬರೂ ಸ್ವಹಿತದ ನಂತರವಷ್ಟೇ ಪರರ ಹಿತರಕ್ಷಣೆಯ ಕಡೆಗೆ ಗಮನಹರಿಸುವುದು. ಅದು ಬದುಕಿನ ವಾಡಿಕೆಯ ತತ್ವವೂ ಹೌದು. ಅಂತೆಯೇ, ಅಮೆರಿಕವು ವಲಸಿಗರ ರಾಷ್ಟ್ರವಾಗುವುದನ್ನು ತಡೆಯಲು ಟ್ರಂಪ್ ಮುಂದಾಗಿದ್ದಾರೆ. ಆದರೆ ವಾಸ್ತವದಲ್ಲಿ ಅವರು, ಕೇವಲ ಭಾರತೀಯರು ಮತ್ತು ಚೀನಿಯರನ್ನಷ್ಟೇ ಟಾರ್ಗೆಟ್ ಮಾಡುತ್ತಿರುವಂತೆ ಕಾಣುತ್ತದೆ. ಭಾರತೀಯರಂತೆ ಇನ್ನಿತರ ದೇಶದವರೂ ಗಮನಾರ್ಹ ಸಂಖ್ಯೆಯಲ್ಲಿದ್ದರೂ, ಸಿಲಿಕಾನ್ ವ್ಯಾಲಿಯಲ್ಲಿನ ಭಾರತೀಯ ಟೆಕ್ಕಿಗಳ ಅಪ್ರತಿಮ ಯಶಸ್ಸು ಅವರನ್ನು ಕಂಗೆಡಿಸಿದೆ ಎನ್ನಲಾಗುತ್ತಿದೆ. ಭಾರತದ ಎಂಜಿನಿಯರುಗಳು ತಂತ್ರಜ್ಞಾನ ಪ್ರತಿಭೆಯ ಗಣಿಯೇ ಆಗಿದ್ದು, ಇವರು ಅಮೆರಿಕದ ಮಣ್ಣಿನ ಮಕ್ಕಳು ಮೇಲೇಳದಂತೆ ತಡೆಯೊಡ್ಡುತ್ತಿದ್ದಾರೆ ಎಂಬ ಭಾವನೆಯೂ ಇದೆ ಎನ್ನಲಾಗುತ್ತಿದೆ. ಆದರೆ ವಲಸಿಗರನ್ನು ತಡೆದು ಸ್ಥಳೀಯರಿಗೆ ಉದ್ಯೋಗ ನೀಡುವುದರಿಂದ ತಮ್ಮ ನಿರ್ವಹಣಾ ವೆಚ್ಚವು ಪುಟಿದೇಳಬಹುದು ಎನ್ನುವ ಭಯ ಅಲ್ಲಿನ ಕಂಪನಿಗಳನ್ನು ಆವರಿಸಿದೆಯಂತೆ (ವಲಸಿಗರಿಗೂ ಮತ್ತು ಅಮೆರಿಕದ ಸ್ಥಳೀಯರಿಗೂ ವೇತನ ತಾರತಮ್ಯ ಇದೆ ಎಂದು ಹೇಳಲಾಗುತ್ತಿದೆ). ಒಟ್ಟಿನಲ್ಲಿ ಡೊನಾಲ್ಡ್ ಟ್ರಂಪ್ ಅವರ ಆದೇಶ ಮತ್ತು ಕಂಪನಿಗಳ ನಿರ್ಧಾರ ಇವುಗಳ ಮಧ್ಯೆ ಯಾವುದು ಹೆಚ್ಚು ತೂಗುತ್ತದೆ, ತಕ್ಕಡಿ ಯಾವ ಕಡೆಗೆ ವಾಲುತ್ತದೆ ಎಂಬುದನ್ನು ಕಾಲವಷ್ಟೇ ಹೇಳಬಲ್ಲದು.

**(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)**

## ಭಟ್ಟರ್ ಸ್ಕಾಚ್

- ಪಿ. ಜೇಮ್ಸ್, (ಇಮೇಲ್ ಮೂಲಕ)
ಭಟ್ರೇ, ಹೆಂಡತಿಯೊಂದಿಗೆ ಜೀವನ ಮಾಡುವುದು ಕಷ್ಟವಾಗ್ತಾ ಇದೆಯಲ್ಲ?
– **ಸೊಳ್ಳೆ ಜತೆಗೆ ಒಂದು ರಾತ್ರಿ ಕಳೆದು ನೋಡು, ಹೆಂಡತಿಯೇ ಎಷ್ಟೋ ವಾಸಿ ಅನಿಸುತ್ತೆ!**

- ರಾಜು ಪತ್ತಾರ, ಹುಬ್ಬಳ್ಳಿ
ಭಟ್ರೇ, ಬೆಂಗಳೂರಿನಲ್ಲಿ ಕನ್ನಡದ ಸ್ಥಿತಿಗತಿ ನೋಡಿದರೆ ಬೇಸರವಾಗುತ್ತದಲ್ಲ?
– **ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿಳಿಮಲೆ ಅವರಿಗೆ ಇಲ್ಲದ ಬೇಸರ ನಿನಗ್ಯಾಕೆ?!**

- ಸಿ. ವಿಶಾಲ ಭಗತ್, ಮೈಸೂರು
ಭಟ್ರೇ, ಕೆಆರ್‌ಎಸ್ ಡ್ಯಾಮಿಗೆ ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನನಂತೆ?
– **ಅಡಿಗಲ್ಲು ಅಲ್ಲ, ಚಪ್ಪಡಿ ಕಲ್ಲು ಹಾಕಿದ್ದು ಟಿಪ್ಪು!**

- ನವೀನ ಪೆರಾಜೆ, ಮಂಗಳೂರು
ಭಟ್ರೇ, ಕನ್ನಡ ಸಿನಿಮಾ ನಟರಿಗೆ ಸಕತ್ ಕೊಬ್ಬು ಅಲ್ವಾ?
– **ಸಂತೋಷ ಅಂದ್ರೆ ಅದು ಮೆತ್ತಗೆ ಕರಗುತ್ತಿದೆ!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಪ್ರಜ್ವಲ್ ರೇವಣ್ಣರಿಗೆ ಜೀವಾವಧಿ ಶಿಕ್ಷೆ ಆದ್ರೆ, 'ಟಿವಿ ಫೈವ್' ಆ್ಯಂಕರ್ ಯಾಕೆ ಕಿರುಚಿಕೊಳ್ಳಬೇಕು?
– **ಫೈಲ್ಸ್ ಆದವರು ಒಮ್ಮೊಮ್ಮೆ ಹೀಗೆ ಕಿರುಚಿಕೊಳ್ತಾರಪ್ಪ!**

- ಆರ್.ಕೇಶವಮೂರ್ತಿ, ಚಿಂತಾಮಣಿ
ಭಟ್ರೇ, ಕತ್ತೆಗೂ ಒಂದು ಕಾಲ ಬರುತ್ತೆ ಅಂತಾರಲ್ಲ?
– **'ವಿದೇಶ ಕಾಲ' ಬಿಡುಗಡೆಗೆ ನೂರು ಪುಸ್ತಕಗಳ ತನಕ ಕಾಯಬೇಕಾಯ್ತು!**

- ಸುಮಿತ್ರಾಬಾಯಿ ದೇಶಮುಖ್, ಬೆಳಗಾವಿ
ಭಟ್ರೇ, ನಮ್ಮ ಕಾಲ ಮುಗಿಯಿತು ಅಂತಾರಲ್ಲ, ಅದು ಹೇಗೆ ಗೊತ್ತಾಗುತ್ತದೆ?
– **ಬೇರೆಯವರ ಆಟ ಆರಂಭವಾಗಿದ್ದನ್ನು ನೋಡಿರುತ್ತಾರಲ್ಲ!**

- ರಾಮು, ಬೆಂಗಳೂರು
ಭಟ್ರೇ, ಕನ್ನಡ ಸಾಹಿತ್ಯ ಪರಿಷತ್ ಸಾಹಿತಿಗಳ ಬೀಡು ಆಗುವುದು ಯಾವಾಗ?
– **ಸದ್ಯ ಅದು ವಕೀಲರ ಬೀಡು ಆಗಿದೆ ಅಂತಾರಪ್ಪ!**

- ಸಿ.ಬಾಬಣ್ಣ, ಕೆಂಗೇರಿ
ಭಟ್ರೇ, ಬರೆಯದೇ ಸಾಹಿತಿ, ಪ್ರಗತಿಪರ ಚಿಂತಕ ಆಗಬಹುದಾ?
– **ನಿನ್ನ ಪ್ರಶ್ನೆಯನ್ನು ಕೆ.ಮರುಳುಸಿದ್ದಪ್ಪನಿಗೆ ಫಾರ್ವರ್ಡ್ ಮಾಡಿದ್ದೇನೆ!**

- ಮಮತಾ ಶಿವಮೊಗ್ಗ, ಶಿವಮೊಗ್ಗ
ಭಟ್ರೇ, ಸಮಸ್ಯೆಗಳು ಎದುರಾದಾಗ ನಾನು ಯಾರನ್ನು ಕೇಳಲಿ?
– **ಆಸ್ಕ್ ದಿ ಎಡಿಟರ್!**

# ಬಿದಿರಿನಂತೆ ಬೆಳೆದ ಭವ್ಯ ಭಾರತ...

## ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕಾಡಿನಲ್ಲಿ ಒಂದು ಓಕ್ ಗಿಡ ಹಾಗೂ ಬಿದಿರಿನ ಗಿಡ ಅಕ್ಕಪಕ್ಕದಲ್ಲಿ ಹುಟ್ಟಿಕೊಂಡವಂತೆ. ದಿನಗಳೆದಂತೆ, ಓಕ್ ಗಿಡ ದೊಡ್ಡದಾಗಿ ಬೆಳೆಯಲು ಆರಂಭಿಸಿತಂತೆ. ಆದರೆ ಬಿದಿರಿನಲ್ಲಿ ಯಾವ ಬೆಳವಣಿಗೆಯೂ ಕಾಣಿಸಲಿಲ್ಲವಂತೆ. ದಿನವಷ್ಟೇ ಅಲ್ಲ, ತಿಂಗಳು ಕಳೆದು, 3–4 ವರ್ಷಗಳಾದರೂ ಓಕ್ ಗಿಡ ಬೆಳೆಯುತ್ತಿತ್ತೇ ವಿನಾ ಬಿದಿರಿನಲ್ಲಿ ಕಣ್ಣಿಗೆ ಕಾಣುವ ಯಾವ ಬದಲಾವಣೆಯೂ ಆಗಲಿಲ್ಲವಂತೆ. ಆಗಲೇ ಬೆಳೆದು ಮರವಾದ ಓಕ್, ಆಗಾಗ ಬಿದಿರಿಗೆ ಪ್ರಶ್ನೆ ಮಾಡುತ್ತಿತ್ತಂತೆ– ''ನಾನು–ನೀನು ಹೆಚ್ಚು ಕಮ್ಮಿ ಒಂದೇ ಸಮಯದಲ್ಲಿ ಅಕ್ಕ–ಪಕ್ಕದಲ್ಲಿಯೇ ಹುಟ್ಟಿಕೊಂಡರೂ, ಬೆಳವಣಿಗೆಯಲ್ಲಿ ಯಾಕೆ ಹೀಗೆ? ನನ್ನನ್ನು ನೋಡು, ಈಗಾಗಲೇ ಬೆಳೆದು ಎಷ್ಟು ದೊಡ್ಡವನಾಗಿದ್ದೇನೆ. ನನಗಿಂತ ಮೊದಲು ಹುಟ್ಟಿದ ಕೆಲವು ಮರಗಳಿಗಿಂತಲೂ ಎತ್ತರವಾಗಿ, ದಷ್ಟಪುಷ್ಟವಾಗಿ ಬೆಳೆದಿದ್ದೇನೆ. ಇಡೀ ಕಾಡೇ ನನ್ನ ಬೆಳವಣಿಗೆಯನ್ನು ಕೊಂಡಾಡುತ್ತಿದೆ. ನೀನು ಮಾತ್ರ ಇನ್ನೂ 3 ಅಡಿಯಷ್ಟೂ ಎತ್ತರ ಬೆಳೆಯಲಿಲ್ಲ, ನಿನಗೆ, ನಿನ್ನ ಬಗ್ಗೆ ಏನೂ ಅನ್ನಿಸುವುದಿಲ್ಲವೇ?'' ಆಗ ಬಿದಿರು ಹೇಳುತ್ತಿತ್ತಂತೆ– ''ನನ್ನ ಕೆಲಸ ನಾನು ಮಾಡುತ್ತಿದ್ದೇನೆ. ಒಂದಲ್ಲ ಒಂದು ದಿನ ನಾನೂ ಬೆಳೆಯುತ್ತೇನೆ. ಆ ಬೆಳವಣಿಗೆಗಾಗಿಯೇ ಈ ತಯಾರಿ ನಡೆಸಿದ್ದೇನೆ''.

ಸುಮಾರು 4–5 ವರ್ಷದವರೆಗೂ ಓಕ್ ಮರ ಬಿದಿರನ್ನು ಅದರ ಬೆಳವಣಿಗೆಯ ಕುರಿತು ಹೀಯಾಳಿಸುತ್ತ, ಆಗಾಗ ಜರೆಯುತ್ತ, ತನ್ನ ದೊಡ್ಡಸ್ತಿಕೆಯ ಬಗ್ಗೆ ಮಾತನಾಡುತ್ತ, ಬಿದಿರನ್ನು ಹಂಗಿಸುತ್ತಿತ್ತಂತೆ. ಐದು ವರ್ಷವಾಗುತ್ತಿದ್ದಂತೆ ಬಿದಿರು ಒಮ್ಮೆಲೇ ಬೆಳೆಯಲು ಆರಂಭಿಸಿತಂತೆ. ನೋಡನೋಡುತ್ತಿದ್ದಂತೆಯೇ ಬಿದಿರು ವಾರಕ್ಕೆ 1–2 ಅಡಿ ಎತ್ತರಕ್ಕೆ ಬೆಳೆಯತೊಡಗಿತಂತೆ. 6 ತಿಂಗಳು ಆಗುವುದರ ಒಳಗೆ ಬಿದಿರು 50–60 ಅಡಿ ಬೆಳೆದು, ಓಕ್ ಮರಕ್ಕಿಂತಲೂ ಎತ್ತರಕ್ಕೆ ನಿಂತಿತಂತೆ.

ಹೀಗಿರುವಾಗ ಒಮ್ಮೆ ಕಾಡಿನಲ್ಲಿ ದೊಡ್ಡ ಬಿರುಗಾಳಿ ಬೀಸಿತಂತೆ. ಆ ಬಿರುಗಾಳಿಗೆ ಸಾಕಷ್ಟು ಮರಗಳು ಧರಾಶಾಯಿಯಾದವಂತೆ. ಆದರೆ ಬಿದಿರು ಮಾತ್ರ ಬಗ್ಗಿ ಭೂಸ್ಪರ್ಶ ಮಾಡಿದರೂ, ಬಿರುಗಾಳಿ ನಿಂತ ನಂತರ ಪುನಃ ತಲೆಯೆತ್ತಿ ಮೊದಲಿನಂತೆಯೇ ನಿಂತಿತಂತೆ. ಧರೆಗೆ ಉರುಳಿದ ಮರಗಳಲ್ಲಿ ಬುಡ ಮುರಿದು ನೆಲಕ್ಕೆ ಒರಗಿದ ಓಕ್ ಮರವು ಬಿದಿರನ್ನು ಕಂಡು ಕೇಳಿತಂತೆ– ''ನೀನು ನಿಧಾನವಾಗಿ ಬೆಳೆದರೂ, ಇಷ್ಟು ದೊಡ್ಡ ಬಿರುಗಾಳಿಯನ್ನು ಸಹಿಸಿಕೊಂಡು ಪುನಃ ತಲೆಯೆತ್ತಿ ಹೇಗೆ ನಿಂತುಕೊಂಡೆ? ನಾನು ನಿನಗಿಂತ ವೇಗವಾಗಿ, ನಿನಗಿಂತ ದಪ್ಪ, ವಿಶಾಲವಾಗಿ ಬೆಳೆದರೂ ಒಂದು ಬಿರುಗಾಳಿಗೆ ನೆಲಕ್ಕೆ ಒರಗಬೇಕಾಯಿತು. ನಿನಗೆ ಮಾತ್ರ ಏನೂ ಆಗಲಿಲ್ಲ, ಇದು ಹೇಗೆ ಸಾಧ್ಯವಾಯಿತು?''. ಆಗ ಬಿದಿರು, ''ಆರಂಭದ ದಿನಗಳಲ್ಲಿ ನೀನು ನನ್ನ ಬೆಳವಣಿಗೆ ಕಂಡು ಹೀಯಾಳಿಸುತ್ತಿದ್ದೆ, ಅಣಕಿಸುತ್ತಿದ್ದೆ. ನೀನು ಬೇಗ ಬೆಳೆದೆ ಎಂದು ಬೀಗುತ್ತಿದ್ದೆ. ಆದರೆ ನಾನು ಇದ್ಯಾವುದನ್ನೂ ಲೆಕ್ಕಿಸದೆ, ನನ್ನ ಕೆಲಸದಲ್ಲಿ ತೊಡಗಿಕೊಂಡಿದ್ದೆ. ನೀನು ಭೂಮಿಯ ಮೇಲೆ ಎಷ್ಟು ಬೆಳೆಯುತ್ತಿದ್ದೆಯೋ, ನಾನು ಭೂಮಿಯ ಕೆಳಗೆ ಅಷ್ಟೇ ದೃಢವಾಗಿ ಬೆಳೆಯುತ್ತಿದ್ದೆ. ನನ್ನ ಬೇರನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದೆ. ಮೊದಲು 4–5 ವರ್ಷ ನಾನು ಮಾಡಿದ ಕೆಲಸ ಎಂದರೆ, ನನ್ನ ಬೇರನ್ನು ಗಟ್ಟಿಯಾಗಿಸಿಕೊಂಡದ್ದು. ನನ್ನ ಬೇರು ಗಟ್ಟಿಯಾಗಿದ್ದುದರಿಂದಲೇ ಇಂದು ನಾನು ಪುನಃ ದೃಢವಾಗಿ ತಲೆಯೆತ್ತಿ ನಿಂತಿದ್ದೇನೆ. ನಿನ್ನ ಬೇರು ಗಟ್ಟಿಯಾಗಿರದ ಕಾರಣ ನೀನು ಧರೆಗೆ ಉರುಳಿದ್ದೀಯೆ. ನಾನು ಭೂಮಿಯ ಕೆಳಗೆ ನನ್ನ ಕೆಲಸವನ್ನು ಮಾಡುತ್ತಿದ್ದರಿಂದ ಆಗ ಅದು ನಿನ್ನ ಕಣ್ಣಿಗೆ ಕಾಣಲಿಲ್ಲ. ಈಗ, ಬಿರುಗಾಳಿ ಬೀಸಿಹೋದ ನಂತರ, ನಾನು ನಿನ್ನ ಕಣ್ಣಿಗಷ್ಟೇ ಅಲ್ಲ, ಎಲ್ಲರ ಕಣ್ಣಿಗೂ ಕಾಣುತ್ತಿದ್ದೇನೆ'' ಎಂದು ಹೇಳಿತಂತೆ.

ಇದು ಒಂದು ಹಳೆಯ ಕತೆಯಾದರೂ ವಾಸ್ತವವೂ ಹೌದು. ಬಿದಿರು ಹುಟ್ಟಿಕೊಂಡ ತಕ್ಷಣ ಮೇಲೆ ಬೆಳೆಯುವುದಿಲ್ಲ. ಮೊದಲ ಕೆಲವು ವರ್ಷ ಅದರ ಬೆಳವಣಿಗೆ ಏನಿದ್ದರೂ ಭೂಮಿಯ ಕೆಳಗೆ. ಬೇರು ಗಟ್ಟಿಯಾದ ನಂತರ ಬಿದಿರು ಭೂಮಿಯ ಮೇಲೆ ಗಮನಾರ್ಹ ರೀತಿಯಲ್ಲಿ ಬೆಳೆಯುತ್ತದೆ. ಈ ಕತೆಯನ್ನು ತ್ವರಿತವಾಗಿ ಬೆಳೆಯುವ ಮತ್ತು ತಾಳ್ಮೆಯಿಂದ ಬೆಳೆಯುವ ಗುಣ ಅಥವಾ ಮನಸ್ಥಿತಿಯ ಪರಿಣಾಮವನ್ನು ಹೇಳಲು ಉದಾಹರಣೆಯಾಗಿ ಬಳಸುವುದಿದೆ. ಎಲ್ಲವೂ ತ್ವರಿತವಾಗಿಯೇ ಆಗಬೇಕು, ಯಶಸ್ಸು ಕೂಡ ತ್ವರಿತವಾಗಿ ಬರಬೇಕು ಎಂದು ಎಣಿಸುವ ಇಂದಿನ ಜಗತ್ತಿನಲ್ಲಿ, ನಾವು ತಾಳ್ಮೆಯ ಮತ್ತು ಶಾಂತಿಯ ಶಕ್ತಿಯನ್ನು ಮರೆತುಬಿಡುತ್ತೇವೆ. ಶೀಘ್ರವಾಗಿ ಬೆಳೆದವರೊಂದಿಗೆ ನಮ್ಮನ್ನು ನಾವು ತುಲನೆ ಮಾಡಿಕೊಳ್ಳುತ್ತೇವೆ. ತ್ವರಿತ ಮತ್ತು ನಿಧಾನದ ಮಾಪನದಲ್ಲಿ ನಮ್ಮನ್ನು ನಾವೇ ಕಳೆದುಕೊಳ್ಳುತ್ತೇವೆ. ಇಂದು ಬೆಳವಣಿಗೆ ಕಾಣಿಸುತ್ತಿಲ್ಲ ಎಂದ ಮಾತ್ರಕ್ಕೆ, ಮುಂದೆಂದೂ ಅದು ಬೆಳೆಯುವುದಿಲ್ಲ ಎಂದು ಅರ್ಥವಲ್ಲ. ಇಂದು ದುರ್ಬಲರಾಗಿ ಕಾಣುವವರು ನಾಳೆ ಹೆಚ್ಚು ಉತ್ತಮವಾಗಿ, ಸಶಕ್ತವಾಗಿ ಬೆಳೆಯಲು ತಯಾರಿ ನಡೆಸುತ್ತಿರಬಹುದು ಎನ್ನುವುದು ನಮಗೆ ಅರ್ಥವೇ ಆಗುವುದಿಲ್ಲ. ಆ ಕಾಲ ಬಂದಾಗ ಮಾತ್ರ ನಿಧಾನವಾಗಿ ಎತ್ತರಕ್ಕೆ ಬೆಳೆದವರನ್ನು ಕಂಡು ಎಲ್ಲರೂ ಆಶ್ಚರ್ಯಪಡುತ್ತಾರೆ. ಇದು ವ್ಯಕ್ತಿಗಳ ವಿಷಯಕ್ಕಾದರೂ ಅಷ್ಟೇ, ದೇಶದ ವಿಷಯದಲ್ಲಾದರೂ ಅಷ್ಟೇ.

ಒಂದು ಕಾಲದಲ್ಲಿ ಲೋಕದ ಕಣ್ಣಲ್ಲಿ ಭಾರತ ಎಂದರೆ ಕೊಳಚೆ ಪ್ರದೇಶ, ಹಾವಾಡಿಗರ ದೇಶ, ಭಿಕ್ಷುಕರ ನಾಡು. ಅಶಿಕ್ಷಿತರ, ಬಹುಭಾಷಿತರ, ಧರ್ಮ–ಜಾತಿಗಳ ನಡುವೆ ಹೊಂದಾಣಿಕೆ ಇಲ್ಲದ, ರಾಜ್ಯದ, ದೇಶದ ಗಡಿಗೆ ಬಡಿದಾಡುವ ರಾಷ್ಟ್ರವೆಂದೇ ಹೆಸರಾಗಿತ್ತು. ಅಂತಾರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ, ಟೆಲಿವಿಷನ್‌ಗಳಲ್ಲಿ ಭಾರತದ ಕುರಿತು ಯಾವುದಾದರೂ ಸುದ್ದಿ ಇದ್ದರೆ, ಅದು ಭಾರತವನ್ನು ಜರೆಯುವುದಕ್ಕೆ, ತೆಗಳುವುದಕ್ಕೆ ಮೀಸಲಿಟ್ಟಂತೆ ಇರುತ್ತಿತ್ತು. ಭಾರತದಲ್ಲಿ ಇರುವ ಒಳ್ಳೆಯತನ, ಆಗುತ್ತಿರುವ ಉತ್ತಮ ಬದಲಾವಣೆಗಳು ಜಗತ್ತಿನ ಕಣ್ಣಿಗೆ ಕಾಣುತ್ತಲೇ ಇರಲಿಲ್ಲ. ಭಾರತವಾದರೂ ಅಷ್ಟೇ, ಅಮೆರಿಕ, ಬ್ರಿಟನ್ ಅಥವಾ ಇನ್ಯಾವುದೋ ಶಕ್ತಿಶಾಲಿ ಎಂದು ಕರೆಸಿಕೊಂಡ ದೇಶ ಏನೇ ಹೇಳಿದರೂ ತುಟಿಪಿಟಿಕ್ ಎನ್ನದೆ, ದೇಹ ಬಾಗಿಸಿ, ತಲೆತಗ್ಗಿಸಿ, 'ಜೀ ಹುಜೂರ್' ಎಂದು ಹೇಳಿ ಸುಮ್ಮನೆ ಕುಳಿತುಕೊಳ್ಳುತ್ತಿತ್ತು. ಶಕ್ತಿಶಾಲಿ ದೇಶದ ಜತೆಗಿನ ಭಾರತದ ಬಹುತೇಕ ವ್ಯಾಪಾರಗಳು ಅವಶ್ಯಕತೆಗಿಂತ ಹೆಚ್ಚಾಗಿ ಆ ದೇಶದ ಜತೆ ಸಂಬಂಧ ಗಳಿಸಿಕೊಳ್ಳಬೇಕು ಅಥವಾ ಉಳಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದಲೇ ನಡೆಯುತ್ತಿದ್ದವು. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗದ ಕೆಲವು ದೇಶಗಳು ಭಾರತ ಇಂದಿಗೂ ಜೀತದಾಳಿನ ಮನಸ್ಥಿತಿಯಲ್ಲಿಯೇ ಇದೆ, ತಾವು ಕೈಬಿಟ್ಟರೆ ಭಾರತ ಮುಳುಗಿಹೋಗುತ್ತದೆ, ನಾಶವಾಗುತ್ತದೆ ಎಂಬ ದೊಡ್ಡಸ್ತಿಕೆಯಲ್ಲಿಯೇ ಉಳಿದುಕೊಂಡವು. ಭಾರತ ತಂತ್ರಜ್ಞಾನದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡು ಅಂತರಿಕ್ಷಕ್ಕೆ ನೆಗೆದದ್ದಾಗಲಿ, ಯುದ್ಧದ ಸಲಕರಣೆ ತಯಾರಿಸಿದ್ದಾಗಲಿ, ಕಂಪ್ಯೂಟರ್, ಡಾಟಾ ಸೆಂಟರ್‌ಗಳ ನಿರ್ಮಾಣದಲ್ಲಿ ಮಾಡಿದ ಸಾಧನೆಯಾಗಲಿ ಕಾಣಲೇ ಇಲ್ಲ. ಅಥವಾ ಕಂಡರೂ ಕಾಣದಂತೆ ಸುಮ್ಮನೇ ಉಢಾಫೆ ಹೊಡೆದು ಕುಳಿತಿರಲಿಕ್ಕೂ ಸಾಕು. ಬಲಶಾಲಿಗಳು ಎಂದು ಕರೆಸಿಕೊಂಡವರೆಲ್ಲ ತಮ್ಮ ಪರದೆಯ ಮೇಲೆ ತಾವೇ ನಿರ್ಮಾಣ ಮಾಡಿದ ಚಿತ್ರ ನೋಡುವುದರಲ್ಲಿ, ಅದರ ಬಗ್ಗೆಯೇ ಮಾತನಾಡುವುದರಲ್ಲಿ ವ್ಯಸ್ತರಾಗಿದ್ದರೇ ವಿನಾ, ಭಾರತದಲ್ಲಿ ಅದಕ್ಕಿಂತ ಉತ್ತಮ ಚಿತ್ರದ ಚಿತ್ರೀಕರಣ ನಡೆಯುತ್ತಿದೆ ಎಂಬುದು ಅವರ ಗಮನಕ್ಕೆ ಬರಲೇ ಇಲ್ಲ.

ಹಾಗಾದರೆ ಭಾರತ ಇದ್ದಕ್ಕಿದ್ದಂತೆ ಎಚ್ಚರಗೊಂಡಿತೇ? ಅಷ್ಟು ಶಕ್ತಿಯುತವಾಯಿತೇ? ಹೌದು ಎಂದಾದರೆ, ಭಾರತಕ್ಕೆ ಈ ಶಕ್ತಿ ರಾತ್ರಿ ಬೆಳಗಾಗುವುದರೊಳಗೆ ಬಂದಿದ್ದಲ್ಲ. ಇದರ ಹಿಂದೆ ಸಾಕಷ್ಟು ವರ್ಷಗಳ ಶ್ರಮವಿದೆ.

ಅಮೆರಿಕವನ್ನು ಅಥವಾ ಯಾವುದೇ ಬಲಿಷ್ಠ ರಾಷ್ಟ್ರವನ್ನು ಎದುರುಹಾಕಿಕೊಂಡರೆ ಆಗುವ ಪರಿಣಾಮ ಭಾರತಕ್ಕೆ ತಿಳಿಯದಿದ್ದದ್ದೇನೂ ಅಲ್ಲ. ಆದರೆ ಅಂಥ ದೇಶಗಳು ಕೈಬಿಟ್ಟರೂ ತಾನು ಬದುಕಬಹುದು ಎಂಬ ಆತ್ಮವಿಶ್ವಾಸ ಬಂದ ನಂತರವೇ ಭಾರತ ಈ ನಿಲುವಿಗೆ ಬಂದು ನಿಂತಿದೆ. ಅದಿಲ್ಲವಾದರೆ ಇಂದಿಗೂ ಭಾರತವು ಅಮೆರಿಕ ಹೇಳಿದ್ದಕ್ಕೆ ಒಪ್ಪಿಕೊಂಡು ಸುಮ್ಮನೆ ಬಿದ್ದಿರುತ್ತಿತ್ತು.

ಇತ್ತೀಚಿನ ದಿನಗಳಲ್ಲಿ ಅಮೆರಿಕದ ಅಧ್ಯಕ್ಷ ಟ್ರಂಪ್ ನೀಡುತ್ತಿರುವ ಸಾಕಷ್ಟು ಹೇಳಿಕೆಗಳನ್ನು ನೀವು ಗಮನಿಸಿರಬಹುದು. ಎಲಾನ್ ಮಸ್ಕ್ ಒಡೆತನದ ಟೆಸ್ಲಾ ಸಂಸ್ಥೆ ಭಾರತದ ಬದಲು ಅಮೆರಿಕದಲ್ಲಿಯೇ ಕಾರುಗಳನ್ನು ನಿರ್ಮಾಣ ಮಾಡಬೇಕು, ದೊಡ್ಡ ಸಂಸ್ಥೆಗಳಾದ ಗೂಗಲ್, ಆ್ಯಪಲ್, ಮೈಕ್ರೋಸಾಫ್ಟ್ ಮುಂತಾದವು ಏಷ್ಯಾದ, ಅದರಲ್ಲೂ ಭಾರತದ ಜನರಿಗೆ ಉದ್ಯೋಗ ನೀಡುವ ಬದಲು ಅಮೆರಿಕದ ಜನರಿಗೆ ಉದ್ಯೋಗಾವಕಾಶ ಒದಗಿಸಿ ಕೊಡಬೇಕು ಎಂದು ಅಮೆರಿಕದ ಅಧ್ಯಕ್ಷ ಹೇಳುವಾಗ ಭಾರತ ಅದಕ್ಕೆ ಪ್ರತಿಕ್ರಿಯೆ ನೀಡಿರಲಿಲ್ಲ. ಏಕೆಂದರೆ ಅದು ದೇಶ ಆಳುವ ನಾಯಕನಾಗಿ ತನ್ನ ದೇಶದ ಬಗ್ಗೆ ಇರಬೇಕಾದ ಪ್ರೀತಿಯನ್ನು, ಬದ್ಧತೆಯನ್ನು ತೋರಿಸುವ ಮಾತುಗಳು ಎಂದೇ ಎಲ್ಲರೂ ಪರಿಗಣಿಸಬೇಕು, ಭಾರತವೂ ಹಾಗೆಯೇ ಪರಿಗಣಿಸಿದ್ದಿರಬೇಕು. ಯಾವಾಗ ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳಿಗೆ ಶೇಕಡ 25ರಷ್ಟು ಸುಂಕ ನೀಡಬೇಕು ಎಂದು ಹೇಳಿದರೋ, ಆಗ ಭಾರತವು ಪ್ರತಿಕ್ರಿಯೆ ನೀಡಿ, ಅಮೆರಿಕದ ಜತೆ ಮಾಡಿಕೊಂಡ ಯುದ್ಧವಿಮಾನದ ಒಪ್ಪಂದವನ್ನು ತಡೆಹಿಡಿಯಿತು. ಇದನ್ನು ಅಮೆರಿಕ ನಿರೀಕ್ಷಿಸಿರಲಿಲ್ಲ, ಭಾರತ ಹಾಗೆ ಪ್ರತಿಕ್ರಿಯಿಸುವುದಕ್ಕೆ ನಿಜವಾದ ಕಾರಣ ಅಥವಾ ಮುಂದೆ ಆಗುವ ಪರಿಣಾಮ ಏನು ಎನ್ನುವುದು ಯಾರಿಂದಲೂ ಊಹಿಸಲು ಸಾಧ್ಯವಿಲ್ಲ. ಇದು ಯಾವ ದಿಕ್ಕಿಗೂ ಹೋದೀತು ಅಥವಾ ಏನು ಆಗಲಿಲ್ಲವೆಂಬಂತೆ ಪುನಃ ಹೊಂದಾಣಿಕೆಯೂ ಆಗಬಹುದು. ಆದರೆ, ಅಮೆರಿಕ ಮರೆತಿದ್ದೇನೆಂದರೆ, ಇಷ್ಟು ದಿನ ಕೂಲಿ ಕಾರ್ಮಿಕರು, ಕೆಲಸದವರಿಗಾಗಿಯೇ ಇರುವ ದೇಶವಾಗಿದ್ದ ಭಾರತದ ಪ್ರಜೆಗಳು ಇಂದು ಪ್ರತಿಷ್ಠಿತ ಸಂಸ್ಥೆಗಳ ಪ್ರಮುಖ ಕುರ್ಚಿಯಲ್ಲಿ ಕುಳಿತಾಗಿದೆ ಎಂಬುದನ್ನು ಗಮನಿಸದೇ ಇದ್ದದ್ದು.

ಮೊನ್ನೆ ಅಮೆರಿಕದ ನಿಲುವಿಗೆ ಭಾರತ ಪ್ರತಿಕ್ರಿಯೆ ನೀಡಿದ್ದು ಹೆದರಿಯೋ, ಬೆದರಿಯೋ ಅಲ್ಲ ಅಥವಾ ಯಾರದ್ದೇ ಒತ್ತಡಕ್ಕೂ ಅಲ್ಲ, ಇದು ಇಷ್ಟು ವರ್ಷ ನಡೆಸಿದ ತಯಾರಿಯ ಪರಿಣಾಮ. ಇತರ ದೇಶಗಳು ಸುದ್ದಿಯ ಬೆನ್ನು ಹತ್ತಿ ಹೋಗುತ್ತಿದ್ದಾಗ ಭಾರತ ಸುದ್ದಿ ನೀಡುವ ತಯಾರಿ ನಡೆಸಿತ್ತು. ಒಂದು ಕಡೆ ಅಮೆರಿಕ ವಿಶ್ವದ ಪೊಲೀಸರಂತೆ ವರ್ತಿಸಿ, ಬೇರೆ ದೇಶಗಳ ಮೇಲೆ ನಿರ್ಬಂಧ ಹೇರಿ, ಬೇರೆ ದೇಶವನ್ನು ಒಡೆಯಲು ರಹಸ್ಯ ಕಾರ್ಯಾಚರಣೆ ನಡೆಸಿ, ಒಂದು ದೇಶದ ಆಂತರಿಕ ವಿಭಜನೆಯನ್ನು ಕುಶಲತೆಯಿಂದ ನಿರ್ವಹಿಸಿ ತನ್ನ ಪಾರುಪತ್ಯ ಸ್ಥಾಪಿಸುವುದರಲ್ಲಿ ನಿರತವಾಗಿದ್ದರೆ, ಇನ್ನೊಂದು ಕಡೆ ಚೀನಾ ಅಭಿವೃದ್ಧಿಯ ಹೆಸರಿನಲ್ಲಿ ಬೇರೆ ದೇಶಗಳನ್ನು ಸಾಲದ ಬಲೆಯಲ್ಲಿ ಸುತ್ತುತ್ತಿರುವ ಸಮಯದಲ್ಲಿ ಭಾರತ ಮಾತ್ರ ಸಂಪೂರ್ಣವಾಗಿ ವಿಭಿನ್ನವಾದುದನ್ನೇ ನಿರ್ಮಿಸುವಲ್ಲಿ ನಿರತವಾಗಿತ್ತು. ಭಾರತ ಇತರ ದೇಶಗಳೊಂದಿಗೆ ಸಂಬಂಧಗಳನ್ನು ಗಟ್ಟಿಗೊಳಿಸುವುದರಲ್ಲಿ ಶ್ರಮವಹಿಸಿತ್ತು. ಭಾರತದ ವಹಿವಾಟು ಒಪ್ಪಂದಗಳು ಕೇವಲ ವ್ಯಾಪಾರದ ಒಪ್ಪಂದಗಳಾಗಿರದೇ ಅರ್ಥಪೂರ್ಣ, ಪರಸ್ಪರ ಪ್ರಯೋಜನಕಾರಿ ಸಂಬಂಧವನ್ನು ನಿರ್ಮಿಸಿತು. ಅದರ ಪರಿಣಾಮವಾಗಿಯೇ ಇತ್ತೀಚೆಗೆ ಭಾರತ ಮತ್ತು ಪಾಕಿಸ್ತಾನದ ನಡುವಿನ ಯುದ್ಧದ ಸಂದರ್ಭದಲ್ಲಿ ಬಹುತೇಕ ರಾಷ್ಟ್ರಗಳು ಭಾರತವನ್ನು ಸಮರ್ಥಿಸಿದವು ಅಥವಾ ಸುಮ್ಮನೇ ಕುಳಿತವು. ಒಂದು ಕಾಲದಲ್ಲಿ ಭಾರತವೆಂದರೆ ಅಸ್ತವ್ಯಸ್ತಗೊಂಡ ಪ್ರಜಾಪ್ರಭುತ್ವ ಎಂದು ದೂರುತ್ತಿದ್ದ ದೇಶಗಳೇ ಈಗ ಪ್ರಜಾಪ್ರಭುತ್ವವನ್ನು ಸ್ಥಿರಗೊಳಿಸುವ ಶಕ್ತಿಯುತ ದೇಶ ಭಾರತ ಎಂದು ಕರೆಯುತ್ತಿವೆ. ತಮ್ಮ ತಂತ್ರಜ್ಞಾನಗಳನ್ನು ಹಂಚಿಕೊಳ್ಳಲು ನಿರಾಕರಿಸುವ ದೇಶಗಳು ಈಗ ಭಾರತದೊಂದಿಗೆ ಸಹಯೋಗ ನೀಡಲು ಸಾಲುಗಟ್ಟಿ ನಿಂತಿವೆ. ಭಾರತ ಕೇವಲ 'ಕಾರ್ಮಿಕರ ಮಾರುಕಟ್ಟೆ', 'ಬಡವರ ಬೀಡು' ಎಂದು ಹಳೆಯ ಪುಸ್ತಕಗಳಲ್ಲಿ ಓದಿದ ದೇಶಗಳು ಸದ್ಯಕ್ಕಂತೂ ಇಂದಿನ ಭಾರತ ಅದಲ್ಲ ಎಂಬುದನ್ನು ಅರಿತುಕೊಂಡಂತಿದೆ.

ಇನ್ನು ಭಾರತವು ಅಮೆರಿಕಕ್ಕೆ ಕೊಟ್ಟ ಏಟಿನ ಉರಿ, ಪ್ರಮಾಣ, ಅದರ ಪರಿಣಾಮಗಳೆಲ್ಲ ಮುಂದಿನ ದಿನಗಳಲ್ಲೇ ತಿಳಿಯಬೇಕು. ಆದರೆ ಒಂದಂತೂ ನಿಜ, ಊರಿನ ಪೈಲ್ವಾನನೊಬ್ಬ ಒಂದೇ ಸಲ ನಾಲ್ಕು ಜನರಿಗೆ ಹೊಡೆದರೆ ಅದು ಸುದ್ದಿಯಲ್ಲ. ಆದರೆ ಅದೇ ಪೈಲ್ವಾನನಿಗೆ ಸಾಮಾನ್ಯ ಸಣಕಲು ಮನುಷ್ಯನೊಬ್ಬ ಒಂದೇ ಏಟು ಕೊಟ್ಟರೂ ಅದು ಊರಿನಲ್ಲೆಲ್ಲ ದೊಡ್ಡ ಸುದ್ದಿ. ಈಗ ಆಗಿದ್ದೂ ಅದೇ, ಇತರ ರಾಷ್ಟ್ರಗಳ ಮೇಲೆ ನಿರ್ಬಂಧ ಹೇರುವ, ಯುದ್ಧಕ್ಕೆ ಇಳಿಯುವ, ತಾನು ಹೇಳಿದಂತೆಯೇ ಕೇಳಬೇಕು ಎಂದು ಹಂಬಲಿಸುವ ಅಮೆರಿಕ ಏನೇ ಮಾಡಿದರೂ ಅದು ಸುದ್ದಿಯಲ್ಲ, ಅದು ಹತ್ತರೊಂದಿಗೆ ಹನ್ನೊಂದು. ಆದರೆ ಅಮೆರಿಕ ಮಾತ್ರವಲ್ಲ, ಇತರ ಕೆಲವು ದೇಶಗಳ ನಿರೀಕ್ಷೆಗೂ ಮೀರಿ ಭಾರತ ಪ್ರತಿಕ್ರಿಯೆ ನೀಡಿದ್ದು ದೊಡ್ಡ ಸುದ್ದಿ.

ಈಗ ಮತ್ತೊಮ್ಮೆ ಓಕ್ ಮತ್ತು ಬಿದಿರಿನ ಕತೆ ಓದಿಕೊಳ್ಳಿ.

# ಸತ್ತ ಬಳಿಕವೂ ಬದುಕುವ ಆಸೆ ಇದೆಯಾ?

## ವೈದ್ಯಾಧ್ಯಾಯ

ಡಾ. ಮುರಲೀಮೋಹನ್ ಚೂಂತಾರು
vveditoped@gmail.com

ನಿನ್ನೆ (ಆಗಸ್ಟ್ 3ರಂದು) ಭಾರತದಾದ್ಯಂತ 'ಅಂಗಾಂಗ ದಾನಿಗಳ ದಿನ'ವನ್ನು ಆಚರಿಸಲಾಗಿದೆ. ಅಂಗಾಂಗ ದಾನದ ಕುರಿತು ಅರಿವು ತುಂಬಿ ಪ್ರೇರೇಪಿಸುವ ಉದ್ದೇಶ ಆ ಆಚರಣೆಯದ್ದು. 140 ಕೋಟಿಗೂ ಜಾಸ್ತಿ ಜನಸಂಖ್ಯೆಯಿರುವ ಭಾರತದಲ್ಲಿ ಲಕ್ಷಾಂತರ ಮಂದಿಗೆ ಮೂತ್ರಪಿಂಡ, ಯಕೃತ್, ಹೃದಯ, ಪಿತ್ತಜನಕಾಂಗ ಮತ್ತು ಶ್ವಾಸಕೋಶಗಳ ತುರ್ತು ಅಗತ್ಯವಿದೆ. ಆದರೆ ದಾನಿಗಳ ಕೊರತೆ ಕಾಡುತ್ತಿದೆ. ಕೇವಲ ಸಾವಿರಗಳ ಸಂಖ್ಯೆಯಲ್ಲಿರುವ ಅಂಗಾಂಗ ದಾನಿಗಳಿಂದಾಗಿ ಲಕ್ಷಾಂತರ ಮಂದಿಯ ಜೀವನಷ್ಟವಾಗುತ್ತಿದೆ. ಸಾಕಷ್ಟು ಮಾಹಿತಿಯ ಕೊರತೆ, ಕಾನೂನಿನ ಅಡಚಣೆ ಯಿಂದಾಗಿ ಮತ್ತು ಸೂಕ್ತ ಮಾರ್ಗದರ್ಶನ ಲಭ್ಯವಿಲ್ಲದ ಕಾರಣ, ಬದುಕಿ ಬಾಳಬೇಕಾದ ಜೀವಗಳು ಕಮರಿಹೋಗುತ್ತಿವೆ.

ಉದಾಹರಣೆಗೆ, ಭಾರತದಲ್ಲಿ ವಾರ್ಷಿಕ ಸರಾಸರಿ ಎರಡೂವರೆ ಲಕ್ಷ ಮಂದಿಗೆ ಮೂತ್ರಪಿಂಡ ಕಸಿಯ ಅವಶ್ಯಕತೆಯಿದೆ; ಆದರೆ 4ರಿಂದ 5 ಸಾವಿರ ಮಂದಿಗೆ ಮಾತ್ರ ದಾನಿಗಳು ಸಿಗುತ್ತಾರೆ. ಹೀಗಾಗಿ, ಅಂಗಾಂಗ ದಾನಗಳ ಬಗ್ಗೆ ಜಾಗೃತಿ ನೀಡುವ ಮಹತ್ಕಾರ್ಯ ಆಗಲೇಬೇಕಿದೆ. ನಮ್ಮಲ್ಲಿ ಬಹಳಷ್ಟು ಮಂದಿಗೆ ಹಗಲು ಇರುಳಾಗುತ್ತದೆಯೇ ಹೊರತು, ಬದುಕಿಗೆ ಗೊತ್ತು–ಗುರಿ ಇಲ್ಲ. ಯಾಕೆ ಬದುಕುತ್ತಿದ್ದೇವೆ ಎಂಬುದರ ಅರಿವೂ ಇಲ್ಲ. ಬದುಕಿದ್ದೂ ಸತ್ತಂತಿರುವ ಬದಲು, ಸತ್ತ ಮೇಲೂ ನಾವು ಬದುಕುವಂತಾಗುವುದು ಸಾರ್ಥಕತೆ ಎನಿಸಿಕೊಳ್ಳುತ್ತದೆ.

**ಏನಿದು ಅಂಗಾಂಗ ದಾನ?**

ಅಂಗಾಂಗ ದಾನದಲ್ಲಿ ಎರಡು ವಿಧಗಳಿವೆ. ಅವೆಂದರೆ– 1) ಜೀವಂತ ವ್ಯಕ್ತಿಗಳು ಮಾಡುವ ದಾನ; 2) ಮೃತರು ಅಥವಾ ಮಿದುಳು ನಿಷ್ಕ್ರಿಯಗೊಂಡವರಿಂದ ಆಗುವ ದಾನ.

ಜೀವಂತ ವ್ಯಕ್ತಿಯ ದೇಹದಲ್ಲಿ ಮರುಸೃಷ್ಟಿಯಾಗುವ ಅಂಗಾಂಶಗಳು, ಜೀವಕೋಶಗಳು ಮತ್ತು ದ್ರವ್ಯಗಳನ್ನು ದಾನಮಾಡುವುದು ಮೊದಲ ವಿಧಕ್ಕೆ ಸೇರುತ್ತದೆ. ಉದಾಹರಣೆಗೆ, ರಕ್ತದಾನ, ವೀರ್ಯದಾನ, ಚರ್ಮದಾನ, ಅಸ್ಥಿಮಜ್ಜೆ ದಾನ ಇತ್ಯಾದಿ. ಅಂತೆಯೇ, ದೇಹದ ಯಾವುದಾದರೂ ಅಂಗ ಅಥವಾ ಭಾಗಗಳನ್ನು ಇನ್ನೊಬ್ಬರಿಗೆ ದಾನ ಮಾಡುವುದೂ ಈ ವಿಧದಲ್ಲಿ ಸೇರಿದೆ. ಉದಾಹರಣೆಗೆ ಎರಡು ಕಿಡ್ನಿಗಳಲ್ಲಿ ಒಂದನ್ನು ನೀಡುವುದು, ಯಕೃತ್ತಿನ ಒಂದು ಭಾಗ ಅಥವಾ ಸಣ್ಣ ಕರುಳಿನ ಒಂದು ಭಾಗವನ್ನು ನೀಡುವುದು ಇತ್ಯಾದಿ. ಇನ್ನು, ಮೃತರು ಅಥವಾ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳ ಹೃದಯ, ಶ್ವಾಸಕೋಶ, ಪಿತ್ತಜನಕಾಂಗ, ಸಣ್ಣ ಕರುಳು, ಮೇದೋಜೀರಕಾಂಗ, ಕಾರ್ನಿಯಾ (ಅಕ್ಷಿಪಟಲ), ಮೂಳೆಗಳು, ಹೃದಯದ ಕವಾಟಗಳು ಇತ್ಯಾದಿ ಅಂಗಗಳು/ಭಾಗಗಳನ್ನು ತೆಗೆದು ಮತ್ತೊಬ್ಬ ರೋಗಿಗೆ ಅಳವಡಿಸುವುದು ಎರಡನೇ ವಿಧಕ್ಕೆ ಸೇರುತ್ತದೆ. ಒಬ್ಬ ವ್ಯಕ್ತಿಯಿಂದ ಕನಿಷ್ಠ 8 ಜೀವಗಳನ್ನು ಉಳಿಸಬಹುದು. ಅಂಕಿ–ಅಂಶಗಳ ಪ್ರಕಾರ, ನಿಮಿಷಕ್ಕೊಬ್ಬರು ಸಾಯುತ್ತಾರೆ. ಇಂಥ ಪ್ರತಿಯೊಬ್ಬರೂ ಅಂಗಾಂಗ ದಾನ ಮಾಡಿದಲ್ಲಿ ನಿಮಿಷಕ್ಕೆ 8 ಜೀವಗಳು ಪುನರ್ಜನ್ಮ ಪಡೆಯುವ ಸಾಧ್ಯತೆಯಿದೆ.

**ಏನಿದು ಬ್ರೈನ್ ಡೆತ್?**

ಅಪಘಾತದಿಂದಾಗಿ ತಲೆಗೆ ಏಟುಬಿದ್ದಾಗ ಅಥವಾ ಇನ್ನಾವುದೇ ಕಾರಣದಿಂದ ಮಿದುಳಿಗೆ ಘಾಸಿಯಾದಾಗ, ಅಲ್ಲಿಗೆ ರಕ್ತಸಂಚಾರ ಸಂಪೂರ್ಣ ನಿಂತಿರುತ್ತದೆ. ಆಮ್ಲಜನಕದ ಪೂರೈಕೆಯೂ ಸ್ಥಗಿತವಾಗಿರುತ್ತದೆ. ಆದರೆ ಹೃದಯ, ಶ್ವಾಸಕೋಶ ತಮ್ಮ ಪಾಡಿಗೆ ತಾವು ಕಾರ್ಯನಿರ್ವಹಿಸುತ್ತಿರುತ್ತವೆ. ವ್ಯಕ್ತಿಯನ್ನು ತೀವ್ರ ನಿಗಾ ಘಟಕದಲ್ಲಿರಿಸಿ ಕೃತಕ ಉಸಿರಾಟ ವ್ಯವಸ್ಥೆಯ ಮುಖಾಂತರ ಆಮ್ಲಜನಕದ ಪೂರೈಕೆ ನಡೆಯುತ್ತಿರುತ್ತದೆ. ಹೃದಯ, ಶ್ವಾಸಕೋಶ, ಪಿತ್ತಜನಕಾಂಗ, ಮೂತ್ರಪಿಂಡಗಳಿಗೆ ಆಮ್ಲಜನಕದ ಸರಬರಾಜು ಆಗುತ್ತಲೇ ಇರುತ್ತದೆ. ಆದರೆ ವ್ಯಕ್ತಿ ಮಾತ್ರ ಬದುಕಿದ್ದೂ ಸತ್ತಂತಿರುತ್ತಾನೆ. ವೈದ್ಯಕೀಯ ಪರಿಭಾಷೆಯಲ್ಲಿ ಇದನ್ನು 'ಬ್ರೈನ್ ಡೆತ್' ಅಥವಾ 'ಮಿದುಳು ನಿಷ್ಕ್ರಿಯತೆ' ಎಂದು ಕರೆಯಲಾಗುತ್ತದೆ.

ಇಂಥ ವ್ಯಕ್ತಿಯ ದೇಹದಿಂದ ಅಂಗಾಂಗಗಳನ್ನು ಆತನ ಬಂಧುಗಳ ಸಮ್ಮತಿಯೊಂದಿಗೆ ತೆಗೆದು, ಅವುಗಳ ಅಗತ್ಯವಿರುವ ರೋಗಿಗಳಿಗೆ ಅಳವಡಿಸಬಹುದು. ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳು ಕೃತಕ ಉಸಿರಾಟದ ವ್ಯವಸ್ಥೆಯನ್ನು ತೆಗೆದೊಡನೆಯೇ ಸಾವನ್ನಪ್ಪುತ್ತಾರೆ. ಅದಕ್ಕೂ ಮುನ್ನ ಹೀಗೆ ಅಂಗಾಂಗ ದಾನ ಮಾಡಿದಲ್ಲಿ, ಮತ್ತೊಬ್ಬ ವ್ಯಕ್ತಿಯಲ್ಲಿ ಮರುಹುಟ್ಟು ಪಡೆಯುತ್ತಾರೆ ಮತ್ತು ಸಾವಿನಲ್ಲೂ ಸಾರ್ಥಕತೆಯನ್ನು ಪಡೆಯುತ್ತಾರೆ. ಮಿದುಳು ನಿಷ್ಕ್ರಿಯವಾಗಿರುವ ಬಗ್ಗೆ ವೈದ್ಯರು ಲಿಖಿತ ರೂಪದಲ್ಲಿ ವರದಿ ನೀಡಿದ ಬಳಿಕವೇ ಎಲ್ಲ ರೀತಿಯ ಕಾನೂನು ಕ್ರಮಗಳನ್ನು ಅನುಸರಿಸಿ ಅಂಗಾಂಗ ದಾನಕ್ಕೆ ಸಮ್ಮತಿಸಲಾಗುತ್ತದೆ. ದಾನಿಗಳಿಂದ ಹೀಗೆ ಪಡೆದ ಹೃದಯವನ್ನು 4–5 ಗಂಟೆಗಳ ಒಳಗೆ, ಪಿತ್ತಜನಕಾಂಗವನ್ನು 10–12 ಗಂಟೆಗಳ ಒಳಗೆ ಹಾಗೂ ಮೂತ್ರಪಿಂಡವನ್ನು 24 ಗಂಟೆಗಳ ಒಳಗೆ, ಅಗತ್ಯವಿರುವ ರೋಗಿಗಳಿಗೆ ಜೋಡಿಸಲಾಗುತ್ತದೆ.

ಇದೇ ರೀತಿಯಲ್ಲಿ, ಚರ್ಮ, ಹೃದಯದ ಕವಾಟಗಳು, ಮೂಳೆಗಳ ದಾನವೂ ಸಾಧ್ಯವಿದೆ. ಸಹಜವಾಗಿ ಸತ್ತ ವ್ಯಕ್ತಿಗಳಿಂದ ನೇತ್ರಗಳನ್ನು 4–5 ಗಂಟೆಗಳ ಒಳಗೆ ತೆಗೆದು ಅಗತ್ಯವಿರುವವರಿಗೆ ಜೋಡಿಸಲಾಗುತ್ತದೆ. ಸತ್ತು ಮಣ್ಣಾಗುವ ಹಲವಾರು ಅಂಗಾಂಗಗಳು ಮತ್ತೆ ಬೇರೊಬ್ಬ ರೋಗಿಯಲ್ಲಿ ಬದುಕಿ ಬಾಳುತ್ತವೆ. ಒಟ್ಟಿನಲ್ಲಿ ಬದುಕಿರುವಾಗ ಮಾಡುವ ರಕ್ತದಾನದಂತೆಯೇ, ನೇತ್ರದಾನ, ಅಂಗಾಂಗ ದಾನ ಮತ್ತು ದೇಹದಾನಗಳೂ ಬಹಳ ಪವಿತ್ರವಾದ ದಾನಗಳಾಗಿರುತ್ತವೆ ಎನ್ನಲಡ್ಡಿಯಿಲ್ಲ.

**ಯಾರು ದಾನಮಾಡಬಹುದು?**

ಅಂಗಾಂಗ ದಾನಕ್ಕೆ ಯಾವುದೇ ರೀತಿಯ ಚೌಕಟ್ಟಿಲ್ಲ, ಸಣ್ಣ ಮಗುವಿನಿಂದ ಹಿಡಿದು ವೃದ್ಧರು ಕೂಡ ಸ್ವ–ಇಚ್ಛೆಯಿಂದ ಅಂಗಾಂಗ ದಾನ ಮಾಡಬಹುದು. ಆದರೆ ನಮ್ಮ ದೇಶದಲ್ಲಿ ಮೂಢನಂಬಿಕೆ ಮತ್ತು ತಪ್ಪು ಕಲ್ಪನೆಗಳಿಂದಾಗಿ ಅಂಗಾಂಗ ದಾನಿಗಳ ಸಂಖ್ಯೆ ಬಹಳ ಕಡಿಮೆಯಿದೆ. ಸಂಪೂರ್ಣ ಅಂಗಾಂಗಗಳಿಲ್ಲದ ಮೃತದೇಹಕ್ಕೆ ಅಂತ್ಯಸಂಸ್ಕಾರ ಮಾಡಿದರೆ ಪರಲೋಕ ಪ್ರಾಪ್ತಿಯಾಗುವುದಿಲ್ಲ, ಮೋಕ್ಷ ಸಿಗುವುದಿಲ್ಲ ಎಂಬ ಮೂಢನಂಬಿಕೆಯಿಂದಾಗಿ ಅಂಗಾಂಗ ದಾನಿಗಳ ಕೊರತೆ ಕಾಡುತ್ತಿದೆ.

ಅದೇ ರೀತಿಯಲ್ಲಿ, ಸರಿಯಾದ ನಿಯಂತ್ರಣ ಮತ್ತು ಸೂಕ್ತ ಕಾನೂನಿನ ಚೌಕಟ್ಟು ಇಲ್ಲದ ಕಾರಣ 80 ಮತ್ತು 90ರ ದಶಕದಲ್ಲಿ ಅಂಗಾಂಗ ಮಾರಾಟ ದಂಧೆ ವ್ಯಾಪಕವಾಗಿತ್ತು. ಈ ನಿಟ್ಟಿನಲ್ಲಿ ಸಾರ್ವಜನಿಕ ಸಂಸ್ಥೆಗಳು, ಸರಕಾರಿ ಸಂಸ್ಥೆಗಳು ಮತ್ತು ಸ್ವಯಂಸೇವಕ ಸಂಸ್ಥೆಗಳು ಜನರನ್ನು ಉತ್ತೇಜಿಸುವ ಕಾರ್ಯ ಮಾಡಬೇಕು ಹಾಗೂ ಅಂಗಾಂಗ ದಾನದ ಬಗ್ಗೆ ಅರಿವು ಮೂಡಿಸುವ ತುರ್ತುಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಅಂಗಾಂಗ ದಾನಿಗಳು ಮತ್ತು ದಾನ ಪಡೆಯುವ ವ್ಯಕ್ತಿಗಳ ನಡುವಿನ ಅಂತರವನ್ನು ಕಡಿಮೆ ಮಾಡಲು, ದಾನಿಗಳ ಬ್ಯಾಂಕ್ ಸ್ಥಾಪಿಸುವ ತುರ್ತು ಅವಶ್ಯಕತೆಯಿದೆ. ಹೀಗೆ ಮಾಡಿದಲ್ಲಿ, ಬದಲಿ ಅಂಗ ಸಿಗದೆ ಸಾಯುವ ರೋಗಿಗಳ ಸಂಖ್ಯೆ ಕಡಿಮೆಯಾಗಬಹುದು. ಬಡವ–ಬಲ್ಲಿದ ಎನ್ನದೆ, ಅಗತ್ಯವಿರುವ ಎಲ್ಲರಿಗೂ ಅಂಗಾಂಗಗಳು ಸಿಗುವಂತಾಗಲು ಸರಕಾರವು ತುರ್ತುಕ್ರಮ ಕೈಗೊಳ್ಳಬೇಕಾದ ಅನಿವಾರ್ಯತೆಯೂ ಇದೆ.

**ಕಾನೂನು ಏನನ್ನುತ್ತದೆ?**

ಭಾರತದಲ್ಲಿ 1994ರಲ್ಲಿ ಅಂಗಾಂಗ ದಾನವನ್ನು ಸರಕಾರವು ಕಾನೂನುಬದ್ಧಗೊಳಿಸಿದೆ. ಭಾರತದಲ್ಲಿ 1967ರಲ್ಲಿ ಮೊದಲ ಬಾರಿಗೆ ಮೂತ್ರಪಿಂಡದ ಕಸಿ ಮಾಡಲಾಯಿತು, 1994ರಲ್ಲಿ ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಬದಲಿ ಹೃದಯವನ್ನು ಜೋಡಿಸಲಾಯಿತು ಮತ್ತು 1995ರಲ್ಲಿ ಮದ್ರಾಸಿನ ಆಸ್ಪತ್ರೆಯಲ್ಲಿ ಬದಲಿ ಅಂಗಾಂಗ ಜೋಡಣೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು. ಇಂಥ ಕುಸುರಿ ಚಿಕಿತ್ಸೆಯನ್ನು ನಿರ್ವಹಿಸಬಲ್ಲ ನೂರಾರು ಸುಸಜ್ಜಿತ ಆಸ್ಪತ್ರೆಗಳು ಭಾರತದಲ್ಲಿವೆ; ಆದರೆ ಅಂಗಾಂಗ ದಾನಿಗಳದ್ದೇ ಕೊರತೆ ಎಂಬುದು ದುರದೃಷ್ಟಕರ ಸಂಗತಿ. ಅಂಕಿ–ಅಂಶಗಳ ಪ್ರಕಾರ, 2012ರಲ್ಲಿ ಸುಮಾರು ಒಂದೂವರೆ ಲಕ್ಷ ಮಂದಿ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದರು ಮತ್ತು ಇದರಲ್ಲಿ ಶೇಕಡ 1ರಷ್ಟು ಮಂದಿ ಮಾತ್ರ ಅಂಗಾಂಗ ದಾನ ಮಾಡಿದ್ದಾರೆ ಎಂಬುದು ಈ ವಸ್ತುಸ್ಥಿತಿಗೆ ಪುಷ್ಟಿ ನೀಡುತ್ತದೆ. ಒಂದು ಅಂದಾಜಿನ ಪ್ರಕಾರ, ಭಾರತದಲ್ಲಿ ವರ್ಷಕ್ಕೆ 2 ಲಕ್ಷ ಮಂದಿಗೆ ಮೂತ್ರಪಿಂಡದ ಅಗತ್ಯವಿದೆ, ಆದರೆ ಸಿಗುತ್ತಿರುವುದು 6,000ರಿಂದ 7,000 ಮಂದಿಗೆ ಮಾತ್ರ; 50ರಿಂದ 55 ಮಂದಿಗೆ ಹೃದಯದ ಅಗತ್ಯವಿದೆ, ಆದರೆ ಹತ್ತಿಪ್ಪತ್ತು ಮಂದಿಗೆ ಮಾತ್ರ ಹೃದಯ ಸಿಗುತ್ತಿದೆ; 50,000 ಮಂದಿಗೆ ಯಕೃತ್ತಿನ ಅವಶ್ಯಕತೆಯಿದೆ, ಆದರೆ 800ರಿಂದ 1000 ಮಂದಿಗೆ ಮಾತ್ರ ಈ ಭಾಗ್ಯ ದೊರಕುತ್ತಿದೆ. ಸಂತಸದ ಸಂಗತಿಯೆಂದರೆ ನೇತ್ರದಾನಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

**ನಾವೇನು ಮಾಡಬೇಕು?**

ನಮ್ಮ ಬಂಧು–ಮಿತ್ರರು ಅಪಘಾತದಲ್ಲಿ ಮೃತಪಟ್ಟಲ್ಲಿ, ಅವರ ಹತ್ತಿರದವರಿಗೆ ತಿಳಿಹೇಳಿ ಮೃತರ ಅಂಗಾಂಗಗಳ ದಾನಕ್ಕೆ ವ್ಯವಸ್ಥೆ ಮಾಡಿಸಲು ಒಪ್ಪಿಸಬೇಕು. ನಾವು ಕೂಡ ದೇಹದಾನ ಮತ್ತು ನೇತ್ರದಾನಕ್ಕೆ ಒಪ್ಪಿಗೆ ನೀಡಬೇಕು. ಅಂಗಾಂಗ ದಾನಕ್ಕೂ ಮೊದಲೇ ಒಪ್ಪಿಗೆ ನೀಡಿದಲ್ಲಿ, ಆಕಸ್ಮಿಕವಾಗಿ ಸಾವು ಸಂಭವಿಸಿದಾಗ ಮೃತರ ಅಂಗಾಂಗಗಳಿಂದ ಮತ್ತಷ್ಟು ಜೀವಗಳಿಗೆ ಉಪಯೋಗವಾಗಬಹುದಲ್ಲವೇ? ಆದ್ದರಿಂದ ಸಹೃದಯಿಗಳೇ, ಸ್ಥಳೀಯ ನೇತ್ರಧಾಮಗಳಲ್ಲಿ, ವೈದ್ಯಕೀಯ ಕಾಲೇಜುಗಳಲ್ಲಿ ನಿಮ್ಮ ಹೆಸರುಗಳನ್ನು ನೋಂದಾಯಿಸಿ ನೇತ್ರದಾನ–ಅಂಗಾಂಗದಾನ–ದೇಹದಾನಕ್ಕೆ ಸಿದ್ಧರಾಗಿ. ಬದುಕಿದ್ದೂ ಸತ್ತಂತೆ ಇರುವುದಕ್ಕಿಂತ, ಸತ್ತ ಬಳಿಕವೂ ಬದುಕುವುದರಲ್ಲಿಯೇ ಸಾರ್ಥಕತೆ ಅಡಗಿದೆ. ನಾವು ಸತ್ತ ಬಳಿಕವೂ ನಮ್ಮ ಕಣ್ಣುಗಳಿಂದ ಇನ್ನೊಬ್ಬರು ನೋಡುವಂತಾಗುವುದಕ್ಕಿಂತ ದೊಡ್ಡ ಭಾಗ್ಯ ಇನ್ನಾವುದೂ ಇಲ್ಲ. ನಮ್ಮ ಮಿದುಳು ನಿಷ್ಕ್ರಿಯಗೊಂಡ ಕಾರಣಕ್ಕೆ ನಮ್ಮ ದೇಹದಿಂದ ತೆಗೆಯಲ್ಪಟ್ಟ ಹೃದಯವು ಇನ್ನೊಬ್ಬರ ದೇಹದಲ್ಲಿ ಮಿಡಿಯುತ್ತಲೇ ಇರುವಂತಾದರೆ ಅದಕ್ಕಿಂತ ಸಾರ್ಥಕತೆ ಬೇಕೇ?

ಒಟ್ಟಾರೆ ಹೇಳುವುದಾದರೆ, ನಾವು ಸತ್ತ ಬಳಿಕ ನಮ್ಮ ದೇಹವು ಮಣ್ಣಲ್ಲಿ ಮಣ್ಣಾಗಿ ಹೋಗುವುದಕ್ಕಿಂತ, ನಮ್ಮ ಅಂಗಾಂಗಗಳು ದಾನವಾಗುವಂತಾದರೆ ನಾಲ್ಕಾರು ಜೀವಗಳು ಬದುಕಿ ಬಾಳಬಹುದು. ಆದ್ದರಿಂದ ಅಂಗಾಂಗ ದಾನಕ್ಕೆ ಸಂಕಲ್ಪಿಸೋಣ, ಮಾನವತೆಯನ್ನು ಎತ್ತಿಹಿಡಿಯೋಣ.

**(ಲೇಖಕರು ಬಾಯಿ, ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರು)**

## ನೆಲದ ಸಿರಿ

ಆದರ್ಶ್ ಶೆಟ್ಟಿ, ಉಪ್ಪಿನಂಗಡಿ

# ರೈತರನ್ನು ಕಾಡುತ್ತಿವೆ ಹಲವು ಸಂಕಷ್ಟಗಳು

ರೈತರು ನಮ್ಮ ದೇಶದ ಬೆನ್ನೆಲುಬು. ಅವರು ಹಗಲು–ರಾತ್ರಿ ಶ್ರಮಪಡದಿದ್ದರೆ ಹೊಲ–ಗದ್ದೆ–ತೋಟಗಳಲ್ಲಿ ಉತ್ತಮ ಇಳುವರಿಯ ಫಸಲು ಅಸಾಧ್ಯ. ನಮ್ಮ ಸಾಮಾಜಿಕ ವ್ಯವಸ್ಥೆಗೆ ರೈತರು ಅಷ್ಟೊಂದು ಅನಿವಾರ್ಯವಾಗಿದ್ದರೂ ಕೂಡ, ಅವರು ಎದುರಿಸುತ್ತಿರುವ ಸವಾಲು–ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟವರಿಂದ ಹೇಳಿಕೊಳ್ಳುವಷ್ಟು ಪ್ರತಿಸ್ಪಂದನ ದಕ್ಕುತ್ತಿಲ್ಲ.

ರೈತರಿಗೆ ರಸಗೊಬ್ಬರದ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ, ಈ ಬಗ್ಗೆ ರಾಜ್ಯಮಟ್ಟದಲ್ಲಿ ಈಗಾಗಲೇ ಹುಯಿಲೆದ್ದಿದೆ. ಅವಧಿಗಿಂತ ಮೊದಲೇ ಮುಂಗಾರಿನ ಪ್ರವೇಶದಿಂದಾಗಿ ಒಂದುಕಡೆ ಸಂತುಷ್ಟಗೊಂಡಿರುವ ರಾಜ್ಯದ ರೈತರು, ಮತ್ತೊಂದೆಡೆ ರಸಗೊಬ್ಬರಗಳ ಕೊರತೆಯಿಂದಾಗಿ ಪರದಾಡುವಂತಾಗಿದೆ. ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ಬೆಳೆ ಬೆಳೆದ ರೈತರಲ್ಲಿ ಸಹಜವಾಗಿಯೇ ಉತ್ತಮ ಫಸಲು ಹಾಗೂ ಆದಾಯವನ್ನು ಪಡೆಯುವ ನಿರೀಕ್ಷೆಯಿರುತ್ತದೆ. ಏತನ್ಮಧ್ಯೆ ಗಿಡಗಳಿಗೆ ರೋಗಗಳುಂಟಾಗಿ ಇಳುವರಿ ಸಿಗದಿದ್ದಾಗ ಅಥವಾ ಬೆಳೆನಷ್ಟವಾದಾಗ, ಬ್ಯಾಂಕ್‌ನ ಸಾಲವನ್ನು ತೀರಿಸಲಾಗದೆ ರೈತರು ಹತಾಶರಾಗುವ ನಿದರ್ಶನಗಳು ಸಾಕಷ್ಟಿವೆ. ಸಮಾಜದಲ್ಲಿಂದು ಅನಗತ್ಯ ವಿಚಾರಗಳಿಗೆ ಮಾನ್ಯತೆ ನೀಡುವ, ದುಂದುವೆಚ್ಚ ಮಾಡುವ ಸರಕಾರಗಳು, ರೈತಾಪಿ ವರ್ಗದ ಸಮಸ್ಯೆಗಳ ಕಡೆಗೆ ಗಮನಹರಿಸುವುದು ಯಾವಾಗ?

ರೈತರದ್ದು ವರ್ಷಪೂರ್ತಿ ಬಿಡುವಿಲ್ಲದ ಚಟುವಟಿಕೆಗಳು ಎನ್ನಬೇಕು. ಹೊಲ–ಗದ್ದೆ–ತೋಟಗಳಲ್ಲಿ ರೈತರು ಒಂದಲ್ಲಾ ಒಂದು ಕೆಲಸದಲ್ಲಿ ತೊಡಗಿರಲೇಬೇಕಾಗುತ್ತದೆ. ಬೀಜ ಬಿತ್ತನೆಗೂ ಮುಂಚೆ ಭೂಮಿಯನ್ನು ಹಸನು ಮಾಡುವುದರಿಂದ ಮೊದಲ್ಗೊಂಡು ಬೆಳೆಯ ಕಟಾವಿನವರೆಗೂ ಕಳೆಗಳ ನಾಶ, ಕೀಟನಾಶಕ ಸಿಂಪಡಿಕೆ, ಪ್ರಾಣಿಗಳಿಂದ ಬೆಳೆಗಳನ್ನು ಸಂರಕ್ಷಿಸುವಿಕೆ ಸೇರಿದಂತೆ ಹಲವು ಕೆಲಸಗಳಲ್ಲಿ ಅವರು ತೊಡಗಿಸಿಕೊಳ್ಳಲೇಬೇಕಾಗುತ್ತದೆ. ರೈತನೊಬ್ಬ ಹೀಗೆ ದಿನವಿಡೀ ದುಡಿದು ತನ್ನ ಮನೆಯನ್ನು ಸಾಕಿ ಸಲಹುವುದಲ್ಲದೆ, ಸಮಾಜಕ್ಕೆ ಅನ್ನದಾತನಾಗಿ, ದೇಶದ ಆರ್ಥಿಕಾಭಿವೃದ್ಧಿಗೆ ಪೂರಕವಾಗಿ ಮಹತ್ವದ ಕೊಡುಗೆ ನೀಡುತ್ತಾನೆ. ಹೀಗಾಗಿ, ಕೃಷಿ ಪರಂಪರೆಗೆ ಹೊರತಾದ ಭಾರತವನ್ನು ಕಲ್ಪಿಸಿಕೊಳ್ಳಲಾಗದಷ್ಟರ ಮಟ್ಟಿಗೆ ರೈತರ ಯೋಗದಾನ ಗಮನಾರ್ಹವಾಗಿದೆ. ಇಷ್ಟಾಗಿಯೂ, ಕೃಷಿ ವಲಯದೆಡೆಗೆ ನಮ್ಮ ಆಳುಗರದ್ದು ಬಹುತೇಕ ಕೊನೆಯ ಆದ್ಯತೆಯೇ, ನಿರ್ಲಕ್ಷ್ಯವೇ!

ರೈತರ ಕೃಷಿಕಾರ್ಯಕ್ಕೆ ಪೂರಕವಾಗಿರುವ ಹೈನುಗಾರಿಕೆ ವಲಯವೂ ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಪಶು ಆಹಾರದ ಕೊರತೆ, ಪಶುಗಳಿಗೆ ಬಾಧಿಸುವ ಚರ್ಮದ ಗಂಟುರೋಗ, ಹಸಿರು ಮೇವಿನ ಕೊರತೆ, ವಾತಾವರಣದಲ್ಲಿ ಏರುಪೇರು ಮುಂತಾದ ಸಮಸ್ಯೆಗಳು ಹೈನುಗಾರಿಕೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿವೆ. ಗ್ರಾಮೀಣರ ಸ್ಥಿತಿಗತಿಯನ್ನು ಸುಧಾರಿಸುವಲ್ಲಿ ಹೈನುಗಾರಿಕೆಯೂ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಆದ್ದರಿಂದ, ಮೇಲೆ ಉಲ್ಲೇಖಿಸಲಾಗಿರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಆಳುಗರು ಕಟಿಬದ್ಧರಾಗಬೇಕಿದೆ. ಏಕೆಂದರೆ, ಕೃಷಿಕರಾಗಲಿ ಅಥವಾ ಹೈನುಗಾರರಾಗಲಿ ತಮ್ಮ ಕೌಟುಂಬಿಕ ಅಭಿವೃದ್ಧಿಯ ನೆಲೆಯಲ್ಲಿ ಮಾತ್ರವಲ್ಲದೆ ಸಮಾಜದ ಅಭಿವೃದ್ಧಿಗೂ ಪೂರಕವಾಗಿ ದುಡಿಯುವಂಥವರು. ಹೀಗಾಗಿ, ಅವರ ಸ್ವಾಭಿಮಾನ ಮತ್ತು ಸ್ವಾವಲಂಬನೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಾದ್ದು ಆಳುಗರ ಕರ್ತವ್ಯ.

ನಮ್ಮ ಸಮಾಜದಲ್ಲಿ ಕೆಲವೊಂದು ಕುಟುಂಬಗಳಿಗೆ ಕೂಲಿನಾಲಿಯೇ ಬದುಕಿಗೆ ಆಧಾರವಾದರೆ, ರೈತಾಪಿ ವರ್ಗಗಳಿಗೆ ಕೃಷಿಯೇ ಜೀವನಾಡಿ. ಉದ್ಯೋಗಸ್ಥರಿಗಾದರೆ ಆಯಾ ತಿಂಗಳ ಮೊದಲ ವಾರದಲ್ಲಿ ವೇತನವು ಜೇಬಿಗೆ ಬಂದು ಬೀಳುತ್ತದೆ, ವ್ಯಾಪಾರ–ವ್ಯವಹಾರಗಳಲ್ಲಿ ತೊಡಗಿಕೊಂಡವರಿಗೂ ಅವರದ್ದೇ ಆದ ಆದಾಯದ ಮೂಲಗಳಿರುತ್ತವೆ. ಆದರೆ ಅಂದಂದಿನ ಕೂಲಿ ಮಾಡಿಯೇ ಹಣವನ್ನು ಸಂಪಾದಿಸುವ ಅನಿವಾರ್ಯತೆ ಇರುವವರಿಗೆ, ಅಂದಿನ ಕೂಲಿಕೆಲಸಕ್ಕೆ ಅವಕಾಶವೇ ಸಿಗದಿದ್ದರೆ ಮನೆಯವರು ಉಪವಾಸ ಬೀಳಬೇಕಾಗುತ್ತದೆ.

ಅಂತೆಯೇ, ವರ್ಷಪೂರ್ತಿ ಶ್ರಮಪಟ್ಟು ಬೆಳೆದ ಬೆಳೆಯು, ಪ್ರಾಣಿಗಳ ಹಾವಳಿಯಿಂದಲೋ, ಮಳೆ–ಮಹಾಪೂರದಂಥ ಪ್ರಕೃತಿ ವಿಕೋಪಗಳಿಂದಲೋ ಹಾಳಾದರೆ, ಕೃಷಿಕರು ತಮ್ಮ ಕುಟುಂಬವನ್ನು ಸಲಹಲು ಇನ್ನಿಲ್ಲದ ಕಸರತ್ತು ಮಾಡಬೇಕಾಗುತ್ತದೆ. ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸ, ಹೆಣ್ಣು ಮಕ್ಕಳ ಮದುವೆಯಂಥ ಬಾಬತ್ತುಗಳಿಗೆ ಕೃಷಿಯ ಆದಾಯವನ್ನೇ ನೆಚ್ಚಿಕೊಂಡಿರುತ್ತಾರೆ ಮತ್ತು ಕೈತುಂಬಾ ದಕ್ಕುವ ಫಸಲಿನ ಭರವಸೆಯಲ್ಲೇ ರಾಷ್ಟ್ರೀಕೃತ ಅಥವಾ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಮಾಡಿರುತ್ತಾರೆ. ಆದರೆ ಕೃಷಿಯಿಂದ ದಕ್ಕಬೇಕಾದ ವರಮಾನಕ್ಕೇ ತತ್ವಾರವಾದರೆ, ರೈತರು ಇತ್ತ ಅವಲಂಬಿತರನ್ನು ಸಾಕಲಾರದೆ, ಅತ್ತ ಬ್ಯಾಂಕ್ ಸಾಲದ ಕಂತನ್ನೂ ತುಂಬಲಾಗದೆ ಅಡಕತ್ತರಿಯಲ್ಲಿ ಸಿಲುಕಬೇಕಾಗುತ್ತದೆ. ಆದ್ದರಿಂದ ಕೂಲಿ ಕಾರ್ಮಿಕರು, ಕೃಷಿಕರು ಮತ್ತು ಹೈನುಗಾರರದ್ದು ಯಾವತ್ತಿಗೂ ಅನಿಶ್ಚಿತತೆಯ ಬದುಕೇ.

ಮೇಲೆ ವಿವರಿಸಲಾಗಿರುವ ಅಪ್ರಿಯ ಸತ್ಯಗಳನ್ನು ಮನಗಂಡೇ, ಸಾಂಪ್ರದಾಯಿಕವಾಗಿ ಕೃಷಿ ಚಟುವಟಿಕೆಯನ್ನೇ ನೆಚ್ಚಿಕೊಂಡು ಬಂದಿರುವ ಕುಟುಂಬಕ್ಕೆ ಸೇರಿದ ಇಂದಿನ ಪೀಳಿಗೆಯವರು ಕೃಷಿ ಕ್ಷೇತ್ರದ ಕಡೆಗೆ ಒಲವನ್ನು ತೋರುತ್ತಿಲ್ಲ. ದೇಶದ ಭವಿಷ್ಯ ಮತ್ತು ಒಟ್ಟಾರೆ ಚಿತ್ರಣವನ್ನು ಬದಲಾಯಿಸಬಲ್ಲ ಸಾಮರ್ಥ್ಯವಿರುವ ಇಂಥ ಯುವಜನರು, ಕೃಷಿಕಾರ್ಯ ಮತ್ತು ಹೈನುಗಾರಿಕೆಗಳು ತ್ರಾಸದಾಯಕ ಚಟುವಟಿಕೆಗಳೆಂದು ಭಾವಿಸಿ, ಉದ್ಯೋಗವನ್ನು ಅರಸಿ ನಗರಮುಖಿಗಳಾಗಿದ್ದಾರೆ. ಹೀಗಾಗಿ ಕೃಷಿಯನ್ನು 'ಕುಲಕಸುಬಿನಂತೆ' ನಿರ್ವಹಿಸಿಕೊಂಡು ಬರುತ್ತಿದ್ದ ಕುಟುಂಬಗಳು, ಆ ಕಸುಬಿನ ಸ್ಥಾಪಿತ ಸಂಪ್ರದಾಯ, ಆಚರಣೆ ಮತ್ತಿತರ ಚಟುವಟಿಕೆಗಳಿಂದ ವಿಮುಖಗೊಳ್ಳುವಂತಾಗಿದೆ; ಇದರಿಂದಾಗಿ ಕೃಷಿ ವಲಯದ ಭದ್ರಬುನಾದಿ ಅಲುಗಾಡುತ್ತಿದೆ. ವರ್ಷಗಳು ಉರುಳಿದಂತೆ ಕೃಷಿ ಭೂಮಿಗಳು ವಾಣಿಜ್ಯ ಭೂಮಿಗಳಾಗಿ ಪರಿವರ್ತನೆಗೊಂಡು ಅಲ್ಲಿ ಕಾರ್ಖಾನೆಗಳು/ಕೈಗಾರಿಕೆಗಳು ತಲೆಯೆತ್ತುವಂತಾಗಿದೆ. ಅವುಗಳ ಅವೈಜ್ಞಾನಿಕ ಯೋಜನೆ/ಚಟುವಟಿಕೆಗಳಿಂದಾಗಿ ವಿಷಯುಕ್ತ ಹೊಗೆ ಮತ್ತು ತ್ಯಾಜ್ಯವಸ್ತುಗಳು ವಾತಾವರಣಕ್ಕೆ ಬಿಡುಗಡೆಗೊಂಡು ಭೂಮಿ–ಜಲ–ಗಾಳಿಯ ಪರಿಸರಗಳು ಮಲಿನಗೊಳ್ಳುತ್ತಿವೆ.

ಒಂದೆಡೆ, ಫಲವತ್ತಾದ ಕೃಷಿಭೂಮಿಯು ಪರಭಾರೆಗೊಂಡು ಅಲ್ಲಿ ವಾಣಿಜ್ಯ ಕಟ್ಟಡಗಳು ತಲೆಯೆತ್ತುತ್ತಿದ್ದರೆ, ಮತ್ತೊಂದೆಡೆ ಹೆದ್ದಾರಿ ಅಗಲೀಕರಣ, ಅಭಿವೃದ್ಧಿ ಚಟುವಟಿಕೆಗಳ ಕಾರಣಕ್ಕೂ ಕೃಷಿಭೂಮಿಗಳ ಸ್ವಾಧೀನವಾಗುತ್ತಿರುವುದು, ಮರಗಿಡಗಳ ಮಾರಣಹೋಮವಾಗುತ್ತಿರುವುದು ವಿಷಾದನೀಯ ಬೆಳವಣಿಗೆ. ಆತ್ಮಹತ್ಯೆ ಪ್ರಕರಣಗಳು ಸೇರಿದಂತೆ ಇಂದು ರೈತಾಪಿ ವರ್ಗವು ಸಾಕಷ್ಟು ಸಮಸ್ಯೆಗಳನ್ನು ಹೊಂದಿದೆ. ರಸಗೊಬ್ಬರಗಳ ಅಲಭ್ಯತೆ, ಬೆಳೆದ ಬೆಳೆಗೆ ಬೆಂಬಲಬೆಲೆ ಅಥವಾ ಸೂಕ್ತ ಮಾರುಕಟ್ಟೆಯ ಕೊರತೆಯಂಥ ಹತ್ತಾರು ತೊಂದರೆಗಳು ರೈತ ಸಮೂಹವನ್ನು ಬಾಧಿಸುತ್ತಿರುವುದು ನಿನ್ನೆ ಮೊನ್ನೆಯಿಂದಲ್ಲ. ಆದರೆ, ಅವನ್ನು ಪರಿಹರಿಸುವ ಇಚ್ಛಾಶಕ್ತಿಯನ್ನು ತೋರುವ ಬದಲು ನಮ್ಮಲ್ಲಿ ರಾಜಕೀಯ ದೊಂಬರಾಟಗಳೇ ನಡೆಯುತ್ತವೆ. ರೈತರ ಹೆಸರಿನಲ್ಲೇ ಪ್ರಮಾಣವಚನ ಸ್ವೀಕರಿಸುವ ಕೆಲವು ರಾಜಕಾರಣಿಗಳು, ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ, ರೈತರ ಸಾಲಮನ್ನಾದಂಥ ಹಲವು ಆಶ್ವಾಸನೆಗಳನ್ನು ನೀಡುತ್ತಾರೆ. ಈ ಪೈಕಿ ಕೆಲವರು ಅವನ್ನು ಈಡೇರಿಸಿದರೆ, ಇನ್ನು ಕೆಲವರು ಚುನಾವಣಾ ಸಂದರ್ಭದಲ್ಲಷ್ಟೇ ರೈತರನ್ನು ಬಳಸಿಕೊಂಡು ನಂತರ ಕೈತೊಳೆದುಕೊಂಡುಬಿಡುತ್ತಾರೆ.

ಗೋವುಗಳನ್ನು ಸಾಕಿ–ಸಲಹಿ ಹೈನುಗಾರಿಕೆ ನಡೆಸುವ ಕುಟುಂಬಗಳಿರಬಹುದು ಅಥವಾ ಹೊಲ–ಗದ್ದೆಗಳಲ್ಲಿ ಬೇಸಾಯ ನಡೆಸುವ ಕುಟುಂಬಗಳಿರಬಹುದು, ಇಲ್ಲಿ ಬಹುಮುಖ್ಯವಾಗಿ ಪುರಾತನ ಕಾಲದಿಂದಲೂ ಹಿರಿಯರು ಆಚರಿಸಿಕೊಂಡು ಬಂದ ಸಂಪ್ರದಾಯ, ವಿಧಿ–ವಿಧಾನಗಳು ಮತ್ತು ಜೀವನಪದ್ಧತಿಗಳು ನಮ್ಮ ನೆಲದ ಅಸ್ಮಿತೆಯಾಗಿರುತ್ತವೆ, ಜೀವಾಳವಾಗಿರುತ್ತವೆ. ಇವು ನಾಶವಾಗದಂತೆ ನೋಡಿಕೊಳ್ಳಬೇಕಾದ್ದು ಹಾಗೂ ಕೃಷಿ ವಲಯಕ್ಕೆ ಅಸೀಮ ಉತ್ತೇಜನ ನೀಡಬೇಕಾದ್ದು ಆಳುಗರ ಧರ್ಮ. ಏಕೆಂದರೆ, ಮೊದಲೇ ಹೇಳಿದಂತೆ ಅನ್ನದಾತರಾದ ರೈತರು ನಮ್ಮ ದೇಶದ ಬೆನ್ನೆಲುಬು ಇದ್ದಂತೆ. ಕೃಷಿ ಚಟುವಟಿಕೆಗಳು ಮತ್ತು ಸಂಪ್ರದಾಯಗಳು ಯಾರದ್ದೋ ಸ್ವಾರ್ಥ ಮತ್ತು ದುರಾಸೆಗೆ ಸಿಲುಕಿ ಅವನತಿ ಹೊಂದುವುದು ಯಾವುದೇ ಸಮಾಜದ ಪಾಲಿಗೆ ಎಚ್ಚರಿಕೆಯ ಗಂಟೆಯಾಗುತ್ತದೆ. ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ನಮ್ಮ ಪೂರ್ವಜರು, ಅದರ ಭಾಗವಾಗಿ ಮಣ್ಣು ಮತ್ತು ಕೆಸರನ್ನು ಮೈಗೆ ಮೆತ್ತಿಕೊಂಡಿದ್ದರ ಜತೆಗೆ, ಮಣ್ಣಿನೊಡನೆ ಒಂದು ತೆರನಾದ ಭಾವನಾತ್ಮಕ ಸಂಬಂಧವನ್ನೂ ಹೊಂದಿದ್ದವರು. ಅದೇ ನೆಲೆಯಲ್ಲೇ ಬದುಕಿ ಬಾಳಿದವರು. ಆ ಭಾವನಾತ್ಮಕ ನಂಟು ನಿರಂತರವಾಗಿ ಮುಂದುವರಿದರೆ ಮಾತ್ರವೇ, 'ಭಾರತವು ಕೃಷಿ ಪ್ರಧಾನ ರಾಷ್ಟ್ರ' ಎಂಬ ಮಾತಿಗೂ ಸಾರ್ಥಕ್ಯ ಒದಗಿದಂತಾಗುತ್ತದೆ.

**(ಲೇಖಕರು ಹವ್ಯಾಸಿ ಬರಹಗಾರರು)**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:202

## ಸಮಾಚಾರ ಸಣ್ಣದಲ್ಲ

### ಅಪಾಯದ ಮಟ್ಟ ಮೀರಿದ ಗಂಗೆ!

**ವಾರಾಣಸಿ:** ಉತ್ತರ ಪ್ರದೇಶದ ಕೆಲವೆಡೆ ಕಳೆದ ಕೆಲ ದಿನಗಳಿಂದ ಸತತ ಮಳೆಯಾಗುತ್ತಿದ್ದು, ಗಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ವಾರಾಣಸಿಯಲ್ಲಿ ಗಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಪುಣ್ಯ ಕ್ಷೇತ್ರದಲ್ಲಿ ಪ್ರವಾಹ ಪರಿಸ್ಥಿತಿ ಸೃಷ್ಟಿಸಿದೆ. ಕಾಶಿ ನಗರದ ಎಲ್ಲಾ 84 ಘಟ್ಟಗಳೂ ಈಗ ಪ್ರವಾಹದಲ್ಲಿ ಮುಳುಗಿವೆ. ಅಸ್ಸಿ ಘಟ್ಟದಲ್ಲಿಯಂತೂ ಪ್ರವಾಹದ ನೀರು ರಸ್ತೆಗೂ ಆವರಿಸಿದೆ. ಇದರಿಂದ ಅಧಿಕಾರಿಗಳು ನದಿ ದಡದಲ್ಲಿನ ಅಂಗಡಿಗಳನ್ನು ಖಾಲಿ ಮಾಡುವಂತೆ ವರ್ತಕರಿಗೆ ಸೂಚನೆ ನೀಡಿದ್ದಾರೆ. ದಶಾಶ್ವಮೇಧ ಘಟ್ಟದಲ್ಲಿ ಸಂಜೆ ವೇಳೆ ನಡೆಯುವ ಪ್ರಸಿದ್ಧ ಗಂಗಾ ಆರತಿ ಕಾರ್ಯಕ್ರಮವನ್ನು ಈಗ ಮೇಲ್ಛಾವಣಿ ಮೇಲೆ ನಡೆಸಲಾಗುತ್ತಿದೆ. ಮಣಿಕರ್ಣಿಕಾ ಘಟ್ಟ ಮುಳುಗಿರುವುದರಿಂದ ಅಂತ್ಯಕ್ರಿಯೆ ವಿಧಿಗಳನ್ನು ಮೇಲ್ಛಾವಣಿಗಳಲ್ಲಿ ನಡೆಸಲಾಗುತ್ತಿದೆ.

### ಎನ್‌ಡಿಎ ಉಪ ರಾಷ್ಟ್ರಪತಿ ಅಭ್ಯರ್ಥಿ?

**ದೆಹಲಿ:** ಸೆ.9ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆಯಲ್ಲಿ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ'(ಎನ್‌ಡಿಎ) ಮೈತ್ರಿಕೂಟ ಅಭ್ಯರ್ಥಿಯಾಗಿಸಲು ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ ಎಂದು ಮೂಲಗಳಿಂದ ತಿಳಿದುಬಂದಿದೆ. ಹರಿಯಾಣ ಮೂಲದ ದೇವವ್ರತ್ ಅವರನ್ನು ಉಪ ರಾಷ್ಟ್ರಪತಿ ಹುದ್ದೆಗೆ ಅಭ್ಯರ್ಥಿಯನ್ನಾಗಿಸಲು ಪ್ರಧಾನಿ ನರೇಂದ್ರ ಮೋದಿ ಆಸಕ್ತಿ ಹೊಂದಿದ್ದಾರೆ ಎನ್ನಲಾಗಿದೆ. ಉಪ ರಾಷ್ಟ್ರಪತಿ ಹುದ್ದೆಗೆ ಜಗದೀಪ್ ಧನಕರ್ ಅವರು ಜು.21ರಂದು ರಾಜೀನಾಮೆ ನೀಡಿದ್ದಾರೆ. ಉಪ ರಾಷ್ಟ್ರಪತಿ ಆಯ್ಕೆಗೆ ಚುನಾವಣೆ ನಡೆದರೂ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟಕ್ಕೆ ಹೆಚ್ಚಿನ ಸಂಖ್ಯಾಬಲವಿದ್ದು, ಪರಿಸ್ಥಿತಿ ಅನುಕೂಲಕರವಾಗಿದೆ.



### ಅಮರನಾಥ ಯಾತ್ರೆ ನಿಗದಿಗೆ ಮುನ್ನ ಸ್ಥಗಿತ!

**ಶ್ರೀನಗರ:** ಅಮರನಾಥ ಯಾತ್ರೆ ಆ.3ರ ಭಾನುವಾರವೇ ಸ್ಥಗಿತಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜು.3ರಂದು ಪ್ರಾರಂಭವಾಗಿದ್ದು, ರಕ್ಷಾ ಬಂಧನ ಸಂದರ್ಭ ಆ.9ರಂದು ಮುಕ್ತಾಯಗೊಳ್ಳಬೇಕಿತ್ತು. ಜಮ್ಮು-ಕಾಶ್ಮೀರದಲ್ಲಿ ಇತ್ತೀಚೆಗೆ ಭಾರೀ ಮಳೆಯಾಗಿದ್ದರಿಂದ ರೈಲ್ವೆ ಹಳಿಗಳು ತೀವ್ರವಾಗಿ ಹಾನಿಗೊಳಗಾಗಿದ್ದವು. ಪಹಲ್ಗಾಮ್ ಮತ್ತು ಬಾಲ್ಟಾಲ್ ಮಾರ್ಗದುದ್ದಕ್ಕೂ ಹಳಿ ನಿರ್ವಹಣೆ ಅಗತ್ಯವಾಗಿದೆ. ಅವುಗಳ ದುರಸ್ತಿ, ನಿರ್ವಹಣೆ ನಡೆಸಬೇಕಾಗಿರುವುದರಿಂದ ಈ ಬಾರಿಯ ಅಮರನಾಥ ಯಾತ್ರೆಯನ್ನು ಒಂದು ವಾರ ಮೊದಲೇ ಸ್ಥಗಿತಗೊಳಿಸಲಾಗುತ್ತಿದೆ ಎಂದು ಕಾಶ್ಮೀರ ವಿಭಾಗೀಯ ಆಯುಕ್ತ ವಿಜಯ್ ಕುಮಾರ್ ಬಿಧುರಿ ಸ್ಪಷ್ಟಪಡಿಸಿದ್ದಾರೆ. ಭಾನುವಾರದಿಂದಲೇ ಹಳಿ ದುರಸ್ತಿಗೆ ಕಾರ್ಮಿಕರು ಮತ್ತು ಯಂತ್ರೋಪಕರಣಗಳನ್ನು ಬಳಸಲಾಗುತ್ತಿದೆ. ಹಾಗಾಗಿ, ಯಾತ್ರೆ ಪುನರಾರಂಭ ಅಸಾಧ್ಯ ಎಂದರು. ಈ ವರ್ಷ 4.10 ಲಕ್ಷಕ್ಕೂ ಹೆಚ್ಚು ಯಾತ್ರಿಕರು ಪವಿತ್ರ ಅಮರನಾಥ ಗುಹಾ ದೇವಾಲಯಕ್ಕೆ ಭೇಟಿ ನೀಡಿದ್ದಾರೆ ಎಂದು ಬಿಧುರಿ ಮಾಹಿತಿ ನೀಡಿದರು.

### ಪಾಕ್‌ನಲ್ಲಿ ಭೂಕಂಪ

**ಇಸ್ಲಾಮಾಬಾದ್:** ಪಾಕಿಸ್ತಾನದಲ್ಲಿ ಶನಿವಾರ ತಡರಾತ್ರಿ ಮತ್ತು ಭಾನುವಾರ ಬೆಳಗ್ಗೆ ಭಾರೀ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ 4.8ರಷ್ಟು ತೀವ್ರತೆ ದಾಖಲಾಗಿದೆ. ಖೈಬರ್ ಪಖ್ತುಂಖ್ವಾ, ಪಂಜಾಬ್, ಇಸ್ಲಾಮಾಬಾದ್ ಮತ್ತು ಆಜಾದ್ ಕಾಶ್ಮೀರದ ಹಲವು ಪ್ರದೇಶಗಳಲ್ಲಿ ಭೂಕಂಪವಾಗಿದೆ. ಜನರು ಮನೆ ನಡುಗಿನ ತಕ್ಷಣವೇ ಎಚ್ಚೆತ್ತ ಭೀತಿಯಿಂದ ಮನೆಗಳಿಂದ ಹೊರಗೋಡಿ ಬಂದಿದ್ದಾರೆ. ಭಾರತೀಯ ಕಾಲಮಾನ ಪ್ರಕಾರ ಮಧ್ಯಾಹ್ನ 12.40ರಲ್ಲಿ ಪಾಕ್‌ನಲ್ಲಿ ಭೂಮಿ ನಡುಗಿದೆ. ಭೂಕಂಪದ ಕೇಂದ್ರಬಿಂದು ಇಸ್ಲಾಮಾಬಾದ್ ಸಮೀಪದಲ್ಲಿ, 10 ಕಿ.ಮೀ. ಆಳದಲ್ಲಿತ್ತು ಎಂದು ಭಾರತದ ನ್ಯಾಷನಲ್ ಸೆಂಟರ್ ಫಾರ್ ಸಿಸ್ಮಾಲಜಿ ತಿಳಿಸಿದೆ. ತಡರಾತ್ರಿ ಸಂಭವಿಸಿದ ಭೂಕಂಪದಲ್ಲಿ ಯಾವುದೇ ದೊಡ್ಡ ಹಾನಿ ಅಥವಾ ಸಾವು-ನೋವು ತಕ್ಷಣಕ್ಕೆ ವರದಿಯಾಗಿಲ್ಲ.



VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಕೇಂದ್ರ ಚುನಾವಣಾ ಆಯೋಗ ಬಿಹಾರ ಮತದಾರರ ಪಟ್ಟಿಯಿಂದ ಬಡವರು, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತ ಸಮುದಾಯದವರನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದೆ. ಆಯೋಗದ ಕ್ರಮ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮತದಾನದ ಹಕ್ಕು ನಿರಾಕರಿಸಿದೆ. ಇದು ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ತರುವ ಕ್ರಮ.

ಪಾಕ್ ಆಕ್ರಮಿತ ಕಾಶ್ಮೀರದ ಖೈ ಗಾಲಾ ಗ್ರಾಮದಲ್ಲಿ ಅಂತಿಮ ವಿಧಿವಿಧಾನ

# ಪಹಲ್ಗಾಮ್ ದಾಳಿ ಪಾಕ್ ಉಗ್ರರ ಕೃತ್ಯ: ಮತ್ತೆ ದೃಢ

**ಇಸ್ಲಾಮಾಬಾದ್/ದೆಹಲಿ:** ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ಏ.22ರಂದು ದಾಳಿ ನಡೆಸಿದ 'ಟಿಆರ್‌ಎಫ್' ಉಗ್ರರು ಪಾಕಿಸ್ತಾನದವರೇ ಎಂಬುದು ಮತ್ತೊಮ್ಮೆ ದೃಢಪಟ್ಟಿದೆ.

ಆಪರೇಷನ್ ಮಹಾದೇವ್ ಸೇನಾ ಕಾರ್ಯಾಚರಣೆ ವೇಳೆ ಹತನಾದ ಪಹಲ್ಗಾಮ್ ದಾಳಿಕೋರ ತಾಹಿರ್ ಹಬೀಬ್‌ನ ಅಂತ್ಯಕ್ರಿಯೆಯ ವಿಧಿವಿಧಾನಗಳನ್ನು ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ)ದ ಖೈ ಗಾಲಾ ಎಂಬ ಗ್ರಾಮದಲ್ಲಿ(ಹಬೀಬ್ ಹುಟ್ಟೂರು) ನೂರಾರು ಜನರು ನೆರೆದು ನಡೆಸಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. ಈ ಸಂತಾಪ ಸೂಚಕ ಕಾರ್ಯಕ್ರಮಕ್ಕೆ ನಿಷೇಧಿತ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಸ್ಥಳೀಯ ಕಮಾಂಡರ್ ರಿಜ್ವಾನ್ ಹನೀಫ್ ಕೂಡಾ ಹಾಜರಾಗಿದ್ದ. ಆತನಿಗೆ ಬೆಂಗಾವಲಾಗಿ ಶಸ್ತ್ರಧಾರಿ ಹಲವಾರು ಉಗ್ರರೂ ಬಂದಿದ್ದರು. ಈ ವಿಧಿವಿಧಾನಗಳು ನಡೆದ ಸಂದರ್ಭದ ವಿಡಿಯೊಗಳು, ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಎ ವರ್ಗದ ಭಯೋತ್ಪಾದಕ ಎಂದು ಹೆಸರಿಸಲ್ಪಟ್ಟ ತಾಹಿರ್ ಹಬೀಬ್, ಪಹಲ್ಗಾಮ್ ದಾಳಿ ಸೇರಿದಂತೆ ಗಡಿಯಾಚೆಗಿನ ಹಲವು ಭಯೋತ್ಪಾದನೆ ಕೃತ್ಯಗಳಲ್ಲಿ ಭಾರತದ ಭದ್ರತಾ ಸಂಸ್ಥೆಗಳಿಗೆ ಬೇಕಾಗಿದ್ದ. ಜುಲೈ 28ರಂದು ಶ್ರೀನಗರದ ಹೊರವಲಯದಲ್ಲಿ ಹರ್ವಾನ್ ಬಳಿಯ ಲಿಡ್ವಾಸ್ ಅರಣ್ಯದಲ್ಲಿ ಮೂವರು ಪಾಕಿಸ್ತಾನಿ ಭಯೋತ್ಪಾದಕರನ್ನು ಭದ್ರತಾ ಪಡೆಗಳು ಆಪರೇಷನ್ ಮಹಾದೇವ್ ಕಾರ್ಯಾಚರಣೆಯಲ್ಲಿ ಹೊಡೆದುರುಳಿಸಿದ್ದವು. ಹತರಾದ ಆ ಮೂವರು ಉಗ್ರರಲ್ಲಿ ತಾಹಿರ್ ಹಬೀಬ್ ಕೂಡಾ ಇದ್ದ. ಮೂವರ ಬಳಿಯೂ ಪಾಕ್‌ನ ಗುರುತಿನ ಚೀಟಿಗಳಿದ್ದವು. ಪಾಕ್‌ನಲ್ಲಿ ತಯಾರಾದ ಚಾಕೊಲೇಟ್‌ಗಳೂ ವಶವಾಗಿದ್ದವು.

ಇದೆಲ್ಲಾ ಅಂಶಗಳೂ ಏ.22ರಂದು ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ದಾಳಿಯಲ್ಲಿ ಪಾಕಿಸ್ತಾನದ ಕೈವಾಡವಿದೆ ಎಂಬುದನ್ನು ದೃಢಪಡಿಸುತ್ತಿವೆ. ಪಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನಲ್ಲಿ ಏ.22ರಂದು 25 ಪ್ರವಾಸಿಗರು ಮತ್ತು ಒಬ್ಬ ಸ್ಥಳೀಯನ ಹತ್ಯಾಕಾಂಡದಲ್ಲಿ ಪಾಕಿಸ್ತಾನ ಮೂಲದ ಉಗ್ರರಾದ ಸುಲೇಮಾನ್, ತಾಹಿರ್ ಹಬೀಬ್ ಸೇರಿದಂತೆ ಮೂವರು ಭಾಗಿಯಾಗಿದ್ದರು.



### ರಿಜ್ವಾನ್ ಹಾಜರಿಗೆ ಕುಟುಂಬ ವಿರೋಧ

ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಸ್ಥಳೀಯ ಕಮಾಂಡರ್ ರಿಜ್ವಾನ್ ಹನೀಫ್ ಹಾಜರಿಗೆ ತಾಹಿರ್‌ನ ಕುಟುಂಬದವರು ವಿರೋಧ ವ್ಯಕ್ತಪಡಿಸಿದ್ದರು. ಅದನ್ನು ಲೆಕ್ಕಿಸದೇ ರಿಜ್ವಾನ್ ಹನೀಫ್ ಸಂತಾಪ ಸೂಚಕ ಸಭೆಗೆ ಬಂದಿದ್ದ. ಆಗ ತಾಹಿರ್‌ನ ಸೋದರಳಿಯ ವಿರೋಧ ವ್ಯಕ್ತಪಡಿಸಿದ. ಪ್ರತಿಯಾಗಿ ಲತೀಫ್ ಬೆಂಗಾವಲಿಗೆ ಬಂದಿದ್ದ ಉಗ್ರನೊಬ್ಬ ಬಂದೂಕು ಗುರಿಯಿಟ್ಟು ಸೋದರಳಿಯನನ್ನು ಹೆದರಿಸಿ ಸುಮ್ಮನಾಗಿಸಿದ ಎಂದು ತಿಳಿದುಬಂದಿದೆ.

ಕಳೆದ ಮೇ ತಿಂಗಳಲ್ಲಿ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ 9 ಉಗ್ರ ನೆಲೆಗಳನ್ನು ಧ್ವಂಸಗೊಳಿಸಿದಾಗ ಹತರಾದರು. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮುರಿಡ್ಕಿಯಲ್ಲಿ ಹತರಾದ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಹಲವು ನಾಯಕರ ಸಾಮೂಹಿಕ ಅಂತ್ಯಕ್ರಿಯೆ ನಡೆದಾಗ ಎಲ್‌ಇಟಿ ಕಮಾಂಡರ್ ಹಾಜರಿಯಲ್ಲಿ ನಡೆದಿತ್ತು. ಆಗ ಪಾಕ್ ಸೇನೆಯ ಹಿರಿಯ ಅಧಿಕಾರಿಗಳೂ ಹಾಜರಿದ್ದರು ಎಂಬುದು ಉಲ್ಲೇಖಾರ್ಹ.

### ಪಾಕ್ ಪರ ವಕಾಲತು

ಭಾರತದಲ್ಲಿನ ಪ್ರತಿಪಕ್ಷಗಳೇ ಪಹಲ್ಗಾಮ್ ದಾಳಿಯಲ್ಲಿ ಪಾಕಿಸ್ತಾನದ ಪಾತ್ರವಿಲ್ಲ. ಇದ್ದರೆ ಅದನ್ನು ದೃಢಪಡಿಸುವ ಪುರಾವೆ ಕೊಡಿ ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಿವೆ. ಪಾಕಿಸ್ತಾನದ ಪರ ಬಲವಾಗಿ ವಕಾಲತು ವಹಿಸುತ್ತಿವೆ. ಕೇಂದ್ರದ ಮಾಜಿ ಗೃಹ ಸಚಿವ ಪಿ.ಚಿದಂಬರಂ ಅವರಂತೂ ನೇರ ಮಾತುಗಳಲ್ಲಿಯೇ ಕೇಂದ್ರ ಸರಕಾರವನ್ನು ಪ್ರಶ್ನೆ ಮಾಡಿದ್ದರು. ಪಹಲ್ಗಾಮ್ ದಾಳಿ ನಡೆಸಿದ್ದು ಭಾರತದಲ್ಲಿ ನಿವಾಸಿಗಳೇ ಆಗಿದ್ದಾರೆ. ಪಾಕಿಸ್ತಾನದಿಂದ ಯಾವುದೇ ಉಗ್ರರು ಬಂದು ದಾಳಿ ನಡೆಸಿಯೇ ಇಲ್ಲ. ಇದೆಲ್ಲವೂ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಆರೋಪವಷ್ಟೇ ಎಂದು ವಾದಿಸಿದ್ದರು.

### ಟಿಆರ್‌ಎಫ್ ನಿಯೋಜನೆ

'ದಿ ರೆಸಿಸ್ಟೆನ್ಸ್ ಫ್ರಂಟ್'(ಟಿಆರ್‌ಎಫ್) ಪಾಕಿಸ್ತಾನದ ಅತ್ಯುಗ್ರ ಸಂಘಟನೆಯಾದ 'ಲಷ್ಕರ್ ಎ ತಯ್ಯಬಾ'(ಎಲ್‌ಇಟಿ)ದ ಪರ್ಯಾಯ ಭಯೋತ್ಪಾದಕ ಸಂಘಟನೆಯಾಗಿದೆ. ಲಷ್ಕರ್ ಎ ತಯ್ಯಬಾಗೆ ನಿಷೇಧ ವಿಧಿಸಿದ್ದರಿಂದ ಭಾರತದಲ್ಲಿನ ಭಯೋತ್ಪಾದನಾ ಚಟುವಟಿಕೆಗಳನ್ನು 'ಟಿಆರ್‌ಎಫ್' ಹೆಸರಿನಲ್ಲಿ ಉಗ್ರ ಸಂಘಟನೆ ನಾಯಕರು ಮುಂದುವರಿಸಿದ್ದಾರೆ ಎಂದು ವರದಿಯಾಗಿದೆ. ವಿಶ್ವಸಂಸ್ಥೆಯ ವರದಿಯಲ್ಲಿಯೂ ಇದು ಉಲ್ಲೇಖವಾಗಿದೆ. ಇದೇ 'ಟಿಆರ್ ಎಫ್'ನಿಂದಲೇ ತಾಹಿರ್ ಹಬೀಬ್ 'ಪಹಲ್ಗಾಮ್ ದಾಳಿ'ಗೆ ನಿಯೋಜನೆಗೊಂಡಿದ್ದ ಎಂಬ ಮಾಹಿತಿಯೂ ಇದೆ. ಈ ಅಂಶಗಳನ್ನು ಶ್ರೀನಗರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಜಿ.ವಿ.ಸುದೀಪ್ ಚಕ್ರವರ್ತಿ ಖಚಿತಪಡಿಸಿದ್ದಾರೆ.

4 ದಿನಗಳ ತೀವ್ರ ಶೋಧದ ಬಳಿಕ ನಜ್ಜುಗುಜ್ಜಾದ ಕಾರು ಪತ್ತೆ

# ಅಮೆರಿಕ ಅಪಘಾತ: ಭಾರತೀಯ ವೃದ್ಧ ದಂಪತಿಗಳ ದುರ್ಮರಣ

**ವಾಷಿಂಗ್ಟನ್:** ಜೀವನದ ಸಂಧ್ಯಾಕಾಲದಲ್ಲಿದ್ದ ನಾಲ್ವರು ಭಾರತೀಯ ವೃದ್ಧ ದಂಪತಿಗಳು ಅಮೆರಿಕ ದಲ್ಲಿ ಕಾರು ಅಪಘಾತದಲ್ಲಿ ದುರ್ಮರಣಕ್ಕೀಡಾಗಿದ್ದಾರೆ.

ಆಶಾ ದಿವಾನ್(85), ಕಿಶೋರ್ ದಿವಾನ್(89), ಶೈಲೇಶ್ ದಿವಾನ್(86) ಮತ್ತು ಗೀತಾ ದಿವಾನ್(84) ಅಮೆರಿಕದಲ್ಲಿ ಬಫೆಲೋದಿಂದ ವೆಸ್ಟ್ ವರ್ಜೀನಿಯ ರಾಜ್ಯದ ಮಾರ್ಷಲ್ ಕೌಂಟಿಯಲ್ಲಿರುವ ಪ್ರಭುಪಾದರ ಸುವರ್ಣ ಅರಮನೆ ವೀಕ್ಷಣೆಗೆ ತೆರಳುತ್ತಿದ್ದಾಗ ಅವರ ಟೊಯೊಟಾ ಕ್ಯಾಮ್ರಿ ಕಾರು(ನ್ಯೂಯಾರ್ಕ್ ನೋಂದಣಿ ಸಂಖ್ಯೆ ಇಕೆಡಬ್ಲ್ಯು 2611) ಅಪಘಾತಕ್ಕೀಡಾಗಿದೆ.

**ನಾಪತ್ತೆ ದೂರು:** ಮೊದಲಿಗೆ ನಾಲ್ವರೂ ವೃದ್ಧರು ಸಂಚರಿಸುತ್ತಿದ್ದ ಕಾರು ಮಂಗಳವಾರ ಮಧ್ಯಾಹ್ನ 2.45ರಿಂದ ಕಾಣೆಯಾಗಿದೆ ಎಂಬ ದೂರು ದಾಖಲಾಗಿತ್ತು. ನಾಲ್ವರು ಹಿರಿಯ ನಾಗರಿಕರಲ್ಲೊಬ್ಬರ ಕ್ರೆಡಿಟ್ ಕಾರ್ಡ್ ಪೆನ್ಸಿಲ್ವೇನಿಯಾದ ಬರ್ಗರ್ ಕಿಂಗ್ ರೆಸ್ಟೋರೆಂಟ್‌ನಲ್ಲಿ ಜು.29ರಂದು ಕಟ್ಟಕಡೆಯದಾಗಿ ಬಳಕೆ ಆಗಿರುವುದು ಪೊಲೀಸ್ ತನಿಖೆ ವೇಳೆ ಕಂಡು ಬಂದಿತು. ನಂತರ ತನಿಖೆ ತೀವ್ರಗೊಳಿಸಲಾಯಿತು. ಮಾರ್ಷಲ್ ಮತ್ತು ಒಹಿಯೊ ಕೌಂಟಿಗಳ ದೊಡ್ಡ ಪೊಲೀಸ ತಂಡವೇ ಶೋಧ ಕಾರ್ಯಕ್ಕೆ ಇಳಿಯಿತು. ಶೋಧ ಕಾರ್ಯ ತ್ವರಿತಗೊಳಿಸಲು ಹೆಲಿಕಾಪ್ಟರ್‌ಗಳನ್ನು ಬಳಸಿಕೊಳ್ಳಲಾಯಿತು. 'ದಿ ಕೌನ್ಸಿಲ್ ಆಫ್ ಹೆರಿಟೇಜ್ ಅಂಡ್ ಆರ್ಟ್ಸ್ ಆಫ್ ಇಂಡಿಯ'(ಸಿಎಚ್‌ಎಐ) ಸಂಸ್ಥೆಯ ಅಧ್ಯಕ್ಷ ಶಿಬು ನಾಯರ್ ಕೂಡಾ, ಭಾರತೀಯ ಸಮುದಾ ಯದ ಹಿರಿಯ ನಾಗರಿಕರ ಶೋಧಕ್ಕೆ ನೆರವಾಗುವಂತೆ ಸಾಮಾಜಿಕ ಜಾಲತಾಣದಲ್ಲಿ ಮನವಿ ಮಾಡಿದ್ದರು.

### 4 ದಿನಗಳ ಬಳಿಕ ಕಾರು ಪತ್ತೆ

ಕಡೆಗೆ ನಾಲ್ಕು ದಿನಗಳ ತೀವ್ರ ಶೋಧದ ಬಳಿಕ ಇಕೆಡಬ್ಲ್ಯು 2611 ನೋಂದಣಿ ಸಂಖ್ಯೆಯ ಕಾರು ಅಪಘಾತಕ್ಕೀಡಾಗಿ ನಜ್ಜುಗುಜ್ಜಾದ ಸ್ಥಿತಿಯಲ್ಲಿ ರಸ್ತೆ ಬದಿಯಲ್ಲಿ ಬಿದ್ದಿರುವುದು ಶನಿವಾರ ರಾತ್ರಿ 9.30ರ ವೇಳೆ ಪತ್ತೆಯಾಯಿತು. ಮಾರ್ಷಲ್ ಕೌಂಟಿಯ ಒಂದೆಡೆ ಕಾರು ಅಪಘಾತಕ್ಕೀಡಾಗಿ ರಸ್ತೆ ಬದಿ ಬಿದ್ದಿರುವುದನ್ನು ಪೊಲೀಸರು ಕಂಡು ಸಮೀಪಕ್ಕೆ ತೆರಳಿ ಪರಿಶೀಲಿಸಿದ್ದಾರೆ. ನಾಲ್ವರೂ ಹಿರಿಯ ನಾಗರಿಕರು ನಜ್ಜುಗುಜ್ಜಾದ ಕಾರಿನೊಳಗೇ ದುರ್ಮರಣಕ್ಕೀಡಾಗಿರುವುದು ಕಂಡುಬಂದಿದೆ ಎಂದು ಮಾರ್ಷಲ್ ಕೌಂಟಿಯ ಷರೀಫ್(ಪೊಲೀಸ್ ಅಧಿಕಾರಿ) ಮೈಕ್ ಡೌಗೆರ್ಟಿ ಅವರು ಹೇಳಿದ್ದಾರೆ.

## ಕಾಶ್ಮೀರ: 2,000 ವರ್ಷ ಹಳೆ ಶಿವಲಿಂಗ ಪತ್ತೆ

**ಅನಂತನಾಗ್:** ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಒಂದು ಬುಗ್ಗೆಯಲ್ಲಿ ಉತ್ಖನನ ನಡೆಸಿದಾಗ 2 ಸಾವಿರ ವರ್ಷಗಳಷ್ಟು ಹಳೆಯ ಶಿವಲಿಂಗ ಹಾಗೂ ದಕ್ಷಿಣ ಕಾಶ್ಮೀರ ಜಿಲ್ಲೆಯ ಐಶ್‌ಮುಖಮ್‌ನ ಸಾಲಿಯಾ ಪ್ರದೇಶದ ಕರ್ಕೂಟ್ ನಾಗ್‌ನಲ್ಲಿ ಹಿಂದೂ ದೇವರುಗಳ ವಿಗ್ರಹಗಳು ಪತ್ತೆಯಾಗಿವೆ.

ವಸಂತಕಾಲದಲ್ಲಿ ಪುನರುಜ್ಜೀವನ ಮತ್ತು ಪುನಃಸ್ಥಾಪನೆ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆ ಕೈಗೊಳ್ಳುತ್ತದೆ. ಉತ್ಖನನ ಕಾರ್ಯ ವೇಳೆ ಲಿಂಗು, ವಿಗ್ರಹಗಳು ಪತ್ತೆಯಾಗಿವೆ. ಜಮ್ಮು-ಕಾಶ್ಮೀರದ ಆರ್ಕೈವ್ಸ್, ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ವಿಗ್ರಹಗಳ ವಯಸ್ಸು ಮತ್ತು ಮೂಲವನ್ನು ನಿರ್ಧರಿಸಲು ವಸ್ತು ಮತ್ತು ಕಾರ್ಬನ್ ಡೇಟಿಂಗ್ ಪರೀಕ್ಷೆಗಾಗಿ ಶ್ರೀನಗರಕ್ಕೆ ಕಳುಹಿಸಲಾಗುವುದು ಎಂದಿದ್ದಾರೆ. ಈ ಸ್ಥಳ ಕರ್ಕೂಟ ರಾಜವಂಶದೊಂದಿಗೆ ಸಂಯೋಜಿಸುವ ಕಾಶ್ಮೀರಿ ಪಂಡಿತರಿಗೆ ಮಹತ್ವದ್ದಾಗಿದೆ. ಪ್ರದೇಶದಲ್ಲಿ ಕರ್ಕೂಟ ರಾಜವಂಶದ ಪ್ರಭಾವವಿದೆ. ಈ ಸ್ಥಳದಲ್ಲಿ ದೇವಾಲಯವಿತ್ತು ಎಂದು ಕೇಳಿ ತಿಳಿದಿದ್ದೇವೆ. ಆದ್ದರಿಂದ ಇಲ್ಲಿ ಹೊಸ ದೇವಾಲಯ ನಿರ್ಮಿಸಿ 'ಶಿವಲಿಂಗಗಳನ್ನು' ಅಲ್ಲಿ ಇಡಬೇಕೆಂದು ನಾವು ಸರ್ಕಾರಕ್ಕೆ ಮನವಿ ಮಾಡುತ್ತೇವೆ ಎಂದು ಕಾಶ್ಮೀರಿ ಪಂಡಿತರು ಒತ್ತಾಯಿಸಿದ್ದಾರೆ.

## 2 ರು. ಡಾಕ್ಟರ್ ರೈರು ನಿಧನ

**ತಿರುವನಂತಪುರಂ:** ಬಡವರಿಗಾಗಿ 5 ದಶಕಗಳ ಕಾಲ ಬಹುತೇಕ ಉಚಿತವಾಗಿ ಸೇವೆ ಸಲ್ಲಿಸಿದ, '2 ರು. ಡಾಕ್ಟರ್' ಎಂದೇ ಖ್ಯಾತರಾಗಿದ್ದ ಕೇರಳದ ಕಣ್ಣೂರಿನ ಡಾ. ಎ.ಕೆ. ರೈರು ಗೋಪಾಲ್ (80) ಭಾನುವಾರ ನಿಧನರಾದರು.

ಡಾ. ರೈರು ಗೋಪಾಲ್ ರೋಗಿಗಳ ಸಮಾಧಾನಕ್ಕಾಗಿ ಅವರಿಂದ ಕೇವಲ 2 ರು. ಸ್ವೀಕರಿಸುತ್ತಿದ್ದರು. 50 ವರ್ಷಗಳಿಗೂ ಹೆಚ್ಚು ಕಾಲ ಲಕ್ಷಾಂತರ ರೋಗಿಗಳಿಗೆ ಸೇವೆ ಸಲ್ಲಿಸಿದ್ದಾರೆ. ಇದೇ ಕಾರಣಕ್ಕೆ ಜನ ಅವರನ್ನು ಪ್ರೀತಿಯಿಂದ '2 ರು ಡಾಕ್ಟರ್' ಎಂದು ಕರೆಯಲು ಆರಂಭಿಸಿದ್ದರು. ವಿದ್ಯಾರ್ಥಿಗಳು ಮತ್ತು ಬಡವರು, ಕಾರ್ಮಿಕರ ಸಲುವಾಗಿ ಕೆಲವೊಮ್ಮ 'ಥಾನ್ ಮಾಣಿಕ್ಕಕಾವು ದೇವಸ್ಥಾನ' ಬಳಿಯಿರುವ ತಮ್ಮ ಮನೆಯಲ್ಲೇ ನಸುಕಿನ 3 ಗಂಟೆಗೆಲ್ಲಾ ಉಚಿತ ಚಿಕಿತ್ಸಾ ಸೇವೆ ಆರಂಭಿಸುತ್ತಿದ್ದರು. ಒಂದು ದಿನಕ್ಕೆ 300ಕ್ಕೂ ಹೆಚ್ಚು ರೋಗಿಗಳ ತಪಾಸಣೆ ನಡೆಸಿ ಚಿಕಿತ್ಸೆ ನೀಡುತ್ತಿದ್ದರು. ನಸುಕಿನ 2.15ಕ್ಕೆಲ್ಲಾ ನಿದ್ರೆಯಿಂದೆದ್ದು, ಮೊದಲು ಮನೆ ಹಿಂದಿನ ಕೊಟ್ಟಿಗೆ ಸ್ವಚ್ಛಗೊಳಿಸಿ, ಹಸುಗಳ ಆರೈಕೆ ಮಾಡಿ, ಹಾಲು ಕರೆಯುವ ಕೆಲಸಗಳನ್ನೆಲ್ಲಾ ಪೂರ್ಣಗೊಳಿಸುತ್ತಿದ್ದರು. ಬಳಿಕ ಪ್ರಾರ್ಥನೆ ಮತ್ತು ಹಾಲು ವಿತರಣೆ ಮಾಡಿ, ನಂತರ ಬೆಳಿಗ್ಗೆ 6.30ರ ವೇಳೆಗೆ ಮನೆಯಲ್ಲಿಯೇ ರೋಗಿಗಳಿಗೆ ಚಿಕಿತ್ಸೆ ನೀಡುವ ಸೇವೆ ಆರಂಭಿಸುತ್ತಿದ್ದರು. ಪತ್ನಿ ಡಾ.ಶಕುಂತಲಾ ಮತ್ತು ಸಹಾಯಕರು ಜನರನ್ನು ಸಾಲಾಗಿ ನಿಲ್ಲಿಸುವುದು, ಔಷಧ ವಿತರಣೆ ಕೆಲಸದಲ್ಲಿ ನೆರವಾಗುತ್ತಿದ್ದರು. ಮೆಡಿಕಲ್ ರೆಪ್‌ಗಳನ್ನು ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲ. ಔಷಧ ಕಂಪನಿಗಳ ಆಮಿಷ, ಉಚಿತ ಕೊಡುಗೆಗಳನ್ನೆಲ್ಲಾ ನಿರಾಕರಿಸುತ್ತಿದ್ದರು.



## ಪತಿ ಲೈಂಗಿಕ ದೌರ್ಬಲ್ಯ: ಪತ್ನಿ ಆರೋಪ ಮಾನಹಾನಿ ಅಲ್ಲ

**ಮುಂಬೈ:** ವಿಚ್ಛೇದನ ಕಾನೂನು ಪ್ರಕ್ರಿಯೆ ವೇಳೆ ಪತಿಯ ವಿರುದ್ಧ ಪತ್ನಿ ಮಾಡುವ ಲೈಂಗಿಕ ದೌರ್ಬಲ್ಯ ಆರೋಪಗಳು ಮಾನನಷ್ಟಕ್ಕೆ ಕಾರಣ ಆಗುವುದಿಲ್ಲ. ಪತ್ನಿಯ ಹಿತಾಸಕ್ತಿ ಗಳನ್ನು ರಕ್ಷಿಸಲು ಅಂತಹ ಆರೋಪಗಳನ್ನು ಮಾಡಿದರೆ ಅದು ಕಾನೂನು ಪ್ರಕ್ರಿಯೆಯ ಅಗತ್ಯ ಭಾಗವಾಗಿದೆ ಎಂದೇ ಭಾವಿಸಬೇಕಾಗುತ್ತದೆ ಎಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿದೆ.

ಪರಿತ್ಯಕ್ತ ಪತ್ನಿ ಮತ್ತು ಆಕೆಯ ಕುಟುಂಬದ ವಿರುದ್ಧ ಪುರುಷನ ಮಾನನಷ್ಟ ದೂರನ್ನು ವಜಾಗೊಳಿಸಿದ ಹೈಕೋರ್ಟ್ ನ್ಯಾ.ಎಸ್ ಎಂ ಮೋದಕ್, ಆದೇಶವನ್ನು ಸಾರ್ವಜನಿಕವಾಗಿ ಪ್ರಕಟಿಸಿದರು. ಹಿಂದೂ ವಿವಾಹ ಕಾಯ್ದೆಯಡಿ ಲೈಂಗಿಕ ದೌರ್ಬಲ್ಯ ಆರೋಪ ಗಳು ಬಹಳ ಪ್ರಸ್ತುತ ಮತ್ತು ವಿಚ್ಛೇದನಕ್ಕೆ ಕಾನೂನುಬದ್ಧ ಆಧಾರ ಆಗಬಹುದು. ವೈವಾಹಿಕ ಸಂಬಂಧದಲ್ಲಿ ಆಕೆಗೆ ಮೋಸ, ದೌರ್ಜನ್ಯವಾಗಿದೆ ಎಂದು ಸಾಬೀತುಪಡಿಸಲು ಪತ್ನಿ ಆರೋಪಗಳನ್ನು ಮಾಡುವುದು ಸರಿಯಿದೆ ಎಂದರು. ವಿಚ್ಛೇದನ ಮತ್ತು ಜೀವನಾಂಶ ಅರ್ಜಿಗಳಲ್ಲಿ ಮತ್ತು ಪ್ರತ್ಯೇಕ ಎಫ್ ಐಆರ್‌ನಲ್ಲಿ ಪತ್ನಿ ಮಾಡಿದ ಆಪಾದನೆಗಳು ಸಾರ್ವಜನಿಕ ದಾಖಲೆಯ ಭಾಗವಾಗಿದ್ದರಿಂದ ನನ್ನ ಮಾನಹಾನಿಯಾಗಿದೆ ಎಂದು ಪತಿ ಆರೋಪಿಸಿದ್ದರು. ವೈವಾಹಿಕ ಸಂಬಂಧದಲ್ಲಿ ಬಿರುಕುಂಟಾಗಿ ವಿಚ್ಛೇದನದ ಹಂತಕ್ಕೆ ಬಂದಾಗ, ಪತ್ನಿ ತನ್ನ ಹಿತಾಸಕ್ತಿ ಕಾಪಾಡಿಕೊಳ್ಳಲು ಪತಿ ವಿರುದ್ಧ ಲೈಂಗಿಕ ದೌರ್ಬಲ್ಯ ಆರೋಪ ಮಾಡುವುದು ಮಹಿಳೆಗೆ ಮುಖ್ಯವಾಗುತ್ತದೆ ಎಂದು ನ್ಯಾಯಾಲಯ ಭಾವಿಸು ತ್ತದೆ. ಅದನ್ನು ಮಾನನಷ್ಟವೆಂದು ಪರಿಗಣಿಸಲಾಗದು ಎಂದು ನ್ಯಾ. ಮೋದಕ್ ಹೇಳಿದರು.

ಭಾರತದ ರಕ್ಷಣಾ ಪಡೆಗಳ ಬಲ ವರ್ಧನೆ

## ಸ್ಪೇನ್ ಏರ್‌ಬಸ್ 16ನೇ ಸೇನಾ ಸರಕು ಸಾಗಣೆ ವಿಮಾನ ಭಾರತಕ್ಕೆ

**ಸೆವಿಲ್ಲೆ/ದೆಹಲಿ:** ಸ್ಪೇನ್‌ನಲ್ಲಿ ತಯಾರಾದ, 10 ಟನ್ ಸೇನಾ ಸಾಮಗ್ರಿಗಳನ್ನು ಸಾಗಿಸಬಲ್ಲ ಬೃಹತ್ ಸರಕು ಸಾಗಣೆ ವಿಮಾನ ಏರ್‌ಬಸ್ ಸಿ-295 ಅನ್ನು ಭಾರತ ಸ್ಪೇನ್‌ನ ಸೆವಿಲ್ಲೆ ನಗರದಲ್ಲಿ ಶನಿವಾರ ಸ್ವೀಕರಿಸಿದೆ. ಆ ಮೂಲಕ ಭಾರತೀಯ ಸಶಸ್ತ್ರ ಪಡೆಗಳ ರಕ್ಷಣಾ ಸಾಮರ್ಥ್ಯ ಮತ್ತಷ್ಟು ಹೆಚ್ಚಿದಂತಾಗಿದೆ.

ಸ್ಪೇನ್‌ನಿಂದ ಒಟ್ಟು 56 ಸಿ-295 ಸರಕು ಸಾಗಣೆ ವಿಮಾನಗಳನ್ನು ಖರೀದಿಸಲು ಭಾರತ 2021ರ ಸೆಪ್ಟೆಂಬರ್‌ನಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಅದರಲ್ಲಿ 16 ವಿಮಾನಗಳನ್ನು ಸ್ಪೇನ್‌ನಲ್ಲಿಯೇ ತಯಾರಿಸಿ ಆಮದು ಮಾಡಿಕೊಳ್ಳುವುದು. ಉಳಿದ 40 ವಿಮಾನಗಳನ್ನು ಭಾರತದಲ್ಲಿಯೇ ಸ್ಪೇನ್ ತಂತ್ರಜ್ಞರ ಸಹಯೋಗದಲ್ಲಿ ಜೋಡಿಸಿಕೊಳ್ಳುವುದು ಒಪ್ಪಂದದ ಭಾಗವಾಗಿದೆ.

ಸೆವಿಲ್ಲೆಯಲ್ಲಿನ ಏರ್‌ಬಸ್ ಡಿಫೆನ್ಸ್ ಮತ್ತು ಸ್ಪೇಸ್ ಅಸೆಂಬ್ಲಿ ಲೈನ್‌ನಲ್ಲಿ 16 ಏರ್‌ಬಸ್ ಸಿ-295 ಸೇನಾ ಸಾರಿಗೆ ವಿಮಾನಗಳಲ್ಲಿ ಕೊನೆಯ ವಿಮಾನವನ್ನು ವಾಯುಪಡೆ ಅಧಿಕಾರಿಗಳ ತಂಡ ಸ್ವೀಕರಿಸಿದೆ. ನಿಗದಿಗಿಂಥ 2 ತಿಂಗಳ ಮೊದಲೇ ಇ-295 ವಿಮಾನ ಹಸ್ತಾಂತರವಾಗಿದೆ ಎಂದು ಸ್ಪೇನ್‌ನಲ್ಲಿರುವ ಭಾರತೀಯ ರಾಯಭಾರಿ ದಿನೇಶ್ ಕೆ.ಪಟ್ನಾಯಕ್ ಮಾಹಿತಿ ಹಂಚಿಕೊಂಡಿದ್ದಾರೆ.

ಸಿ-295 ಸೇನಾ ಸರಕು ಸಾಗಣೆ ವಿಮಾನ ಸತತ 11 ಗಂಟೆಗಳವರೆಗೆ ಹಾರಾಟ ಸಾಮರ್ಥ್ಯ ಹೊಂದಿದೆ. ಸದ್ಯ ಭಾರತೀಯ ವಾಯುಪಡೆಯಲ್ಲಿರುವ ಹಳೆಯ ಅವ್ರೊ ಸರಕು ಸಾಗಣೆ ವಿಮಾನಗಳ ಬದಲಿಗೆ ಸ್ಪೇನ್‌ನಿಂದ ಸಮಕಾಲೀನ ತಂತ್ರಜ್ಞಾನದ ಸಿ-295 ಸರಕು ಸಾಗಣೆ ವಿಮಾನವನ್ನು ಭಾರತ ಖರೀದಿಸಿದೆ.

### ಆತ್ಮನಿರ್ಭರ ಭಾರತ

ಗುಜರಾತ್‌ನ ವಡೋದರದಲ್ಲಿ ಟಾಟಾ ಅಡ್ವಾನ್ಸ್ಡ ಸಿಸ್ಟಂ ಲಿ.(ಟಿಎಎಸ್‌ಎಲ್)ನಲ್ಲಿ ಸಿ-295 ವಿಮಾನಗಳನ್ನು ದೇಶೀಯವಾಗಿಯೇ ತಯಾರಿಸಲು ಟಾಟಾ ಏರ್ ಕ್ರಾಫ್ಟ್ ಕಾಂಪ್ಲೆಕ್ಸ್ ಅನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಜಂಟಿಯಾಗಿ 2024ರ ಅಕ್ಟೋಬರ್‌ನಲ್ಲಿ ಉದ್ಘಾಟಿಸಿದ್ದರು. ಸಿ-295 ಶ್ರೇಣಿಯ 40 ವಿಮಾನಗಳನ್ನು ಭಾರತದಲ್ಲಿ ತಯಾರಿಸುವ ಜವಾಬ್ದಾರಿಯನ್ನು ಹೊಂದಿದೆ.

## ಆಂಧ್ರ ಕ್ವಾರಿ ಅವಘಡ: 6 ಒಡಿಶಾ ಕಾರ್ಮಿಕರ ಸಾವು

**ಗುಂಟೂರು:** ಆಂಧ್ರಪ್ರದೇಶದ ಬಾಪಟ್ಲಾ ಜಿಲ್ಲೆಯ ಬಳ್ಳಿಕುರವ ಸಮೀಪದ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಭಾನುವಾರ ದೊಡ್ಡ ಬಂಡೆಗಳು ದಿಢೀರ್ ಉರುಳಿ ಬಿದ್ದ ಪರಿಣಾಮ ಕೆಲಸದಲ್ಲಿ ತೊಡಗಿದ್ದ 6 ಕಾರ್ಮಿಕರು ಸಾವನ್ನಪ್ಪಿದ್ದಾರೆ. ಇತರೆ 10 ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

10 ಮಂದಿಗೆ ತೀವ್ರ ಗಾಯ

ಮೃತರಾದ ಆರು ಕಾರ್ಮಿಕರೂ ಒಡಿಶಾ ರಾಜ್ಯದವರು. ಅವಶೇಷಗಳ ಅಡಿಯಿಂದ ನಾಲ್ಕು ಮೃತದೇಹಗಳನ್ನು ರಕ್ಷಣಾ ತಂಡಗಳು ಭಾನುವಾರ ಸಂಜೆಯವರೆಗೆ ಹೊರತೆಗೆದಿವೆ. ಅವಶೇಷಗಳಡಿ ಸಿಲುಕಿರುವ ಮತ್ತಿಬ್ಬರನ್ನು ಹೊರತರುವ ಪ್ರಯತ್ನ ನಡೆದಿದೆ. ಅವಘಡ ನಡೆದಾಗ ಸ್ಥಳದಲ್ಲಿ ಒಟ್ಟು 16 ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು ಎಂದು ಕಲ್ಲುಗಣಿ ಮೂಲಗಳು ತಿಳಿಸಿವೆ. 10 ಗಾಯಾಳುಗಳನ್ನು ನರಸರಾವ್ ಪೇಟೆ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಅವಘಡ ನಡೆದ ಕಲ್ಲು ಕ್ವಾರಿ.

**ಸುರಕ್ಷತಾ ಕ್ರಮವಿಲ್ಲ:** ಕಲ್ಲು ಗಣಿಯ ನಿರ್ವಹಣೆಯಲ್ಲಿಯೇ ಲೋಪ ಕಂಡುಬಂದಿದೆ. ಅಗತ್ಯ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿಲ್ಲ. ಕಾರ್ಮಿಕರನ್ನು ಅಪಾಯಕಾರಿ ಸ್ಥಿತಿಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಗಣಿ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಪ್ರತ್ಯೇಕ ತನಿಖೆ ಆರಂಭಿಸಿದ್ದಾರೆ. ಬಾಪಟ್ಲಾ ಜಿಲ್ಲಾಧಿಕಾರಿ ಜೆ.ವೆಂಕಟ ಮುರಳಿ ಮತ್ತು ಪೊಲೀಸ್ ವರಿಷ್ಠಾಧಿಕಾರಿ ತುಷಾರ್ ದುಡಿ, ಸ್ಥಳೀಯ ಅಧಿಕಾರಿಗಳ ಜತೆ ಸ್ಥಳಕ್ಕೆಭೇಟಿ ನೀಡಿ ಪರಿಶೀಲಿಸಿದ್ದಾರೆ. ಘಟನೆ ಬಗ್ಗೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತೀವ್ರ ಕಳವಳ ವ್ಯಕ್ತಪಡಿಸಿದ್ದು, ಅವಘಡಕ್ಕೆ ಕಾರಣ ತಿಳಿಯಲು ಸಮಗ್ರ ತನಿಖೆ ನಡೆಸುವಂತೆ ಆದೇಶಿಸಿದ್ದಾರೆ.

## ಗಡ್ಕರಿ ಮನೆಗೆ ಬಾಂಬ್ ಬೆದರಿಕೆ, ರಾವತ್ ಸೆರೆ

**ನಾಗಪುರ:** ಕೇಂದ್ರ ರಸ್ತೆ ಸಾರಿಗೆ-ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಮಹಾರಾಷ್ಟ್ರ ನಾಗಪುರದ ನಿವಾಸಕ್ಕೆ ಭಾನುವಾರ ಬೆಳಗ್ಗೆ 8.46 ವೇಳೆ ಬಾಂಬ್ ಬೆದರಿಕೆ ಬಂದಿದೆ. ಬಳಿಕ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಪೊಲೀಸರು ಶಂಕಿತನೊಬ್ಬನನ್ನು ಬಂಧಿಸಿದ್ದಾರೆ.



ನಾಗಪುರದ ವಾರ್ಧಾ ರಸ್ತೆಯಲ್ಲಿನ ಗಡ್ಕರಿ ಅವರ ಮನೆಯನ್ನು ಸ್ಫೋಟಿಸಲಾಗುವುದೆಂದು ಬೆದರಿಕೆ ಹಾಕಿದ್ದ ಮಹಲ್‌ನ ತುಳಸಿ ಬಾಗ್ ರಸ್ತೆ ನಿವಾಸಿಯಾದ ಉಮೇಶ್ ವಿಷ್ಣು ರಾವತ್ ಎಂಬವನನ್ನು ಸಂದೇಶ ಬಂದ ಕೆಲವೇ ಗಂಟೆಗಳಲ್ಲಿ ಬಂಧಿಸುವಲ್ಲಿ ಪ್ರತಾಪ್ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ. ರಾವತ್, ಮದ್ಯದಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಆತ ತನ್ನ ಮೊಬೈಲ್ ಫೋನ್‌ನಿಂದ ಕರೆ ಮಾಡಿ, ಗಡ್ಕರಿ ನಿವಾಸ 10 ನಿಮಿಷಗಳಲ್ಲಿ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದ. ಪೊಲೀಸರು ರಾವತ್‌ನನ್ನು ನಾಗಪುರದ ಬಿಮಾ ದವಾಖಾನಾ ಬಳಿ ಬಂಧಿಸಿದ್ದಾರೆ. ತನಿಖೆ ಮುಂದುವರಿದಿದೆ. ಜತೆಗೆ ಗಡ್ಕರಿ ಅವರ ನಿವಾಸದ ಸುತ್ತಲ ಭದ್ರತಾ ವ್ಯವಸ್ಥೆಯನ್ನು ಅಧಿಕಾರಿಗಳು ಇನ್ನಷ್ಟು ಹೆಚ್ಚಿಸಿದ್ದಾರೆ.

## ಕಾರು ಕಾಲುವೆಗೆ ಉರುಳಿ 11 ಸಾವು

**ಗೊಂಡಾ:** ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಭಾನುವಾರ ಬೆಳಗ್ಗೆ 15 ಪ್ರಯಾಣಿಕರಿದ್ದ ಬೊಲೆರೊ ವಾಹನ ಚಾಲಕನ ನಿಯಂತ್ರಣ ತಪ್ಪಿ ಕಾಲುವೆಗೆ ಉರುಳಿದೆ. ಪರಿಣಾಮ 7 ಮಕ್ಕಳು ಸೇರಿದಂತೆ ಕಾರಿನಲ್ಲಿದ್ದ 11 ಜನರು ಸಾವನ್ನಪ್ಪಿದ್ದಾರೆ. ಮೃತರು ಸಿಹಗಾಂವ್‌ನಿಂದ ಖರಗ್‌ಪುರದ ಪೃಥ್ವಿನಾಥ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿ ಪವಿತ್ರ ಜಲವನ್ನು ಸಂಗ್ರಹಿಸಲು ಬೊಲೆರೊ ಕಾರಿನಲ್ಲಿ ಹೊರಟಿದ್ದರು. ಬೆಲ್ವಾ ಬಹುತಾ ಬಳಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಸರಯೂ ನದಿಗೆ ಬಿದ್ದಿದೆ. ಕಾರು ನದಿಗೆ ಬೀಳುತ್ತಿದ್ದಂತೆ ಧಾವಿಸಿ ಬಂದ ಗ್ರಾಮಸ್ಥರು ಕೂಡಲೇ ಪೊಲೀಸರಿಗೆ ಕರೆ ಮಾಡಿದ್ದಾರೆ. ಕೆಲ ಗ್ರಾಮಸ್ಥರು ಮತ್ತು ರಕ್ಷಣಾ ತಂಡದ ಸಹಾಯದಿಂದ ನಾಲ್ವರನ್ನು ರಕ್ಷಿಸಲಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ನಾಲ್ವರ ಸ್ಥಿತಿಯೂ ಗಂಭೀರವಾಗಿದೆ. 11 ಮೃತದೇಹಗಳನ್ನೂ ನದಿಯಿಂದ ಹೊರತೆಗೆಯಲಾಗಿದೆ.

**ಸಂತಾಪ:** ಪ್ರಧಾನಿ ಮೋದಿ, ಸಿಎಂ ಯೋಗಿ ಆದಿತ್ಯನಾಥ್ ಘಟನೆಗೆ ಆಘಾತ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರು. ಪರಿಹಾರ ಘೋಷಿಸಿದ್ದಾರೆ.

## ಖಲಿಸ್ತಾನ್ ವಿರೋಧಿ ನಾಯಕ ಚಹಲ್ ಸಾವು

**ಕ್ಯಾಲಿಫೋರ್ನಿಯ:** ಭಾರತ ಮೂಲದ ಉದ್ಯಮಿ ಮತ್ತು ಸಾಮಾಜಿಕ ಕಾರ್ಯಕರ್ತ ಸುಖಿ ಚಹಲ್ ಅಮೆರಿಕದಲ್ಲಿ ನಿಗೂಢವಾಗಿ ಸಾವನಪ್ಪಿದ್ದಾರೆ. ಅವರು ಅಮೆರಿಕದಲ್ಲಿ ಖಲಿಸ್ತಾನ್ ಪರ ಹೋರಾಟಗಾರರನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಅದೇ ಕಾರಣವಾಗಿ ಭಾರತದಲ್ಲಿ ಹೆಸರಾಗಿದ್ದರು. ಅವರು ನಿಗೂಢ ಸಾವು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ. ಅಷ್ಟೇ ಅಲ್ಲದೇ, ಚಹಲ್ ಅವರು, ಭಾರತದಿಂದ ಅಮೆರಿಕಕ್ಕೆ ಬಂದ ವಲಸಿಗರಿಗೆ ಅಮೆರಿಕದ ಕಾನೂನುಗಳನ್ನು ಗೌರವಿಸುವಂತೆ ಮತ್ತು ಅಪರಾಧಗಳಿಂದ ದೂರವಿರುವಂತೆ ಸಲಹೆ ನೀಡುತ್ತಿದ್ದರು. ಇತ್ತೀಚೆಗೆ ಸುಖಿ ಚಹಲ್ ಸ್ನೇಹಿತನ ಮನೆಗೆ ಊಟಕ್ಕೆ ಹೋಗಿದ್ದರು. ನಂತರ ಅವರ ಆರೋಗ್ಯ ಹಠಾತ್ ಹದಗೆಟ್ಟು, ಸ್ಥಳದಲ್ಲೇ ಕುಸಿದು ಬಿದ್ದು ನಿಧನರಾದರು. ಈ ಘಟನೆ ಹಲವು ಅನುಮಾನಗಳಿಗೆ ಕಾರಣವಾಗಿದೆ. ಚಹಲ್ ಬಹಳ ಆರೋಗ್ಯವಂತರಾಗಿದ್ದರು. ಪರಿಚಯಸ್ಥರೊಬ್ಬರ ಮನೆಗೆ ತೆರಳಿ ಊಟ ಮಾಡಿದ ಕೆಲವೇ ಕ್ಷಣಗಳಲ್ಲಿ ಅವರ ಆರೋಗ್ಯ ತೀವ್ರವಾಗಿ ಹದಗೆಟ್ಟಿತು. ಕುಸಿದುಬಿದ್ದ ಚಹಲ್ ಸ್ಥಳದಲ್ಲೇ ಅಸುನೀಗಿದರು ಎಂದು ಚಹಲ್ ಆಪ್ತ ಸ್ನೇಹಿತ ಜಸ್ಪಾಲ್ ಸಿಂಗ್ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಘಟನೆಯ ತನಿಖೆ ನಡೆಸುತ್ತಿದ್ದಾರೆಂದು ಸ್ನೇಹಿತ ಬೂಟಾ ಸಿಂಗ್ ಕಾಲೇ೯ ಹೇಳಿದ್ದಾರೆ.

## ಪೆಟ್ರೋಲ್ ಕೊಡಲಿಲ್ಲ ಎಂದು ಬಂಕ್‌ಗೇ ಬೆಂಕಿ

**ಇಂದೋರ್:** ಮಧ್ಯಪ್ರದೇಶದ ಇಂದೋರ್ ನಗರದ ಪೆಟ್ರೋಲ್ ಬಂಕ್ ಸಿಬ್ಬಂದಿ ಪೆಟ್ರೋಲ್ ಕೊಡಲು ನಿರಾಕರಿಸಿದ್ದಕ್ಕೆ ಮೂವರು ದುಷ್ಕರ್ಮಿಗಳು ಬಂಕ್‌ಗೇ ಬೆಂಕಿ ಹಚ್ಚಲೆತ್ನಿಸಿದ್ದಾರೆ. ತಕ್ಷಣವೇ ಬಂಕ್ ಸಿಬ್ಬಂದಿ ಎಚ್ಚೆತ್ತ ಬೆಂಕಿ ಹೊತ್ತಿಕೊ ಳ್ಳುವುದನ್ನು ತಡೆದಿದ್ದಾರೆ. ಸ್ವಲ್ಪದರ 'ಲ್ಲಿಯೇ ದೊಡ್ಡ ಅನಾಹುತ ತಪ್ಪಿದೆ.

**ನಡೆದಿದ್ದೇನು:** ಮಧ್ಯಪ್ರದೇಶ ಸರಕಾರ ಹೆಲ್ಮೆಟ್ ಧರಿಸದವರ ದ್ವಿಚಕ್ರವಾಹನಕ್ಕೆ ಪೆಟ್ರೋಲ್ ನೀಡದಂತೆ ಸೂಚನೆ ನೀಡಿದೆ. ಹಾಗಾಗಿಯೇ ಒಂದೇ ದ್ವಿಚಕ್ರ ವಾಹನದಲ್ಲಿ ಬಂದ ಮೂವರು ಯುವಕರು ಹೆಲ್ಮೆಟ್ ಧರಿಸದೇ ಇದ್ದುದರಿಂದ ಬಂಕ್ ಸಿಬ್ಬಂದಿ ಪೆಟ್ರೋಲ್ ಕೊಡಲ್ಲ ಎಂದಿದ್ದಾರೆ. ಅಷ್ಟಕ್ಕೇ ಸಿಟ್ಟಿಗೆದ್ದ ಬೈಕ್‌ನಲ್ಲಿದ್ದ ಬಂಕ್ ಸಿಬ್ಬಂದಿ ಜತೆ ಜಗಳಕ್ಕಿಳಿದಿದ್ದಾರೆ. ಬಳಿಕ ಜೇಬಿನಿಂದ ಬೆಂಕಿಪೊಟ್ಟಣ ತೆಗೆದು ಬೆಂಕಿಕಡ್ಡಿ ಗೀರಿ ಪೆಟ್ರೋಲ್ ಬಂಕ್‌ನತ್ತ ಎಸೆದು ಪರಾರಿಯಾ ಗಿದ್ದಾರೆ. ತಕ್ಷಣ ಎಚ್ಚೆತ್ತ ಬಂಕ್ ಸಿಬ್ಬಂದಿ ಬೆಂಕಿಕಡ್ಡಿಯಿಂದ ಹರಡಲಿದ್ದ ಬೆಂಕಿಯನ್ನು ನಂದಿಸಿದ್ದಾರೆ. ಬಂಕ್ ವ್ಯವಸ್ಥಾಪಕರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೂವರೂ ಯುವಕರ ಬಂಧನಕ್ಕೆ ಶೋಧ ನಡೆಸಿದ್ದಾರೆ.

THIS IS A PUBLIC ANNOUNCEMENT FOR INFORMATION PURPOSES ONLY. THIS IS NOT A FINAL SCHEME OFFER DOCUMENT ANNOUNCEMENT AND DOES NOT CONSTITUTE AN INVITATION OF ISSUE TO ACQUIRE, PURCHASE OR SUBSCRIBE TO UNITS OR SECURITIES
NOT FOR RELEASE, PUBLICATION OR DISTRIBUTION, DIRECTLY OR INDIRECTLY OUTSIDE INDIA.
INITIAL PUBLIC OFFER OF PROPSHARE TITANIA (A SECOND SCHEME OF THE PROPERTY SHARE INVESTMENT TRUST) IN RELIANCE UPON REGULATION 26R OF THE SECURITIES AND EXCHANGE BOARD OF INDIA (REAL ESTATE INVESTMENT TRUSTS) REGULATIONS, 2014, AS AMENDED (THE "REIT REGULATIONS")

PROPERTY SHARE
INVESTMENT TRUST

(Please scan the QR Code to view the Final Offer Document)

# PROPSHARE TITANIA

PropShare Titania has been set up on February 21, 2025 as the second scheme of Property Share Investment Trust registered in the Republic of India as contributory, determinate and irrevocable trust on June 27, 2024, at Bangalore, Karnataka, India under the provisions of Indian Trusts Act, 1882 and as a small and medium real estate investment trust on August 5, 2024, under Regulation 26L (1) of the Securities and Exchange Board of India (Real Estate Investment Trusts) Regulations, 2014, as amended, having registration number IN/SM-REIT/24-25/0001.

**Principal Place of Business:** 16th Floor, SKAV Seethalakshmi, 21/22, Kasturba Road, Bangalore 560 001, India; **Tel:** +91 80 3100 3902; **Fax:** NA; **Compliance Officer:** Prashant Kataria; **E-mail:** compliance.officer@propertyshare.in; **Website:** www.psreit.in

| TRUSTEE | INVESTMENT MANAGER |
|---|---|
| AXIS TRUSTEE | PROPERTY SHARE |
| Axis Trustee Services Limited | PropShare Investment Manager Private Limited |

## BASIS OF ALLOTMENT

**The Titania Units of Propshare Titania are proposed to be listed on BSE Limited ("BSE") and the trading will commence on Monday, August 4,2025.**

**ISSUE OF 4,462 TITANIA UNITS FOR CASH AT A PRICE OF ₹ 10,60,000 PER TITANIA UNIT AGGREGATING TO ₹ 4,729.72 MILLION BY PROPSHARE TITANIA (THE "ISSUE") IN ACCORDANCE WITH REGULATION 26R OF THE SECURITIES AND EXCHANGE BOARD OF INDIA (REAL ESTATE INVESTMENT TRUSTS) REGULATIONS, 2014, AS AMENDED (THE "REIT REGULATIONS"). THE ISSUE CONSTITUTES 100% OF THE ISSUED AND PAID-UP UNITS ON A POST-ISSUE BASIS.**

## ISSUE PRICE: ₹ 10,60,000 PER TITANIA UNIT

## RISK TO INVESTORS

1. While we have executed the definitive agreements with respect to the Formation Transactions, the closing of these is subject to fulfilment of certain conditions. Therefore, our ability to consummate these transactions will impact the ability of the Investment Manager to complete this Issue.
2. The outstanding tax litigations of Titania SPV involve a substantial disputed amount of ₹ 710.11 million which could potentially have adverse effect on our business, financial condition, results of operations and cash flows.
3. Our business, revenues and profitability are dependent on the performance of the commercial real estate market in India. Fluctuations in the general economic, market and other conditions may affect the commercial real estate market in India, specifically in Thane, MMR region, and in turn, our ability to lease the SM REIT Asset to tenants on favourable terms.
4. A significant portion of our revenues is derived from a limited number of large lessees and from a single sub-market. Any conditions that impact these lessees, or submarkets may adversely affect our business, revenue from operations and financial condition.
5. Our actual results may be materially different from the Projections included in this Key Information of the Scheme. Accordingly, investors should not place undue reliance on or base their investment decision solely on this information.
6. The Valuation Report obtained for Project Titania is only indicative in nature as it is based on various assumptions and may not be indicative of the true value of Project Titania.
7. A significant portion of our revenues is derived from a limited number of large tenants in the banking, financial services and insurance, Healthcare and Lifesciences and technology sectors. Any conditions that impact these tenants or the respective sectors or cities in which they operate may adversely affect our business, results and financial condition.
8. The Final Key Information of the Scheme contains information from the JLL Report, the Technical Due Diligence Report and the Valuation Report which the Investment Manager has commissioned on our behalf.
9. Tenant leases across our SM REIT Asset are subject to the risk of non-renewal, non-replacement, default, early termination, regulatory or legal proceedings or changes in applicable laws or regulations, thereby impacting leasing and other income. Further, vacant properties could be difficult to lease, which could adversely affect our revenues.
10. The Investment Manager may not be able to execute our growth strategy successfully resulting in inability to offer projected yields.

## BID/OFFER PROGRAM

## BID/ISSUE OPENED ON: MONDAY, JULY 21, 2025 | BID/ISSUE CLOSED ON: FRIDAY, JULY 25, 2025

The Net Issue has been made through the Book Building Process, wherein not more than 75% of the Net Issue was made available for allocation on proportionate basis to Institutional Investors and minimum 25% of the Net Issue was made available for allocation on proportionate basis to Non Institutional Investors in accordance with the REIT Regulations and the RET Master Circular. In case of undersubscription in any category, the unsubscribed portion in either category was Allotted to Bidders in the other category at the discretion of our Investment Manager, in consultation with the Lead Manager and the Designated Stock Exchange. ASBA Bidders, were required to submit their Bids through the Designated Intermediaries including the SCSBs with whom the ASBA Account was maintained. For details, see *"Issue Information"* on page 174 of the of the final offer document dated July 30,2025 (**"Final Offer Document"**).

The Issuer has been allotted 224 Units under the Investment Manager Portion aggregating to ₹ 237,440,000/-.

The Net Issue received 629 applications for 7,385 Titania Units (prior to rejections) resulting in 1.6551 times subscription as disclosed in the Final Key Information of the Scheme. The details of the applications received in the Net Issue from various categories are as under (before rejections):

| Sr. No. | Category | No. of Applications received | No. of Titania Units applied | No. of Titania Units available for allocation as per the Final Key Information of the Scheme | No. of times Subscribed | Amount (₹) |
|---|---|---|---|---|---|---|
| A | Non-Institutional Investors | 628 | 7,161 | 1,060 | 6.7557 | 7,588,515,210.00 |
| B | Institutional Investors | - | - | 3,178 | - | - |
| C | Investment Manager Portion | 1 | 224 | 224 | 1.0000 | 237,440,000.00 |
| | **Total** | **629** | **7,385** | **4,462** | **1.6551** | **7,825,955,210.00** |

**Final Demand**

A summary of the final demand as per BSE as on the Bid/Issue Closing Date and as at different bid prices is as under:

| Sr No | Bid Price | Bids Quantity | (%) to Total | Cumulative Total | % Cumulative Total |
|---|---|---|---|---|---|
| 1 | 10,00,000 | 33 | 0.45 | 33 | 0.45 |
| 2 | 10,00,100 | 1 | 0.01 | 34 | 0.47 |
| 3 | 10,00,110 | 1 | 0.01 | 35 | 0.48 |
| 4 | 10,10,000 | 2 | 0.03 | 37 | 0.51 |
| 5 | 10,15,000 | 1 | 0.01 | 38 | 0.52 |
| 6 | 10,20,000 | 2 | 0.03 | 40 | 0.55 |
| 7 | 10,25,000 | 1 | 0.01 | 41 | 0.56 |
| 8 | 10,30,000 | 2 | 0.03 | 43 | 0.59 |
| 9 | 10,40,000 | 1 | 0.01 | 44 | 0.61 |
| 10 | 10,60,000 | 7,219 | 99.39 | 7,263 | 100.00 |
| | **TOTAL** | **7,263** | **100.00** | | |

The Basis of Allotment was finalized in consultation with the Designated Stock Exchange, being the BSE, on July 30,2025.

**A. Allotment to Non-institutional Investors (after rejections) (including ASBA Applications)**

The Basis of Allotment to the Non-institutional Investors, who have bid at the Issue Price of ₹ 10,60,000 per Titania Units, was finalized in consultation with the BSE. This category has been subscribed to the extent of 1.65573 times. The total number of Titania Units Allotted in the Non-institutional Investors is 4,238 Titania Units (i.e., includes spilled over of 3,178 Titania Units from Institutional Investor Portion) to 508 successful Non-institutional Investors. The category-wise details of the Basis of Allotment are as under:

| Sr. No. | No. of Titania Units applied for (Category) | No. of Applications Received | % of Total | Total No. of Titania Units applied in each category | % to Total | No. of Titania Units allotted per applicant | Ratio | Total No. of Titania Units allotted |
|---|---|---|---|---|---|---|---|---|
| 1 | 1 | 179 | 30.92 | 179 | 2.55 | 1 | 108 : 179 | 108 |
| 2 | 2 | 54 | 9.33 | 108 | 1.54 | 1 | 1 : 1 | 54 |
| | | | | | | 1 | 8 : 54 | 8 |
| 3 | 3 | 33 | 5.70 | 99 | 1.41 | 2 | 1 : 1 | 66 |
| 4 | 4 | 21 | 3.63 | 84 | 1.20 | 2 | 1 : 1 | 42 |
| | | | | | | 1 | 9 : 21 | 9 |
| 5 | 5 | 50 | 8.64 | 250 | 3.56 | 3 | 1 : 1 | 150 |
| 6 | 6 | 8 | 1.38 | 48 | 0.68 | 4 | 1 : 1 | 32 |
| 7 | 7 | 20 | 3.45 | 140 | 2.00 | 4 | 1 : 1 | 80 |
| 8 | 8 | 3 | 0.52 | 24 | 0.34 | 5 | 1 : 1 | 15 |
| 9 | 9 | 29 | 5.01 | 261 | 3.72 | 5 | 1 : 1 | 145 |
| | | | | | | 1 | 13 : 29 | 13 |
| 10 | 10 | 33 | 5.70 | 330 | 4.70 | 6 | 1 : 1 | 198 |
| 11 | 11 | 4 | 0.69 | 44 | 0.63 | 7 | 1 : 1 | 28 |
| 12 | 12 | 7 | 1.21 | 84 | 1.20 | 7 | 1 : 1 | 49 |
| 13 | 13 | 14 | 2.42 | 182 | 2.59 | 8 | 1 : 1 | 112 |
| 14 | 14 | 16 | 2.76 | 224 | 3.19 | 8 | 1 : 1 | 128 |
| | | | | | | 1 | 7 : 16 | 7 |
| 15 | 15 | 8 | 1.38 | 120 | 1.71 | 9 | 1 : 1 | 72 |
| 16 | 16 | 2 | 0.35 | 32 | 0.46 | 10 | 1 : 1 | 20 |
| 17 | 17 | 2 | 0.35 | 34 | 0.48 | 10 | 1 : 1 | 20 |
| 18 | 18 | 3 | 0.52 | 54 | 0.77 | 11 | 1 : 1 | 33 |
| 19 | 19 | 10 | 1.73 | 190 | 2.71 | 11 | 1 : 1 | 110 |
| | | | | | | 1 | 5 : 10 | 5 |
| 20 | 20 | 7 | 1.21 | 140 | 2.00 | 12 | 1 : 1 | 84 |
| 21 | 21 | 1 | 0.17 | 21 | 0.30 | 13 | 1 : 1 | 13 |
| 22 | 22 | 1 | 0.17 | 22 | 0.31 | 13 | 1 : 1 | 13 |
| 23 | 23 | 3 | 0.52 | 69 | 0.98 | 14 | 1 : 1 | 42 |
| 24 | 24 | 4 | 0.69 | 96 | 1.37 | 14 | 1 : 1 | 56 |
| | | | | | | 1 | 2 : 4 | 2 |
| 25 | 26 | 1 | 0.17 | 26 | 0.37 | 16 | 1 : 1 | 16 |
| 26 | 27 | 1 | 0.17 | 27 | 0.38 | 16 | 1 : 1 | 16 |
| 27 | 28 | 7 | 1.21 | 196 | 2.79 | 17 | 1 : 1 | 119 |
| 28 | 29 | 5 | 0.86 | 145 | 2.07 | 18 | 1 : 1 | 90 |
| 29 | 30 | 4 | 0.69 | 120 | 1.71 | 18 | 1 : 1 | 72 |
| 30 | 31 | 2 | 0.35 | 62 | 0.88 | 19 | 1 : 1 | 38 |
| 31 | 33 | 3 | 0.52 | 99 | 1.41 | 20 | 1 : 1 | 60 |
| 32 | 34 | 3 | 0.52 | 102 | 1.45 | 21 | 1 : 1 | 63 |
| 33 | 35 | 1 | 0.17 | 35 | 0.50 | 21 | 1 : 1 | 21 |
| 34 | 37 | 1 | 0.17 | 37 | 0.53 | 22 | 1 : 1 | 22 |
| 35 | 38 | 1 | 0.17 | 38 | 0.54 | 23 | 1 : 1 | 23 |
| 36 | 42 | 1 | 0.17 | 42 | 0.60 | 25 | 1 : 1 | 25 |
| 37 | 45 | 1 | 0.17 | 45 | 0.64 | 27 | 1 : 1 | 27 |
| 38 | 47 | 6 | 1.04 | 282 | 4.02 | 28 | 1 : 1 | 168 |
| 39 | 48 | 4 | 0.69 | 192 | 2.74 | 29 | 1 : 1 | 116 |
| 40 | 50 | 3 | 0.52 | 150 | 2.14 | 30 | 1 : 1 | 90 |
| 41 | 52 | 1 | 0.17 | 52 | 0.74 | 31 | 1 : 1 | 31 |
| 42 | 55 | 1 | 0.17 | 55 | 0.78 | 33 | 1 : 1 | 33 |
| 43 | 57 | 3 | 0.52 | 171 | 2.44 | 34 | 1 : 1 | 102 |
| 44 | 62 | 1 | 0.17 | 62 | 0.88 | 37 | 1 : 1 | 37 |
| 45 | 63 | 1 | 0.17 | 63 | 0.90 | 38 | 1 : 1 | 38 |
| 46 | 66 | 1 | 0.17 | 66 | 0.94 | 40 | 1 : 1 | 40 |
| 47 | 70 | 1 | 0.17 | 70 | 1.00 | 42 | 1 : 1 | 42 |
| 48 | 71 | 1 | 0.17 | 71 | 1.01 | 43 | 1 : 1 | 43 |
| 49 | 75 | 1 | 0.17 | 75 | 1.07 | 45 | 1 : 1 | 45 |
| 50 | 94 | 2 | 0.35 | 188 | 2.68 | 57 | 1 : 1 | 114 |
| 51 | 95 | 1 | 0.17 | 95 | 1.35 | 57 | 1 : 1 | 57 |
| 52 | 100 | 1 | 0.17 | 100 | 1.43 | 60 | 1 : 1 | 60 |
| 53 | 133 | 2 | 0.35 | 266 | 3.79 | 80 | 1 : 1 | 160 |
| 54 | 139 | 1 | 0.17 | 139 | 1.98 | 84 | 1 : 1 | 84 |
| 55 | 141 | 1 | 0.17 | 141 | 2.01 | 85 | 1 : 1 | 85 |
| 56 | 142 | 1 | 0.17 | 142 | 2.02 | 86 | 1 : 1 | 86 |
| 57 | 160 | 1 | 0.17 | 160 | 2.28 | 97 | 1 : 1 | 97 |
| 58 | 188 | 1 | 0.17 | 188 | 2.68 | 114 | 1 : 1 | 114 |
| 59 | 480 | 1 | 0.17 | 480 | 6.84 | 290 | 1 : 1 | 290 |
| | **TOTAL** | **579** | **100.00** | **7,017** | **100.00** | | | **4,238** |

1 additional unit has been allocated to Categories 2, 4, 9, 14, 19 & 24 in the ratio 8:54, 9 :21, 13:29, 7:16, 5:10, 2:4

**B. Allotment to Institutional Investors (after rejections) (including ASBA Applications)**

The Institutional Investors Portion had Nil valid applications for Nil Titania Units against 3,178 Titania Units reserved for this category resulting in subscription of 0.00000 times. The total number of Titania Units Allotted to the Institutional Investors (excluding Investment Manager Portion) is Nil Titania Units to Nil successful Institutional Investors.

**The unsubscribed Portion of 3,178 Titania Units has been spilled over to Non-Institutional Bidders category.**

The Board Director of the Investment Manager at its meeting held on July 30, 2025 has taken on record the Basis of Allotment of Titania Units approved by the Designated Stock Exchange, being BSE Limited. The Allotment Advice-cum-Unblocking intimations have been dispatched to the email id of the investors as registered with the depositories. Further, the instructions to the SCSBs for unblocking of funds and transfers to the Public Issue Account have been issued on July 30, 2025 and there was no bids by non-Syndicate brokers. In case the same is not received within ten days, investors may contact the Registrar to the Issue at the address given below. The Titania Units Allotted to the successful Allottees have been uploaded on July 31, 2025 for credit into the respective beneficiary accounts subject to validation of the account details with the depositories concerned. The Investment Manager has filed the listing application with BSE Limited on July 31, 2025. The Investment Manager has received the listing and trading approval from BSE and the trading of Titania Units will commence on August 04, 2025.

**Note:** All capitalised terms used and not specifically defined herein shall have the same meaning as ascribed to them in the Final Key Information of the Scheme dated July 30, 2025 (**"Final Key Information of the Scheme"**).

**INVESTORS PLEASE NOTE**

**The details of the Allotment made has been hosted on the website of the Registrar to the Issue, KFin Technologies Limited at: www.kfintech.com**

All future correspondence in this regard may kindly be addressed to the Registrar to the Issue quoting full name of the first/ sole Bidder, Bid cum Application Form number, Bidder DP ID, Client ID, PAN, date of submission of Bid cum Application Form, address of the Bidder, number of Titania Units applied for, the name and address of the Designated Intermediary where the Bid cum Application Form was submitted by the Bidder and a copy of the Acknowledgment Slip received from the Designated Intermediary at the address given below:

KFINTECH
EXPERIENCE TRANSFORMATION

**Kfin Technologies Limited**
**Address:** Selenium Tower-B, Plot 31 & 32, Gachibowli, Financial District, Nanakramguda, Serilingampally, Hyderabad – 500 032, Telangana, **Tel:** +91 40 6716 2222
**E-mail:** propshare.ipo@kfintech.com; **Investor grievance e-mail:** einward.ris@kfintech.com; **Website:** www.kfintech.com; **Contact Person:** M Murali Krishna
**SEBI Registration No.:** INR000000221

**For PROPSHARE TITANIA**
On behalf of the Board of Directors
**of PropShare Investment Manager Private Limited**
**Sd/-**
**Prashant Kataria**
Compliance Officer

**Place:** Bangalore
**Date:** August 01, 2025

**PROPSHARE TITANIA**, acting through its Trustee and Investment Manager has filed the Final Key Information of the Scheme July 30, 2025 with SEBI and the BSE. The Final Key Information of the Scheme is available on the website of SEBI at www.sebi.gov.in, BSE at www.bseindia.com as well as on the website of the Book Running Lead Manager i.e. Kotak Mahindra Capital Company Limited at https://investmentbank.kotak.com. Potential investors should note that investment in the Titania Units involves a degree of risk, and for details relating to the same, should refer to the section "Risk Factors" of the Final Key Information of the Scheme. These materials are not for publication or distribution, directly or indirectly, in or into the United States. These materials are not an offer for the sale of the Titania Units or other securities in the United States or elsewhere. The Titania Units referred to herein have not been and will not be registered under the U.S. Securities Act of 1933, as amended and may not be offered or sold within the United States, except pursuant to an exemption from registration. No public offering of the Titania Units or other securities is being made in the United States.

CONCEPT

## ಸಮಾಚಾರ ಸಣ್ಣದಲ್ಲ

### ಓದುವ ಬೆಳಕು; ವಿಶೇಷ ಶಿಬಿರ

**ಬೆಂಗಳೂರು:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಆಗಸ್ಟ್ ತಿಂಗಳಲ್ಲಿ ರಾಜ್ಯದ ಎಲ್ಲ ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ 'ಓದುವ ಬೆಳಕು' ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸ್ವಾತಂತ್ರ ದಿನದ ಅಂಗವಾಗಿ ವಿಜ್ಞಾನ ಚಟುವಟಿಕೆಗಳು ಹಾಗೂ ದೇಶ ಪ್ರೇಮ ಸಾರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇಡೀ ತಿಂಗಳು ಕಾರ್ಯಕ್ರಮ ನಡೆಯಲಿದೆ. ಈ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದ್ದು, ಇಲಾಖೆಯಿಂದ ದೇಶದ ಬಗ್ಗೆ ಮಕ್ಕಳಿಗೆ ಪ್ರಬಂಧ ಬರೆಯುವುದು, ಸ್ವಾತಂತ್ರ ಹೋರಾಟಗಾರರ ಸಾಧನೆ ಬಗ್ಗೆ ಭಾಷಣ,ಚರ್ಚೆಗಳನ್ನು ಏರ್ಪಡಿಸುವುದು, ತ್ರಿವರ್ಣ ಧ್ವಜ ಧರಿಸುವುದು ಹಾಗೂ ಸಂವಿಧಾನ ಪೀಠಿಕೆ ಒದುವಂತೆ ಪ್ರೋತ್ಸಾಹಿಸುವುದು, ದೇಶಭಕ್ತಿಗಳ ಗಾಯನ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳು ನಡೆಯಲಿದೆ. ಇದರೊಂದಿಗೆ ವಿಜ್ಞಾನ ಚಟುವಟಿಕೆಯಲ್ಲಿ 'ಕ್ರೀಮ್ ಬಿಸ್ಕೆಟ್ ಜತೆ ಚಂದ್ರನ ಹಂತ'ಗಳು ಎಂಬ ವಿಶೇಷ ಕಾರ್ಯಕ್ರಮ ನಡೆಯಲಿದೆ ಎಂದ ಹೇಳಿದ್ದಾರೆ.

### ರಾಷ್ಟ್ರೀಯ ಹ್ಯಾಕಥಾನ್ ಫಿನಾಲೆ ಆಯೋಜನೆ

**ಬೆಂಗಳೂರು:** ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆವಿಷ್ಕಾರಗಳನ್ನು ಹೆಚ್ಚಿಸುವ ಪ್ರಮುಖ ಪ್ರಯತ್ನವಾಗಿ, ಕೆನರಾ ಬ್ಯಾಂಕ್, ಹಣಕಾಸು ಸೇವೆಗಳ ಇಲಾಖೆ (ಡಿಎಫ್ಎಸ್) ಮತ್ತು ಭಾರತೀಯ ಬ್ಯಾಂಕ್‌ಗಳ ಸಂಘದ (ಐಬಿಎ) ಮಾರ್ಗದರ್ಶನದಲ್ಲಿ, ರಾಷ್ಟ್ರೀಯ ಸೈಬರ್ ಹ್ಯಾಕಥಾನ್‌ನ ಗ್ರ್ಯಾಂಡ್ ಫಿನಾಲೆಯನ್ನು ಯಶಸ್ವಿಯಾಗಿ ಆಯೋಜಿಸಿತು. ಸಾರ್ವಜನಿಕ ವಲಯದ ಎಲ್ಲಾ ಬ್ಯಾಂಕುಗಳನ್ನು ಒಳಗೊಂಡ ರಾಷ್ಟ್ರವ್ಯಾಪಿ ಯೋಜನೆಯ ಭಾಗವಾಗಿ, ಈ ಹ್ಯಾಕಥಾನ್‌ನಲ್ಲಿ ನಡವಳಿಕೆ ವಿಜ್ಞಾನದ ಮೂಲಕ ಮೊಬೈಲ್ ಬ್ಯಾಂಕಿಂಗ್ ಭದ್ರತೆಯನ್ನು ಹೆಚ್ಚಿಸುವುದು ಮತ್ತು ಮಾರುಕಟ್ಟೆ ಪರಿಸರದಲ್ಲಿ ಗ್ರಾಹಕರ ಪಿಐಐ ಡೇಟಾ ರಕ್ಷಿಸುವುದು ಎಂಬ ಎರಡು ನೈಜ-ಜಗತ್ತಿನ ವಿಷಯ ಆಯ್ದುಕೊಳ್ಳಲಾಗಿತ್ತು. ಈ ವಿಷಯಗಳು, ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಗಳು ಮತ್ತು ಗ್ರಾಹಕರ ಮಾಹಿತಿಯನ್ನು ರಕ್ಷಿಸುವ ಮಹತ್ವವನ್ನು ಪ್ರತಿಬಿಂಬಿಸಿದವು.

# ಮೇಕ್ ಇನ್ ಇಂಡಿಯಾ ಕಲ್ಪನೆಯಲ್ಲಿ ಆತ್ರೇಯ ಆಸ್ಪತ್ರೆ

## ಪೂರ್ಣಪ್ರಜ್ಞಾ ಲೇಔಟ್‌ನಲ್ಲಿ ನೂತನ ಆಸ್ಪತ್ರೆಗೆ ಸಂಸದ ಡಾ.ಸಿ.ಎನ್. ಮಂಜುನಾಥ್ ಚಾಲನೆ | ವಿಶ್ವದರ್ಜೆ ಸೌಲಭ್ಯ ಲಭ್ಯ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಮೇಕ್ ಇನ್ ಇಂಡಿಯಾ ಕಲ್ಪನೆಯಲ್ಲಿ ಆತ್ರೇಯ ಆಸ್ಪತ್ರೆಯನ್ನು ರೂಪಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ಪೂರ್ಣಪ್ರಜ್ಞನಗರದಲ್ಲಿ ನೂತವಾಗಿ ಆರಂಭವಾಗಿರುವ ಆತ್ರೇಯ ಆಸ್ಪತ್ರೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಶೇ.60ರಷ್ಟು ಖಾಸಗಿ ಹಾಗೂ ಶೇ.40 ಸರಕಾರಿ ಆಸ್ಪತ್ರೆಗಳು ಜನರಿಗೆ ಚಿಕಿತ್ಸೆ ನೀಡುತ್ತಿದ್ದು, ದಿನದಿಂದ ದಿನಕ್ಕೆ ಬೆಂಗಳೂರು ಜಾಗತಿಕವಾಗಿ ಬೆಳೆಯುತ್ತಿದೆ. ಜನರಿಗೆ ಎಲ್ಲ ರೀತಿಯ ಮೂಲಭೂತ ಸೌಕರ್ಯಗಳ ಅಗತ್ಯವಿದೆ. ಆತ್ರೇಯ ಆಸ್ಪತ್ರೆ ಡಾ. ಶ್ರೀಧರ ನೇತೃತ್ವದಲ್ಲಿ ನುರಿತ ವೈದ್ಯರು ಹಾಗೂ ವಿಶ್ವದರ್ಜೆ ಸೌಲಭ್ಯಗಳನ್ನು ಹೊಂದಿದ್ದು, ಈ ಆತ್ರೇಯ ಆಸ್ಪತ್ರೆಯನ್ನು ಮೇಕ್ ಇನ್ ಇಂಡಿಯಾ ಕಲ್ಪನೆಯಲ್ಲಿ ಮಾಡಲಾಗಿದೆ ಎಂದು ಅಭಿಪ್ರಾಯಪಟ್ಟರು.

ಜನರು ಆಸ್ಪತ್ರೆಗೆ ವೈದ್ಯರ ಮೇಲೆ ನಂಬಿಕೆ, ಗುಣಮಟ್ಟದ ಚಿಕಿತ್ಸೆ, ಹಾಗೂ ಕೈಗೆಟುಕುವ ದರದಲ್ಲಿ ಸಿಗುತ್ತದೆ ಎಂದು ಬರುತ್ತಾರೆ. ವೈದ್ಯರುಗಳೇ ಸೇರಿ ಆಸ್ಪತ್ರೆ ನಿರ್ಮಾಣ ಮಾಡಿದರೆ ಅಲ್ಲಿ ತಾಯಿ ಹೃದಯವಿರುತ್ತದೆ. ವ್ಯಾಪಾರಸ್ಥರು ಮಾಡಿದರೆ ಅದು ವ್ಯಾಪಾರವಾಗುತ್ತದೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕಾದರೆ 'ಬಿಎಂಡಬ್ಲ್ಯೂ' ಅನುಸರಿಸಬೇಕು. ಬಿಎಂಡಬ್ಲ್ಯೂ ಎಂದರೆ ಕಾರಲ್ಲ. ಬದಲಿಗೆ ಬೈಸಿಕಲ್, ಮೇಟ್ರೊ ಹಾಗೂ ವಾಕ್ (ಬಿಎಂಡಬ್ಲ್ಯೂ ). ಬೆಂಗಳೂರು ಸೇರಿದಂತೆ ದೊಡ್ಡ ದೊಡ್ಡ ನಗರಗಳಲ್ಲಿ ವಾಸಿಸುವುದಕ್ಕೆ ಉತ್ತಮ ವಾತಾವರಣವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಪೂರ್ಣಪ್ರಜ್ಞನಗರದಲ್ಲಿ ನೂತವಾಗಿ ಆರಂಭವಾಗಿರುವ ಆತ್ರೇಯ ಆಸ್ಪತ್ರೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ಬೆಂಗಳೂರು ದಕ್ಷಿಣ ಲೋಕಸಭಾ ಸಂಸದ ತೇಜಸ್ವಿ ಸೂರ್ಯ, ಶಾಸಕ ಎಂ. ಕೃಷ್ಣಪ್ಪ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀಧರ, ಡಾ.ವಿಜಯಾ, ಬಿಬಿಎಂಪಿ ಮಾಜಿ ಸದಸ್ಯರಾದ ಹನುಮಂತಯ್ಯ ಇದ್ದರು.

ಬೆಂಗಳೂರು ದಕ್ಷಿಣ ಲೋಕಸಭಾ ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಎಂಡಿ ಶ್ರೀಧರ ಉತ್ತಮ ಗುಣಮಟ್ಟದ ಆಸ್ಪತ್ರೆ ಕಟ್ಟಿ ಇಡೀ ಕುಟುಂಬವೇ ಜನಸೇವೆಗೆ ಮುಂದಾಗಿರುವುದು ಉತ್ತಮ ಸಂಗತಿ. ಮೇಟ್ರೋ ಹಳದಿ ಮಾರ್ಗ ಆರ್ ವಿ ರಸ್ತೆಯಿಂದ ಬೊಮ್ಮಸಂದ್ರವರೆಗೆ ಹಳದಿ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು 10ರಂದು ಉದ್ಘಾಟಿಸಲಿದ್ದಾರೆ. ಇದರೊಂದಿಗೆ ಮೂರನೇ ಹಂತದ ಮೆಟ್ರೋಕ್ಕೆ ಶಂಕುಸ್ಥಾಪನೆ ಮಾಡಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಎಂ. ಕೃಷ್ಣಪ್ಪ, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀಧರ, ಡಾ.ವಿಜಯಾ, ಬಿಬಿಎಂಪಿ ಮಾಜಿ ಸದಸ್ಯರಾದ ಹನುಮಂತಯ್ಯ, ರಮೇಶರಾಜು ಮತ್ತಿತರರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಆತ್ರೇಯ ಆಸ್ಪತ್ರೆಯನ್ನು ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿಗಳು ಉದ್ಘಾಟಿಸಿ ಆರ್ಶೀವಚನ ನೀಡಿದರು.

### ಹೃದಯವಂತ ವೈದ್ಯರ ಮಾತಿಗೆ ಹೃದಯ ತುಂಬಿ ನಕ್ಕ ಸಭಿಕರು

ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕಾದರೆ ಬಿ ಎಂ ಡಬ್ಲ್ಯೂ ಅನುಸರಿಸಬೇಕು. ಬಿಎಂಡಬ್ಲ್ಯೂ ಅಂದರೆ ಕಾರಿನಲ್ಲಿ ಹೊಗಿ ಅಂತಲ್ಲ ಬೈಸಿಕಲ್, ಮೆಟ್ರೋ, ವಾಕ್ (ಬಿ ಎಂ ಡಬ್ಲ್ಯೂ ) ಡಾಕ್ಟರ್ ಹೇಳೋಕೆ ಮುಂಚೆ ವಾಕ್ ಮಾಡಿದರೆ ಮಾರ್ನಿಂಗ್ ವಾಕ್, ಡಾಕ್ಟರ್ ಹೇಳಿದ ಮೇಲೆ ವಾಕ್ ಮಾಡಿದರೆ ವಾರ್ನಿಂಗ್ ವಾಕ್, ಇನ್ನು ಗಂಡ ಹೆಂಡತಿ ಕೈ ಕೈ ಹಿಡಿದು ವಾಕ್ ಮಾಡಿದರೆ ಡಾರ್ಲಿಂಗ್ ವಾಕ್ ಎಂದು ಹೇಳಿ ಸಭೆಯನ್ನು ನಗೆ ಕಡಲಲ್ಲಿ ತೇಲಿಸಿದರು.

### ಆರೋಗ್ಯಕ್ಕೆ 12 ಸೂತ್ರಗಳು

ಬಿಸಿಲು, ವ್ಯಾಯಾಮ, ನಗು, ಉಪವಾಸ, ನಿದ್ರೆ ಹಣ್ಣು ತರಕಾರಿಗಳು, ಕೃತಜ್ಞತೆ, ಬೇರೆಯವರ ಜತೆ ಮಾತನಾಡೋದು, ಬೇರೊಬ್ಬರ ಬಗ್ಗೆ ಮಾತನಾಡೋದು, ಮೇಡಿಟೇಷನ್, ಯೋಗ, ಕುಟುಂಬ ಸದಸ್ಯರ ಜತೆ ಮಾತನಾಡೋದು,ಕುಟುಂಬ ಸದಸ್ಯರ ಊಟ ಮಾಡೋದು, ಆಸೆ ಅತಿಯಾಸೆ ಬಿಡಬೇಕು ಉತ್ತಮ ಆರೋಗ್ಯಕ್ಕೆ 12 ಸೂತ್ರಗಳು.

# ಅತ್ಯಾಚಾರ ಆರೋಪ: ಪಿಜಿ ಮಾಲೀಕ ಸೆರೆ

**ಬೆಂಗಳೂರು:** ಕಳೆದ 10 ದಿನಗಳ ಹಿಂದೆ ಸೋಲದೇವನಹಳ್ಳಿಯಲ್ಲಿನ ಪೇಯಿಂಗ್ ಗೆಸ್ಟ್ (ಪಿಜಿ)ನಲ್ಲಿ ಸೇರಿದ್ದ ಕೇರಳದ 20 ವರ್ಷದ ವಿದ್ಯಾರ್ಥಿನಿ ಮೇಲೆ ಅದರ ಮಾಲೀಕನೇ ಅತ್ಯಾಚಾರವೆಸಗಿರುವ ಆರೋಪ ಕೇಳಿಬಂದಿದೆ. ಕೃತ್ಯಕ್ಕೂ ಮೊದಲು ಆತ ಯುವತಿಯ ಮೇಲೆ ಹಲ್ಲೆ ಮಾಡಿದ್ದ ಎಂದು ಆರೋಪಿಸಲಾಗಿದೆ.

ಯುವತಿ ನೀಡಿರುವ ದೂರಿನ ಪ್ರಕಾರ, ಪ್ರಕರಣ ದಾಖಲಿಸಿಕೊಂಡ ಸೋಲದೇವನಹಳ್ಳಿ ಪೊಲೀಸರು ಆರೋಪಿ, ಪಿಜಿ ಮಾಲೀಕ ಅಶ್ರಫ್ ಎಂಬಾತನನ್ನು ಭಾನುವಾರ ಬಂಧಿಸಿದ್ದಾರೆ. ಪ್ರಕರಣದ ಕುರಿತು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ವಿವರ: ನಗರದ ಸೋಲದೇವನಹಳ್ಳಿಯ ಖಾಸಗಿ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ಕೇರಳದ ಯುವತಿ 10 ದಿನಗಳ ಹಿಂದೆಯಷ್ಟೇ ಆರೋಪಿ ಅಶ್ರಫ್ ಒಡೆತನದ ಪಿ.ಜಿಗೆ ಸೇರಿದ್ದಳು. ಶುಕ್ರವಾರ ರಾತ್ರಿ ತನ್ನನ್ನು ಕಾರಿನಲ್ಲಿ ಕರೆದೊಯ್ದಿದ್ದ ಅಶ್ರಫ್, ನಿರ್ಜನ ಪ್ರದೇಶದಲ್ಲಿ ದೌರ್ಜನ್ಯವೆಸಗಿದ್ದ. ಬಳಿಕ ತನ್ನ ಪೇಯಿಂಗ್ ಗೆಸ್ಟ್‌ಗೆ ವಾಪಸ್ ಕರೆತಂದು ಬಿಟ್ಟಿದ್ದ ಎಂದು ಸಂತ್ರಸ್ತೆ ತನ್ನ ದೂರಿನಲ್ಲಿ ಆರೋಪಿಸಿದ್ದಾಳೆ. ಅತ್ಯಾಚಾರ ಎಸಗಲು ಪ್ರಯತ್ನಿಸಿದಾಗ, ವಿರೋಧಿಸಿದ್ದಕ್ಕೆ ಆತ ನನ್ನ ಮೇಲೆ ಹಲ್ಲೆ ಮಾಡಿದ್ದಾನೆ ಎಂದು ಯುವತಿ ದೂರಿದ್ದಾಳೆ. ಘಟನೆಯಿಂದ ಆಘಾತಕ್ಕೊಳಗಾಗಿದ್ದ ಸಂತ್ರಸ್ತೆ ಸ್ನೇಹಿತರ ಸಹಾಯದಿಂದ ಸೋಲದೇವನಹಳ್ಳಿ ಠಾಣೆಗೆ ದೂರು ನೀಡಿದ್ದಾಳೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಘಟನಾ ಸ್ಥಳ ಪರಿಶೀಲನೆ ನಡೆಸಿದ್ದು, ಆರೋಪಿಯನ್ನ ಹೆಚ್ಚಿನ ವಿಚಾರಣೆ ನಡೆಸುತ್ತಿರುವುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

# ಕಸ ವಿಲೇವಾರಿಗೆ 33 ಪ್ಯಾಕೇಜ್‌ನಡಿ ಟೆಂಡರ್

**ಬೆಂಗಳೂರು:** ಬಿಬಿಎಂಪಿ ನಗರದ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ಮುಂದಾಗಿದ್ದು, ಈ ನಿಟ್ಟಿನಲಿ ಕಸ ಸಂಸ್ಕರಣಾ ಘಟಕಗಳಿಗೆ ಖಾಸಗಿ ಸಹಭಾಗಿತ್ವದಡಿ ಘನತ್ಯಾಜ್ಯವನ್ನು ಸಂಗ್ರಹಿಸಿ, ಸಾಗಣೆ ಮಾಡಲು 33 ಪ್ಯಾಕೇಜ್‌ನಡಿಯಲ್ಲಿ ಟೆಂಡರ್ ಕರೆದಿದೆ.

ನಗರದಲ್ಲಿ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬಿಬಿಎಂಪಿಯು ಖಾಸಗಿ ಸಹಭಾಗಿತ್ವದಡಿ ಬೃಹತ್ ಟೆಂಡರ್ ಆಹ್ವಾನದ ಬೆನ್ನಲ್ಲೇ, ಪ್ರಾಥಮಿಕ ಹಾಗೂ ದ್ವಿತೀಯ ಹಂತದದ ಕಸ ಸಾಗಿಸಲು 33 ಪ್ಯಾಕೇಜ್ ಅಡಿಯಲ್ಲಿ ಟೆಂಡರ್ ಕರೆದಿದ್ದು, ಪಾಲಿಕೆ ವ್ಯಾಪ್ತಿಯಲ್ಲಿರುವ ವಿಧಾನಸಭಾ ಕ್ಷೇತ್ರವಾರು ಪ್ಯಾಕೇಜ್ ವಿಂಗಡಿಸಲಾಗಿದೆ. ದೊಡ್ಡ ಕ್ಷೇತ್ರಗಳಿಗೆ ಎರಡು ಪ್ಯಾಕೇಜ್ ಮಾಡಿದ್ದು, ವಾರ್ಷಿಕ 545.59 ಕೋಟಿ ರು. ಮೊತ್ತವನ್ನು ನಿಗದಿ ಮಾಡಲಾಗಿದೆ. ಒಟ್ಟು ಏಳು ವರ್ಷಕ್ಕೆ ಟೆಂಡರ್ ಅನ್ವಯವಾಗಲಿದ್ದು, ನಿವ್ವಳ ಮೊತ್ತವು 3,820 ಕೋಟಿ ರು. ಆಗಲಿದೆ.

ರಾಜ್ಯ ಸರಕಾರವು ಸಚಿವ ಸಂಪುಟ ಸಭೆಯಲ್ಲಿ ಘನತ್ಯಾಜ್ಯ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ವಿಷಯಗಳಲ್ಲಿ ಪ್ರತ್ಯೇಕ ಟೆಂಡರ್ ಆಹ್ವಾನಿಸಲು ಅನುಮತಿ ನೀಡಿದ್ದು, ಕಳೆದ ವಾರ ಸಂಸ್ಕರಣಾ ಘಟಕಗಳಿಗೆ ಕಸ ಸಾಗಿಸಿ ವೈಜ್ಞಾನಿಕವಾಗಿ ವಿಂಗಡಿಸಿ ಸಂಸ್ಕರಿಸಲು ಟೆಂಡರ್ ಕರೆಯಲಾಗಿತ್ತು. ಇದಕ್ಕೆ ಪೂರಕವಾಗಿ ಕಸ ಉತ್ಪತ್ತಿಯಾಗುವ ಸ್ಥಳಗಳಿಂದ ಸಂಗ್ರಹಿಸಿ ಅವುಗಳನ್ನು ಹೊಸದಾಗಿ ನಿಗದಿ ಮಾಡುವ ಕೇಂದ್ರಗಳಿಗೆ ರವಾನಿಸಲು ಈಗ ಪ್ರತ್ಯೇಕವಾದ ಟೆಂಡರ್ ಕರೆದಿದ್ದು, ಮೂರು ತಿಂಗಳಲ್ಲಿ ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ ಹೊಸ ವ್ಯವಸ್ಥೆಯಡಿ ಕಸ ವಿಲೇವಾರಿಯನ್ನು ನಿರ್ವಹಿಸಲು ಪಾಲಿಕೆ ನಿರ್ಧರಿಸಿದೆ.

ಪ್ರಸ್ತುತ ನಗರದಲ್ಲಿ ನಿತ್ಯ 5 ಸಾವಿರ ಮೆಟ್ರಿಕ್ ಟನ್ ಪ್ರಮಾಣದಷ್ಟು ಕಸ ಉತ್ಪತ್ತಿಯಾಗುತ್ತಿದೆ. 2030ರ ವೇಳೆಗೆ 7 ಸಾವಿರ ಮೆಟ್ರಿಕ್ ಟನ್‌ಗೆ ಹೆಚ್ಚಳವಾಗಲಿದ್ದು, ಈ ಹಿನ್ನೆಲೆ ತ್ಯಾಜ್ಯ ಸಂಗ್ರಹಣೆ ವಿಂಗಡಿಸಿ ಸಂಸ್ಕರಣೆ ಘಟಕಗಳಿಗೆ ಸಾಗಿಸಿ ಅದರಿಂದ ವಿದ್ಯುತ್ ಅಥವಾ ಗೊಬ್ಬರವನ್ನಾಗಿ ತಯಾರಿಸಲು ಪಾಲಿಕೆ ಮುಂದಾಗಿದೆ ಎಂದು ಮೂಲಗಳು ತಿಳಿಸಿದೆ.


AJAX
MAKES CONCRETE SENSE

## AJAX ENGINEERING LIMITED

*(formerly Ajax Engineering Private Limited)*

**Registered Office:** #253/1, 11th Main, 3rd Phase, Peenya Industrial Area, Bengaluru – 560058, Karnataka
**CIN:** L28245KA1992PLC013306, **Website:** www.ajax-engg.com | **Email Id:** complianceofficer@ajax-engg.com | **Tel:** +91-80-67200082/83

**EXTRACT OF UNAUDITED FINANCIAL RESULTS FOR THE QUARTER ENDED JUNE 30, 2025**

*(All amounts in Rs. million, except as otherwise stated)*

| Sr. No | Particulars | Quarter ended | | | Year ended |
|---|---|---|---|---|---|
| | | June 30, 2025 | March 31, 2025 | June 30, 2024 | March 31, 2025 |
| | | Unaudited | Audited | Unaudited | Audited |
| 1 | Total income | 4,791.12 | 7,674.85 | 4,817.74 | 21,167.20 |
| 2 | Profit for the period/year | 528.75 | 909.48 | 669.90 | 2,600.96 |
| 3 | Total comprehensive income for the period/year | 526.19 | 904.14 | 670.63 | 2,596.86 |
| 4 | Paid-up equity share capital (Face value: Re.1 each) | 114.41 | 114.41 | 114.41 | 114.41 |
| 5 | Other equity | | | | 11,456.96 |
| 6 | Earnings per equity share (Nominal value of Re. 1 each) (not annualised for interim periods) | | | | |
| | (a) Basic (Rs.) | 4.62 | 7.95 | 5.86 | 22.73 |
| | (b) Diluted (Rs.) | 4.59 | 7.90 | 5.83 | 22.61 |

**Notes:**

a. The above financial results of Ajax Engineering Limited (the 'Company') for the quarter ended June 30, 2025, have been reviewed by the Audit Committee and approved by the Board of Directors at their respective meetings held on August 02, 2025. The Statutory Auditors have reviewed the financial results for the quarter ended June 30, 2025 and have issued an unmodified opinion on the same.

b. The above unaudited financial results have been prepared in accordance with Indian Accounting standards notified under Section 133 of the Companies Act, 2013, as amended, read with Companies (Indian Accounting Standards) Rules, 2015 and in terms of Regulation 33 of the SEBI (Listing Obligations and Disclosure Requirements) Regulations, 2015.

c. During the previous year ended March 31, 2025, the Company completed its Initial Public Offering (IPO) of 20,180,446 equity shares with a face value of Re. 1 each at an issue price of Rs. 629 per share (includes employee reservation portion of 78,947 equity shares with a face value of Re. 1 each at an issue price of Rs. 570), consisting entirely of offer for sale of 20,180,446 shares. The total proceeds on account of offer for sale is Rs. 12,688.84 million. The Company's equity shares were listed on the National Stock Exchange of India Limited (NSE) and BSE Limited (BSE) on February 17, 2025.

d. The above is an extract of the detailed format of Financial Results for the quarter ended June 30, 2025 filed with Stock Exchange under Regulation 33 of the SEBI (Listing Obligations and Disclosure Requirements) Regulations, 2015. The full format of the Finacial Results for the quarter ended June 30, 2025 is available on the website of National Stock Exchange of India Limited i.e. www.nseindia.com and BSE Limited i.e. www.bseindia.com and on the website of the Company i.e. www.ajax-engg.com. The same can be accessed by scanning the QR code provided below.

**For Ajax Engineering Limited**
(formerly known as Ajax Engineering Private Limited)
SD/-
**Shubhabrata Saha**
Managing Director and CEO
DIN: 03036747

Date: August 02, 2025
Place: Bengaluru

Adfactors 325/25


# ಮಾನವ ಮೌಲ್ಯ ತಿಳಿಸುವ ಕೃತಿ ಹೆಮ್ಮಂಡಹಳ್ಳಿ



ಬಸವನಗುಡಿಯ ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ಹೆಮ್ಮಂಡಹಳ್ಳಿ ಜಿ.ಮುನಿಸ್ವಾಮಿಯವರ ಹೆಮ್ಮಂಡಹಳ್ಳಿ ಕೃತಿ ಬಿಡುಗಡೆ ಮಾಡಲಾಯಿತು.

**ಬೆಂಗಳೂರು:** ಮೇಲ್ವರ್ಗ ಹಾಗೂ ಕೆಳ ವರ್ಗದ ಸಂಘರ್ಷದಲ್ಲಿ ವ್ಯಕ್ತಿಗಳು ಹೇಗೆ ಮನುಷ್ಯರಾಗುತ್ತಾರೆ ಎನ್ನುವುದನ್ನು ದಲಿತ ಕಥೆಗಳು ನಮ್ಮ ಮುಂದಿಡುತ್ತವೆ ಎಂದು ವಿಮರ್ಶಕ, ಚಿಂತಕ ಡಾ. ಬಸವರಾಜ ಕಲ್ಗುಡಿ ಹೇಳಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜಿನ ಎಚ್.ಎನ್ ಮಲ್ಟಿಮೀಡಿಯಾ ಸಭಾಂಗಣದಲ್ಲಿ ತೊಳಸಿ ಪ್ರಕಾಶನದ ವತಿಯಿಂದ ಹೆಮ್ಮಂಡಹಳ್ಳಿ ಜಿ ಮುನಿಸ್ವಾಮಿಯವರ ಹೆಮ್ಮಂಡಹಳ್ಳಿಯಿಂದ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಒಂದು ಉತ್ತಮವಾದ ಮಾದರಿ ಕೃತಿ ಹೆಮ್ಮಂಡಹಳ್ಳಿಯಿಂದ ಆಗಿದೆ. ಇಲ್ಲಿನ ಪ್ರತಿಯೊಂದು ಪುಟದ ಬರವಣಿಗೆಗಳು ಕತೆಗಳಾಗಿ, ಭಾಷೆಯ ಜೀವಂತಿಕೆಯ ಸಾಕ್ಷಿಯಾಗಿ ನಮ್ಮ ಮುಂದೆ ನಿಲ್ಲುತ್ತವೆ. ಕನ್ನಡದಲ್ಲಿ ಹಲವು ತರಹದ ಆತ್ಮಕಥನಗಳು ಬಂದಿವೆ. ಮುಖ್ಯವಾಗಿ ಸಾಹಿತಿಗಳು, ಚಿಂತಕರು ಒಳಗೊಂಡು ಇತರರು ಅತ್ಯುತ್ತಮವಾಗಿ ಆತ್ಮಕಥನ ರಚಿಸಿದ್ದಾರೆ. ಪ್ರಮುಖವಾಗಿ ಕೆಲ ಆತ್ಮಕಥನಗಳಲ್ಲಿ ಬಚ್ಚಿಡುವಂತಹ ಸಂಗತಿಗಳನ್ನು ಕಾಣಬಹುದಾದರೆ, ಇನ್ನಿತರೆಗಳಲ್ಲಿ ಬಿಚ್ಚಿಡುವಂತಹ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಜಿ.ಮುನಿಸ್ವಾಮಿ ಅವರ ಆತ್ಮಕಥನದಲ್ಲಿ ಬಿಚ್ಚಿಡುವಂತಹ ಅನೇಕ ಅನುಭವಗಳನ್ನು ಸ್ವಾರಸ್ಯಕರ ಹಾಗೂ ಅರ್ಥಪೂರ್ಣವಾಗಿ ವಿವರಿಸುತ್ತಾ ಸಾಗಿರುವ ವೈಖರಿ ಅಚ್ಚರಿಯಿಂದ ಓದುವಂತೆ ಮಾಡುತ್ತದೆ ಎಂದು ತಿಳಿಸಿದರು.

ಹಿರಿಯ ಚಿಂತಕ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, ಲೇಖಕನು ಮೊದಲ ಕೆಲವು ಪುಟಗಳಲ್ಲಿ ತನ್ನ ಬಾಲ್ಯದ ಜೀವನ, ನೋವು-ನಲಿವು, ಹಸಿವು, ಬಡತನ, ಅಸ್ಪ್ರಶ್ಯತೆಯಿಂದ ಅನುಭವಿಸಿದ ಕೆಲವು ವಿಚಾರಗಳನ್ನು ಮನಸ್ಸಿಗೆ ತಟ್ಟುವಂತೆ ಕಟ್ಟಿದ್ದಾರೆ. ಮೇಲ್ವರ್ಗದ ಜನರು ಎಷ್ಟರಮಟ್ಟಿಗೆ ದಲಿತರ ಜೀವನವನ್ನು ಹಿಂಡಿ ಹಿಪ್ಪೆಕಾಯಿ ಮಾಡಿದ್ದಾರೆ ಎನ್ನುವುದನ್ನು ನಾವು ಇವರ ಆತ್ಮಕತೆಯ ಮೂಲಕ ತಿಳಿದುಕೊಳ್ಳಬಹುದು. ಇನ್ನು ಪ್ರಸಕ್ತ ದಿನಗಳಲ್ಲಿ ನಡೆಯುವ ಬೆಳವಣಿಗೆಗಳನ್ನು ನೋಡುವಾಗ ಅಸ್ಪ್ರಶ್ಯತೆ ಅನ್ನುವುದು ಎಷ್ಟರ ಮಟ್ಟಿಗೆ ನಮ್ಮ ಸಮಾಜಕ್ಕೆ ಪರಿಣಾಮ ಬೀರುತ್ತದೆ ಅನ್ನುವುದನ್ನು ಕಾಣಬಹುದು. ಪ್ರತೊಯೊಬ್ಬ ದಲಿತನೂ ಒಂದೊಂದು ಆತ್ಮಕಥೆಯನ್ನು ಬರೆಯಬೇಕು ಎಂದರು.

ಪತ್ರಕರ್ತ ಚ.ಹ.ರಘುನಾಥ ಮಾತನಾಡಿ, ಮುನಿಸ್ವಾಮಿ ಅವರು ಬಡತನದಿಂದ ಬಂದ ವಿದ್ಯಾರ್ಥಿ ಹಾಗಾಗಿ ಅವರು ಹಲವು ಹಂತದಲ್ಲಿ ಅವಮಾನಗಳನ್ನು ಎದುರಿಸಿ ಅವುಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಜೀವನ ಪಯಣದಲ್ಲಿ ಸಾಗಿ ಬಂದವರು. ಇವರ ಆತ್ಮಕಥನದಲ್ಲಿರುವುದು ಕೇವಲ ಬರವಣಿಗಳಲ್ಲ, ಬದಲಾಗಿ ಕಾವ್ಯದ ಒಳ ನೋಟಗಳನ್ನು ಸಹ ಕಾಣಬಹುದಾಗಿದೆ ಎಂದರು. ವಿಮರ್ಶಕ ಎಚ್.ದಂಡಪ್ಪ, ಆತ್ಮಕಥನ ಲೇಖಕ ಹೆಮ್ಮಂಡಹಳ್ಳಿ ಜಿ. ಮುನಿಸ್ವಾಮಿ ಮತ್ತಿತರರು ಇದ್ದರು.


ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯ
ಜೆ.ಎಂ.ಎಫ್.ಸಿ. ಕನಕಪುರ.
ಸಿ.ಮಿಸ್ ನಂಬರ್: 428/2025

**ಅರ್ಜಿದಾರರು:** ಶ್ರೀಮತಿ.ವೆಂಕಟಮ್ಮ ಬಿನ್ ಲೇಟ್.ವೆಂಕಟಯ್ಯ. ಕೋಂ ವಾಟಳ್ ಸಣ್ಣಯ್ಯ, ವಯಸ್ಸು : 75 ವರ್ಷ,ವಿಳಾಸ: ಅಶೋಕನಗರ, ಮಳವಳ್ಳಿ ಟೌನ್, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಮತ್ತು ಇತರರು.

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ & ಮರಣ ನೋಂದಣಿ ಅಧಿಕಾರಿ, ತಹಶೀಲ್ದಾರ್ ರವರು ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು. ಮೇಡಮಾರನಹಳ್ಳಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು,

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರುಗಳು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಾಣಿಸಿದ ಅರ್ಜಿದಾರರಾದ 1, 2 ಮತ್ತು 4 ರಿಂದ 7 ರವರ ಅಜ್ಜ (ತಾತ) ಮತ್ತು 3ನೇ ಅರ್ಜಿದಾರರ ಮಾವರವರಾದ ತಿರುಮಳದಾಸಯ್ಯ ಉಃಖಃ ದಾಸ ಬಿನ್ ಲೇಟ್. ತಿಮ್ಮ ರವರು ಮೇಡಮಾರನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಈ ವಿಳಾಸದಲ್ಲಿ ದಿನಾಂಕ: 01-01-1965 ರಂದು ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಸದರಿ ಶ್ರೀ. ತಿರುಮಳದಾಸಯ್ಯ ಉಃಖಃ ದಾಸ ಬಿನ್ ಲೇಟ್. ತಿಮ್ಮ ರವರ ಮರಣ ದಿನಾಂಕದ ಬಗ್ಗೆ ಯಾರದ್ದದಾರು ತಕರಾರು ಇದ್ದಲ್ಲಿ ಸಂಬಂದಪಟ್ಟ ವ್ಯಕ್ತಿಗಳು ಖುದ್ದಾಗಿಯಾಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ಘನ ನ್ಯಾಯಾಲಯ ನಿಗದಿ ಪಡಿಸಿದ ದಿನಾಂಕ: 06-09-2025 ರಂದು ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿಯವರ ಮರಣ ದಿನಾಂಕದ ಬಗ್ಗೆ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯಾರ್ಥಗೊಳಿಸಲಾಗುವುದು.

ದಿನಾಂಕ:02.08.2025ರಂದು ನನ್ನ ಸ್ವ-ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.
ಮಾನ್ಯ ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ.

ಅರ್ಜಿದಾರರ ಪರ ವಕೀಲರು,
ಆನಂದ ಹೆಚ್. ಬಿ
ಸ್ಥಳ: ಕನಕಪುರ
ದಿನಾಂಕ:19.07.2025

---

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯ
ಜೆ.ಎಂ.ಎಫ್.ಸಿ. ಕನಕಪುರ.
ಸಿ.ಮಿಸ್ ನಂಬರ್: 429/2025

**ಅರ್ಜಿದಾರರು:** ಶ್ರೀಮತಿ.ವೆಂಕಟಮ್ಮ ಬಿನ್ ಲೇಟ್.ವೆಂಕಟಯ್ಯ. ಕೋಂ ವಾಟಳ್ ಸಣ್ಣಯ್ಯ, ವಯಸ್ಸು : 75 ವರ್ಷ,ವಿಳಾಸ: ಅಶೋಕನಗರ, ಮಳವಳ್ಳಿ ಟೌನ್, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಮತ್ತು ಇತರರು.

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ & ಮರಣ ನೋಂದಣಿ ಅಧಿಕಾರಿ, ತಹಶೀಲ್ದಾರ್ ರವರು ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು. ಮೇಡಮಾರನಹಳ್ಳಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು,

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರುಗಳು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಾಣಿಸಿದ ಅರ್ಜಿದಾರರಾದ 1, 2 ಮತ್ತು 4 ರಿಂದ 7 ರವರ ಅಜ್ಜಿ ಮತ್ತು 3ನೇ ಅರ್ಜಿದಾರರ ಅತ್ತೆಯಾದ ಶ್ರೀಮತಿ. ಮುತ್ತಮ್ಮ ಉಃಖಃ ಚಿಕ್ಕವೆಂಕಟಮ್ಮ ಕೋಂ ಲೇಟ್. ತಿರುಮಳದಾಸಯ್ಯ ಉಃಖಃ ದಾಸ ರವರು ಮೇಡಮಾರನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಈ ವಿಳಾಸದಲ್ಲಿ ದಿನಾಂಕ: 10-08-1970 ರಂದು ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಸದರಿ ಮುತ್ತಮ್ಮ ಉಃಖಃ ಚಿಕ್ಕವೆಂಕಟಮ್ಮ ಕೋಂ ಲೇಟ್. ತಿರುಮಳದಾಸಯ್ಯ ಉಃಖಃ ದಾಸ ರವರ ಮರಣ ದಿನಾಂಕದ ಬಗ್ಗೆ ಯಾರದ್ದದಾರು ತಕರಾರು ಇದ್ದಲ್ಲಿ ಸಂಬಂದಪಟ್ಟ ವ್ಯಕ್ತಿಗಳು ಖುದ್ದಾಗಿಯಾಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ಘನ ನ್ಯಾಯಾಲಯ ನಿಗದಿ ಪಡಿಸಿದ ದಿನಾಂಕ:06-09-2025 ರಂದು ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿಯವರ ಮರಣ ದಿನಾಂಕದ ಬಗ್ಗೆ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯಾರ್ಥಗೊಳಿಸಲಾಗುವುದು.

ದಿನಾಂಕ:02.08.2025ರಂದು ನನ್ನ ಸ್ವ-ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.
ಮಾನ್ಯ ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ.

ಅರ್ಜಿದಾರರ ಪರ ವಕೀಲರು,
ಆನಂದ ಹೆಚ್. ಬಿ
ಸ್ಥಳ: ಕನಕಪುರ
ದಿನಾಂಕ:02.08.2025

---

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 442/2025

**ಅರ್ಜಿದಾರರು:** ಶ್ರೀ ಗೋವಿಂದಯ್ಯ ಬಿನ್ ಲೇಟ್ ಭೈರಯ್ಯ ವಯಸ್ಸು 60 ವರ್ಷ ವಾಸ: ಹಾರುತಿಪಾಳ್ಯ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರುತಿಪಾಳ್ಯ ಗ್ರಾಮ, ಚಿಕ್ಕಲ್‌ಬಾಳು ವೃತ್ತ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 3 ರಿಂದ 5ನೇ ಅಜಿದಾರರ ತಂದೆ, 2ನೇ ಅರ್ಜಿದಾರರ ಮಾವನವರಾದ ಶ್ರೀ ಭಯರಯ್ಯ ಬಿನ್ ಲೇಟ್ ಲಕ್ಷ್ಮಯ್ಯ ರವರು, ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರುತಿಪಾಳ್ಯ ಗ್ರಾಮದಲ್ಲಿ ದಿನಾಂಕ 29.01.2015 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 06/09/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಆಗಸ್ಟ್ 02ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ, ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ, ದಿನಾಂಕ: 19/07/2025

---

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.
ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 301/2025

**ಅರ್ಜಿದಾರರು:** ಶ್ರೀಮತಿ. ಸಿದ್ದಮಾದಮ್ಮ ಕೋಂ ಲೇಟ್ ಚಿಕ್ಕಚೂಡಯ್ಯ ವಯಸ್ಸು 72 ವರ್ಷ, ವಾಸ: ಅರಳಾಳ್ಳು ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇನ್ನೊಬ್ಬರು.

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, 2. ಗ್ರಾಮ ಲೆಕ್ಕಾಧಿಕಾರಿಗಳು, ಅರಳಾಳು ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಯಜಮಾನರ ಅಜ್ಜಿ ಮತ್ತು 2ನೇ ಅರ್ಜಿದಾರರ ಅಜ್ಜಿ ನವರು ಆದ ಶ್ರೀಮತಿ ಮಂಚಮ್ಮ ಕೋಂ ಲೇಟ್ ದೊಳ್ಳಯ್ಯ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಅರಳಾಳು ಗ್ರಾಮದಲ್ಲಿ ದಿನಾಂಕ : 05-02-1940 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, 12/08/2025 ರ ಬೆಳಿಗ್ಗೆ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜುಲೈ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ
ವಕೀಲರು, ಕನಕಪುರ
ಸ್ಥಳ : ಕನಕಪುರ

---

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.
ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 300/2025

**ಅರ್ಜಿದಾರರು:** ಶ್ರೀಮತಿ. ಸಿದ್ದಮಾದಮ್ಮ ಕೋಂ ಲೇಟ್ ಚಿಕ್ಕಚೂಡಯ್ಯ ವಯಸ್ಸು 72 ವರ್ಷ, ವಾಸ: ಅರಳಾಳ್ಳು ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇನ್ನೊಬ್ಬರು.

ವಿರುದ್ಧ

**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, 2. ಗ್ರಾಮ ಲೆಕ್ಕಾಧಿಕಾರಿಗಳು, ಅರಳಾಳು ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಯಜಮಾನರ ತಾತ ಮತ್ತು 2ನೇ ಅರ್ಜಿದಾರರ ತಾತ ನವರು ಆದ ಶ್ರೀ ದೊಳ್ಳಯ್ಯ ಬಿನ್ ಲೇಟ್ ದೊಳ್ಳಯ್ಯ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಅರಳಾಳು ಗ್ರಾಮದಲ್ಲಿ ದಿನಾಂಕ : 15-031935 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, 12/08/2025 ರ ಬೆಳಿಗ್ಗೆ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜುಲೈ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ
ವಕೀಲರು, ಕನಕಪುರ
ಸ್ಥಳ : ಕನಕಪುರ


# ರಾಷ್ಟ್ರೀಯ ಸಹಕಾರ ನೀತಿ 2025 ಸ್ವಾಗತಾರ್ಹ

## ಶ್ರೀ ತ್ಯಾಗರಾಜ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಆರ್. ವೆಂಕಟೇಶ್

**ಬೆಂಗಳೂರು:** ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವ ಮೂಲಕ ಸಹಕಾರ ಕ್ಷೇತ್ರದ ಸಮಗ್ರ ಅಭಿವೃದ್ಧಿ ನಾಂದಿ ಹಾಡಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಹಕಾರ ಸಚಿವ ಅಮಿತ್ ಶಾ ಅವರು ಇದೀಗ ನೂತನ ರಾಷ್ಟ್ರೀಯ ಸಹಕಾರ ನೀತಿ-2025ನ್ನು ಅನಾವರಣಗೊಳಿಸಿರುವುದು ಸ್ವಾಗತಾರ್ಹ ಎಂದು ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಆರ್. ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.



ರಾಷ್ಟ್ರೀಯ ಸಹಕಾರ ನೀತಿಯು ಮುಂದಿನ 20 ವರ್ಷಗಳಲ್ಲಿ ದೇಶದ ಸಹಕಾರ ಚಳುವಳಿಯ ದಿಕ್ಕನ್ನೇ ಬದಲಾಯಿಸಬಲ್ಲದು. ಆಡಳಿತ ವ್ಯವಸ್ಥೆಯ ಬಲವರ್ಧನೆ, ಸಹಕಾರ ಸಂಸ್ಥೆಗಳ ಬೆಳವಣಿಗೆ, ಭವಿಷ್ಯದ ಸವಾಲುಗಳ ಸಿದ್ಧತೆ, ಎಲ್ಲರನ್ನೂ ಒಳಗೊಳ್ಳುವ ಸಂಪರ್ಕ, ಸೇವೆಗಳ ವಿಸ್ತರಣೆ ಮತ್ತು ಯುವಜನರ ತೊಡಗಿಸಿಕೊಳ್ಳುವಿಕೆಗೆ ಸಹಕಾರಿಯಾಗಲಿದೆ. ರಾಷ್ಟ್ರದಲ್ಲಿ ನೂತನವಾಗಿ 2ಲಕ್ಷ ಪ್ರಾಥಮಿಕ ಹಂತದ ಬಹುಸೇವಾ ಪ್ರಾಥಮಿಕ ಕೃಷಿಪತ್ತಿನ ಸೇವಾ ಸಹಕಾರ ಸಂಘಗಳು, ಹೈನುಗಾರಿಕೆ ಸಂಘಗಳು ಮತ್ತು ಮೀನುಗಾರಿಕಾ ಸಂಘಗಳು ಸ್ಥಾಪನೆಯಾಗಲಿವೆ. ಇದರ ಪರಿಣಾಮವಾಗಿ ಗ್ರಾಮೀಣ ಆರ್ಥಿಕತೆಗೆ ಪುಷ್ಟಿ ನೀಡಿ ಆತ್ಮನಿರ್ಭರ ಭಾರತಕ್ಕೆ ಹೆಚ್ಚಿನ ಒತ್ತನ್ನು ನೀಡುವುದರ ಮೂಲಕ ಕೃಷಿ ಬೆಳವಣಿಗೆ ಮತ್ತು ಹೈನು ಹಾಗೂ ಆಹಾರ ಉತ್ಪನ್ನಗಳ ಮಾರಾಟದಿಂದ ಹೆಚ್ಚಿನ ಆದಾಯಗಳಿಸಬಹುದಾಗಿದೆ ಎಂದು ವಿಶ್ಲೇಷಿಸಿದ್ದಾರೆ.

ಪಟ್ಟಣ ಸಹಕಾರಿ ಬ್ಯಾಂಕುಗಳು, ಹೌಸಿಂಗ್ ಸೊಸೈಟಿಗಳು, ಕ್ರೆಡಿಟ್ ಸೊಸೈಟಿಗಳು ಮತ್ತು ಮಾರ್ಕೆಟಿಂಗ್ ಸೊಸೈಟಿಗಳು ಇತ್ಯಾದಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ರಾಷ್ಟ್ರೀಯ ಸಹಕಾರ ನೀತಿ ಶಕ್ತಿ ತುಂಬಲಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸಹಕಾರ ನೀತಿ-2025ನ್ನು ದೇಶದ ಸಹಕಾರಿಗಳು ಹರ್ಷದಿಂದ ಸ್ವಾಗತಿಸುತ್ತಿದ್ದಾರೆ. ಭವಿಷ್ಯದಲ್ಲಿ ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಗೆ ಬಹು ದೊಡ್ಡ ಕೊಡುಗೆ ನೀಡಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ವಿಶ್ವವಾಣಿ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
@vishwavaninews
ಬೆಂಗಳೂರು
04-08-2025
ಸೋಮವಾರ

## ಚಿತ್ತವಿಹಾರ

### ಪ್ರಾಮಾಣಿಕವಾಗಿರೋಣ

ನಮ್ಮ ಮನಸ್ಸು ಬಹುತೇಕ ಬಾರಿ ಭ್ರಾಂತಿಯಲ್ಲಿಯೇ ಮುಳುಗುಹಾಕುತ್ತದೆ. ಪ್ರಾಮಾಣಿಕ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಹಿಂದೇಟು ಹಾಕುತ್ತೇವೆ. ದೋಷ-ದೌರ್ಬಲ್ಯಗಳನ್ನು, ಸಣ್ಣತನ-ಸಂಕುಚಿತತೆಗಳನ್ನು ಗುಣಾವಗುಣಗಳನ್ನು ಇದ್ದಂತೆ ಒಪ್ಪಿಕೊಳ್ಳುವುದಿಲ್ಲ. ಅವುಗಳಿಗೆ ಒಂದಷ್ಟು ಸೋಗಲಾಡಿತನದ ಮುಖವಾಡ ಹಾಕುತ್ತೇವೆ. ಇದು ತಾತ್ಕಾಲಿಕವಾಗಿ ಒಂದಷ್ಟು ಸುಖದ ಭಾವವನ್ನು ಮೂಡಿಸಿದರೂ ಅದು ಕ್ಷಣಕಾಲವಷ್ಟೇ. ಕಾಯಿಲೆಯಿಂದ ಬಳಲುತ್ತಿರುವುದಾದರೆ ಅದನ್ನು ಒಪ್ಪಿಕೊಳ್ಳಬೇಕು. ಬದುಕಿನಲ್ಲಿ ನಮ್ಮದೆ ಕಷ್ಟ-ನಷ್ಟಗಳು, ಏರಿಳಿತಗಳು ತೀರ ಸಾಮಾನ್ಯ. ಯಾವುದೇ ತಾತ್ವಿಕ ಮೌಲ್ಯಗಳಿಗೆ ಜೋತು ಬೀಳದೆ ಅವು ಗಳೊಂದಿಗೆ ಪ್ರಾಮಾಣಿಕವಾಗಿರಬೇಕು. ಒಳ ಮನಸ್ಸಿನ ಒಗಟುಗಳನ್ನೆಲ್ಲ ಒಡಿದು ತಿಳಿನೀರಿಂತಾ ದಾಗಬೇಕು.

ಸಾವನ್ನು ಸಮೀಪಿಸುತ್ತಿರುವ ಝೆನ್ ಮಾಸ್ಟರ್ ತನ್ನೆಲ್ಲ ಶಿಷ್ಯರನ್ನು ಎದುರು ಕೂರಿಸಿಕೊಂಡರು. ಅವರ ಮಾತುಗಳನ್ನು ಕೇಳಲು ಅವನ ಅನುಯಾಯಿಗಳೆಲ್ಲ ತುಂಬ ಕಾತುರದಿಂದ ಕಾಯುತ್ತಿದ್ದರು.

ಅಪಾರ ಜ್ಞಾನಿಯಾಗಿದ್ದ ಅವರು ಬದುಕಿನ ತುಂಬ ಬಹಳಷ್ಟು ಶ್ರದ್ಧೆ, ಸಂಪ್ರದಾಯ ಬದ್ಧತೆಗೆ ಅನುಗುಣವಾಗಿ ಬದುಕನ್ನು ನಡೆಸಿ ಇತರರ ಎಲ್ಲರಿಗೂ ಅನುಕರಣೀಯರಾಗಿದ್ದರು. ತ್ಯಾಗ, ಪ್ರೀತಿ, ಧ್ಯಾನ, ಸಮಚಿತ್ತ ಭಾವ ಅವರ ಬದುಕಿನ ಉಸಿರಾಗಿದ್ದವು. ಹಿರಿಯ ಶಿಷ್ಯನೊಬ್ಬ ಝೆನ್ ಮಾಸ್ಟರ್ ಅವರನ್ನು ಉಸಿರು ಬಿಡುವ ಮುನ್ನ ನಮಗೆಲ್ಲ ಜ್ಞಾನದ ಮಾತುಗಳನ್ನು ಹೇಳಲು ವಿನಂತಿಸಿಕೊಂಡ.

ಝೆನ್ ಗುರುಗಳು ಕ್ಷಣಕಾಲ ಕಣ್ಣು ಮುಚ್ಚಿಕೊಂಡರು. ಧ್ಯಾನದಲ್ಲಿ ತಲ್ಲಿರಾದರು. ನಂತರ ಕಣ್ಣು ಬಿಟ್ಟು ನನಗೆ ಸಾಯಲು ಭಯವಾಗುತ್ತಿದೆ ಹೇಳಿ ಕೊನೆ ಉಸಿರೆಳೆದರು. ಅಲ್ಲಿದ್ದವರಿಗೆಲ್ಲ ಇದು ತೀರ ಆಶ್ಚರ್ಯವನ್ನುಂಟು ಮಾಡಿತ್ತು. ಮಾತ್ರ ವಲ್ಲದೇ ಅಪಥ್ಯ ಸಂಗತಿಯಾಗಿತ್ತು. ಕೆಲವರಿಗೆ ಇದು ಆಘಾತವನ್ನುಂಟು ಮಾಡಿತ್ತು. ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತ ಮಾಸ್ಟರ್ ಅವರಿಗೆ ಜ್ಞಾನೋದಯವಾಗಿದ್ದರೆ ಇಂತಹ ಉತ್ತರವನ್ನು ಅವರು ಕೊಡುತ್ತಿರಲಿಲ್ಲ ಎಂದೆಲ್ಲ ಹೇಳಿದರು. ಅವರಲ್ಲಿ ಹಿರಿಯ ಶಿಷ್ಯರೊಬ್ಬರು ನಿಜಕ್ಕೂ ನನಗೆ ಸಂತಸವಾಯಿತು, ಅವರ ಉತ್ತರದಿಂದ. 'ಝೆನ್ ಮಾಸ್ಟರ್ ಅವರಿಗೆ ನಿಜವಾಗಿಯೂ ಜ್ಞಾನೋ ದಯವಾಗಿದ್ದನ್ನು ಅವರ ಉತ್ತರ ಸಾಕ್ಷೀಕರಿ ಸುತ್ತದೆ. ಪ್ರಾಮಾಣಿಕತೆಯೇ ಬಹುದೊಡ್ಡ ಜ್ಞಾನೋದಯದ ಸಂಕೇತ' ಎಂದರು. ಬದುಕಿ ನಲ್ಲಿ ಪ್ರಾಮಾಣಿಕವಾಗಿರುವುದು ಬಹು ದೊಡ್ಡ ಸಂಗತಿಯಾಗಿದೆ. ಯಾವುದೋ ಕಟ್ಟುಪಾಡು ಗಳಿಗೆ ಒಳಗಾಗಿ ನಮಗೆ ನಾವೇ ಮೋಸ ಮಾಡಿ ಕೊಳ್ಳುವುದಕ್ಕಿಂತ ಪ್ರಾಮಾಣಿಕವಾಗಿರು ವುದು, ನಿಜಕ್ಕೂ ಸಂತಸವನ್ನುಂಟು ಮಾಡುವ ಸಂಗತಿಯಾಗಿದೆ. ತನ್ಮಯತೆಯಿಂದ ಬದುಕಿನ ಬೆರಗುಗಳಿಗೆ ನಾವು ತೆರೆದುಕೊಳ್ಳಬೇಕು. ಸೋಜಿಗಕ್ಕೊಳಗಾಗಬೇಕು. ಮನಸ್ಸನ್ನು ಅರಳಿಸಿಕೊಳ್ಳುತ್ತ ಸಾಗ ಬೇಕು. ನಮ್ಮಲ್ಲಿ ಭಾವ ಪ್ರಾಮಾಣಿಕತೆ ಪುಟಗೊಳ್ಳ ಬೇಕು. ಅಳುಕುಗಳ ಸೆಳಕುಗಳಾಚೆ ಪರಿಶುದ್ಧ ಭಾವವನ್ನು ನಮ್ಮದಾಗಿಸಿಕೊಳ್ಳಬೇಕು. ಅನಗತ್ಯ ಆದರ್ಶಗಳ ಗಂಟುಗಳನ್ನು ತಲೆದಿಂಬಿಗಿರಿಸಿಕೊಂಡು ಆಸರೆಯ ಪಡೆಯದೆ ಹೊಸ ಕ್ಷಿತಿಜತ್ತ ಕರೆದತ್ತ ಕೈ ಬೀಸಿ ಮುನ್ನಡೆಯಬೇಕು. ಆದರ್ಶಾ ಕಾಂಕ್ಷೆಗಳ ಬೆಂಬತ್ತದೆ ವಾಸ್ತವವನ್ನು ತೆರೆದು ತೋರಿ ಸುತ್ತ ನಾವು ನಂಬಿರುವ ಮೌಲ್ಯಗಳೊಡನೆ ಸಮೀಕರಿಸಿಕೊಳ್ಳಬೇಕು.

● ಮಹಾದೇವ ಬಸರಕೋಡ

## ಹನಿಮಳೆ

### ತಡ ಬಡ

**ಅವಳ ಜೊತೆ**
**ಶಾಪಿಂಗ್ ಮಾಲ್‌ಗೆ**
**ಹೋಗಿ ಬರುವುದು**
**ತಡವಾಯ್ತು !**
**ಜೇಬು ಮತ್ತು ಬ್ಯಾಂಕ್ ಖಾತೆ**
**ಬಡವಾಯ್ತು!**

● ಮಹಾಂತೇಶ ಮಾಗನೂರ

# ಚಿಟ್ಟೆಗಳ ವಿಸ್ಮಯ ಲೋಕ

ಗೋವಾದ ಪೋಂಡಾ ಪಟ್ಟಣದ ಬಳಿ ಇರುವ ಈ ಚಿಟ್ಟೆಗಳ ಪ್ರಪಂಚವು, ಹಲವು ಪ್ರಭೇದದ ಚಿಟ್ಟೆಗಳಿಗೆ ಆಶ್ರಯ ನೀಡಿದೆ; ಚಿಟ್ಟೆಗಳನ್ನು ಅಧ್ಯಯನ ಮಾಡುವವರಿಗೂ ಇದು ಉತ್ತಮ ತಾಣ. ಬಣ್ಣ ಬಣ್ಣದ ಚಿಟೆಗಳನ್ನು ನೋಡುವ ಅವಕಾಶವೂ ಇಲ್ಲಿದೆ.

● ಸುರೇಶ ಗುದಗನವರ

ಹಾರುತ್ತಿರುವ ವರ್ಣರಂಜಿತ ಚಿಟ್ಟೆಗಳನ್ನು ನೋಡಿ ನಾವೆಲ್ಲರೂ ಮೋಡಿಗೊಳ್ಳುವದು ಸ್ವಾಭಾವಿಕವಲ್ಲವೇ? ನಾವೆಲ್ಲರೂ ಬಾಲ್ಯದಲ್ಲಿ ಅವುಗಳನ್ನು ಹಿಡಿಯಲು ಪ್ರಯತ್ನಿಸಿಲ್ಲವೇ? ಹಲವು ಬಣ್ಣಗಳನ್ನು ಹೊಂದಿರುವ ಈ ಆಕರ್ಷಕ ಚಿಟ್ಟೆಗಳ ಬಗ್ಗೆ ನಾವು ಯೋಚಿಸಿಲ್ಲವೇ? ಇಂತಹ ಚಿಟ್ಟೆಗಳನ್ನು ಸಂರಕ್ಷಿಸಲು ಕೆಲವರು ಪ್ರಯತ್ನ ನಡೆಸಿದ್ದಾರೆ.

ಗೋವಾದ ಪೋಂಡಾದಲ್ಲಿರುವ ಚಿಟ್ಟೆ ಸಂರಕ್ಷಣಾಲಯವು ಯಶೋಧನ್ ಮತ್ತು ಜ್ಯೋತಿ ದಂಪತಿಗಳ ಮೆದುಳಿನ ಕೂಸು. ಅದುವೇ ಮಿಸ್ಟಿಕ್ ವುಡ್ಸ್. 'ಮಿಸ್ಟಿಕ್ ವುಡ್ಸ್' ಎಂಬ ಹೆಸರು ಎನಿಡ್ ಬ್ಲೈಟನ್ ನೀತಿ ಕಥೆಯಿಂದ ಹೊರಹೊಮ್ಮುವ ಕಾಲ್ಪನಿಕ ಕಾಡಿನ ಚಿತ್ರಗಳನ್ನು ಸೃಷ್ಟಿಸುತ್ತದೆ. ನಿಜಕ್ಕೂ ಇದು ವಿವಿಧ ರೀತಿಯ ಸಸ್ಯಗಳು, ಹೂವುಗಳು ಮತ್ತು ಮರಗಳಿಂದ ತುಂಬಿರುವ ಹಸಿರಿನ ಸಾಗರವಾಗಿದೆ. ಪ್ರಕೃತಿ ಪ್ರಿಯರಾದ ಡಾ.ಜ್ಯೋತಿ ಮತ್ತು ಯಶೋಧನ್ ಹೆಬ್ಲೇಕರ್ ಅವರು 2006ರಲ್ಲಿ ಪೊಂಡಾ ಪಟ್ಟಣದಿಂದ 6 ಕಿ.ಮೀ. ದೂರದಲ್ಲಿರುವ ಬಂಜರು ಬೆಟ್ಟದ ಇಳಿಜಾರು ಪ್ರದೇಶದ 4 ಸಾವಿರ ಚದರ ಮೀಟರ್ ವಿಸ್ತೀರ್ಣದ ಸ್ಥಳವನ್ನು ತೆಗೆದುಕೊಂಡರು. ಅವರು ಚಿಟ್ಟೆಗಳ ಆಹಾರ ಮತ್ತು ಸಂತಾನೋತ್ಪತ್ತಿ ಮಾಡಬಹುದಾದ ಮರಗಳು ಹಾಗೂ ಪೊದೆಗಳನ್ನು ನೆಡುವ ಮೂಲಕ ಬಂಜರು ಭೂಮಿಯಲ್ಲಿ ಪ್ರಯೋಗ ಮಾಡಲು ನಿರ್ಧರಿಸಿದರು.



### ಮಿಸ್ಟಿಕ್ ವುಡ್ಸ್

2009ರಲ್ಲಿ ಹೆಬ್ಲೆಕರ ದಂಪತಿಗಳು ಬಟರ್‌ಫ್ಲೈ ಕನ್ಸರ್ವೇಟರಿ ಆಫ್ ಗೋವಾ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ನಂತರ 2021ರಲ್ಲಿ ಮಿಸ್ಟಿಕ್ ವುಡ್ಸ್ ಎಂಬ ಮರುನಾಮಕರಣ ಮಾಡಿದರು.

ಇಲ್ಲಿನ ಚಿಟ್ಟೆಗಳು ಹೂವುಗಳಿಂದ ಆಕರ್ಷಿತವಾಗುವುದಿಲ್ಲ. ಅದರ ಬದಲಾಗಿ ಇಲ್ಲಿರುವ ವಿಶೇಷ ವೈವಿಧ್ಯಮಯ ಸಸ್ಯಗಳಿಂದ ಆಕರ್ಷಿತವಾಗುತ್ತವೆ. ಸಂತಾನೋತ್ಪತ್ತಿ ಚಿಟ್ಟೆಗಳಿಗೆ ಸ್ಥಳೀಯ ಸಸ್ಯಗಳು, ಶುದ್ಧಗಾಳಿ ಮತ್ತು ಹ್ಯೂಮಸ್ ಸಮೃದ್ಧ ಮಣ್ಣು ಬೇಕಾಗುತ್ತದೆ. ಈ ಸ್ಥಳವು ಗ್ರೇ ಮಲಬಾರ್ ಹಾರ್ನಬಿಲ್, ಫ್ಯಾರಡೈಸ್ ಫ್ಲೈ ಕ್ಯಾಚರ್ಸ್, ರೂಬಿ ಥ್ರೋಟೆಡ್ ಹಳದಿ ಬುಲ್‌ಬುಲ್ಸ್ ಮತ್ತು ವಿವಿಧ ಸೂರ್ಯ ಪಕ್ಷಿಗಳು ಮತ್ತು ಮರಕುಟಿಕಗಳಂತಹ ವೈವಿಧ್ಯಮಯ ಪಕ್ಷಿಗಳನ್ನು ಆಕರ್ಷಿಸುತ್ತದೆ.

ಈ ಪಕ್ಷಿಧಾಮದಲ್ಲಿ ಬಡ್ಗೀಸ್, ಜಾವಾ ಫಿಂಚ್‌ಗಳು, ಸನ್ ಕೋನೂರ್ ಗಿಳಿಗಳು, ಕಾಕಟಿಯಲ್ಸ್‌ನಂತಹ ವಿಲಕ್ಷಣ ಪಕ್ಷಿಗಳ ವೈವಿಧ್ಯಮಯ ಗುಂಪಿದೆ.

### ಮಳೆಗಾಲ ಚಿಟ್ಟೆಗಳಿಗೆ ಇಷ್ಟ

ಆಗಸ್ಟ್‌ನಿಂದ ನವೆಂಬರ್‌ರವರೆಗೆ ಚಿಟ್ಟೆಗಳ ಕಾಲವಿದ್ದು, ಪ್ರತಿಯೊಂದು ಚಿಟ್ಟೆ ಪ್ರಭೇದವು ಮೊಟ್ಟೆಗಳನ್ನು ಇಡುವ ಸಸ್ಯಗಳ ವಿಷಯದಲ್ಲಿ ತನ್ನದೇ ಆದ ಆದ್ಯತೆ ಹೊಂದಿರುತ್ತದೆ. ಇದಲ್ಲದೇ ಚಿಟ್ಟೆಗಳು ಆಹಾರಕ್ಕಾಗಿ ತಮ್ಮ ನೆಚ್ಚಿನ ಸಸ್ಯಗಳನ್ನು ಹೊಂದಿವೆ. ಪ್ರತಿ ಪ್ರಭೇದದ ಚಿಟ್ಟೆಗೆ ಮೊಟ್ಟೆ ಇಡಲು ಪ್ರತ್ಯೇಕ ಪ್ರಭೇದದ ಗಿಡ ಬೇಕು. ಗಾರ್ಡೆನಿಯಾ, ಬಾರ್ಲೇರಿಯಾ ಮುಂತಾದ ಹೂ ಬಿಡುವ ಸಸ್ಯಗಳು ಈ ಚಿಟ್ಟೆಗಳ ಸ್ವರ್ಗದಲ್ಲಿ ಹೇರಳವಾಗಿವೆ. ಮಿಸ್ಟಿಕ್ ವುಡ್ಸ್‌ನ ಚಿಟ್ಟೆ ಸಂರಕ್ಷಣಾಲಯವನ್ನು ಉದ್ಯಾನವನದಂತೆ ವಿನ್ಯಾಸಗೊಳಿಸಲಾಗಿದೆ. ಇಲ್ಲಿಯವರೆಗೆ ಸಂರಕ್ಷಣಾಲಯವು 130ಕ್ಕೂ ಹೆಚ್ಚು ಜಾತಿಯ ಚಿಟ್ಟೆಗಳನ್ನು ದಾಖಲಿಸಿದೆ.

ಈ ಉದ್ಯಾನವನದಲ್ಲಿ ಅರಣ್ಯ ಅನುಭವದೊಂದಿಗೆ ಪ್ರಿಸ್ಟೀನ್ ಕೊಳವು ಶಾಂತವಾದ ವಾತಾವರಣವನ್ನು ನೀಡುತ್ತದೆ. ನಿಮ್ಮ ಕಾಲುಗಳನ್ನು ಕೊಳದಲ್ಲಿ ಕೆಲವು ಕ್ಷಣಗಳಿಗೆ ಬಿಟ್ಟು, ಮೀನುಗಳು ಚರ್ಮದ ಸುತ್ತ ಸ್ಪರ್ಶಿಸುವುದನ್ನು ನೋಡುವುದು ಒಂದು ವಿಸ್ಮಯದ ಅನುಭವವಾಗಿದೆ.

### ಉಲ್ಕಾಶಿಲೆಗಳು

ಮಿಸ್ಟಿಕ್‌ವುಡ್ಸ್‌ನಲ್ಲಿ ಅಪರೂಪದ ಕಲ್ಲುಗಳು, ಉಲ್ಕಾಶಿಲೆಗಳು ಮತ್ತು ಪಳೆಯುಳಿಕೆಗಳ ದೊಡ್ಡ ಸಂಗ್ರಹವನ್ನು ನೋಡಿ ಆನಂದಿಸಬಹುದು. ಈ ಪ್ರಾಚೀನ ವಸ್ತುಗಳ ಪ್ರತಿಯೊಂದು ಆಕರ್ಷಕ ಭಾಗವನ್ನು ಪರಿಶೀಲಿಸುವುದು ಮತ್ತು ಅವುಗಳ ಬಗ್ಗೆ ಯಶೋಧನ್ ಅವರ ವಿವರಣೆ ಅದ್ಭುತವಾಗಿದೆ. ಇಲ್ಲಿ ಸ್ಪಟಿಕ ಶಿಲೆ ಮತ್ತು ಬಣ್ಣದ ಬೆಣಚು ಕಲ್ಲುಗಳನ್ನು ಮತ್ತು ಒಣಗಿದ ಸಸ್ಯಗಳನ್ನು ಖರೀದಿಸಬಹುದು. ಉದ್ಯಾನವನದ ಉದ್ಯೋಗಿ ವಿಜಯ ಅವರು ಹಿಂದಿ, ಮರಾಠಿ ಮತ್ತು ಕೊಂಕಣಿ ಭಾಷೆಯಲ್ಲಿ ವಿವರಿಸುತ್ತಾರೆ.

### ಪರಿಸರ ಸ್ನೇಹಿ ಮನೆ

ಮಿಸ್ಟಿಕ್ ವುಡ್ಸ್‌ನ ಸಮೀಪದಲ್ಲೇ ಇರುವ ಜ್ಯೋತಿ ಮತ್ತು ಯಶೋಧನ್ ಹೆಬ್ಲೆಕರ್ ದಂಪತಿಗಳ ಪರಿಸರ ಸ್ನೇಹಿ ಹಾಗೂ ಹಚ್ಚ ಹಸಿರಿನ ಅಂತರ್ಗತ ನೀರು ಕೊಯ್ಲು ವ್ಯವಸ್ಥೆಯನ್ನು ಹೊಂದಿರುವ ಸುಂದರವಾದ ಮನೆ ಆಕರ್ಷಕ ಎನಿಸಿದೆ. ಮನೆಯ ಛಾವಣಿಯ ಮೇಲ್ಭಾಗದ ಉದ್ಯಾನವು ಮಳೆ ನೀರು ಕೊಯ್ಲು ಪ್ರಕ್ರಿಯೆಗೆ ಸಹಾಯ ಮಾಡುತ್ತದೆ. ಇದು ಮನೆಯ ಟ್ಯಾಂಕುಗಳಿಂದ ಮಳೆ ನೀರನ್ನು ಕೆಲವು ನೂರು ಮೀಟರು ದೂರದಲ್ಲಿರುವ ಮಿಸ್ಟಿಕ್ ವುಡ್ಸ್ ಉದ್ಯಾನವನದ ಬೆಟ್ಟದ ತುದಿಗೆ ಪಂಪ್ ಮಾಡುವುದಲ್ಲದೇ, ಅದನ್ನು ಮತ್ತೇ ಕೆಳಗೆ ಹರಿಯುವಂತೆ ಮಾಡುತ್ತದೆ. ಆಯುರ್ವೇದ ವೈದ್ಯೆ ಪತ್ನಿ ಜ್ಯೋತಿಯವರ ಪ್ರಯತ್ನ ಮತ್ತು ಮನೆಯ ಛಾವಣಿಯ ಉದ್ಯಾನದ ಪ್ರೇರಕ ಶಕ್ತಿ ಎಂದು ಯಶೋಧನ್ ಹೆಬ್ಲೇಕರ್ ಹೇಳುತ್ತಾರೆ. ಇದು ಗೋವಾದ ಏಕೈಕ ಅಪರೂಪದ ಚಿಟ್ಟೆ ಸಂರಕ್ಷಣಾಲಯ. ಚಿಟ್ಟೆಗಳ ಪ್ರಪಂಚ ಒಂದು ವಿಸ್ಮಯ ಲೋಕ. ಇಂತಹ ಪ್ರಯತ್ನಗಳಿಂದ ಅಪರೂಪದ ಚಿಟ್ಟೆಗಳನ್ನು ರಕ್ಷಿಸಲು ಸಾಧ್ಯ.

## ಪುಸ್ತಕ ಲೋಕ

### ಮಾಂಡೂಕ್ಯ ರಹಸ್ಯ ವಿವೃತಿಃ

ಗೌಡಪಾದಾಚಾರ್ಯರ ಮಾಂಡೂಕ್ಯ ವಿವೃತಿ ಆದಿಶಂಕರರಿಗಿಂತ ಮೊದಲು ಬಂದ ಅದ್ವೈತ ಪ್ರಕರಣ ಗ್ರಂಥವಾಗಿದೆ. ಇದನ್ನು ಸರಳ ಸಂಸ್ಕೃತದಲ್ಲಿ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ವಿವರಿಸಿದ್ದಾರೆ. ಈ ವಿವೃತಿಯಲ್ಲಿ ನಾಲ್ಕು ಪ್ರಕರಣಗಳಿಗೆ ಆಗಮ ಪ್ರಕರಣ, ಅದ್ವೈತ ಪ್ರಕರಣ, ವೈತಥ್ಯ ಪ್ರಕರಣ, ಅಲಾತ ಶಾಂತಿ ಪ್ರಕರಣ ಎಂಬ ಹೆಸರುಗಳಿವೆ.



ಈ ಗ್ರಂಥವನ್ನು ಶ್ರೀ ಎಂ.ಎಸ್. ಕೃಷ್ಣಮೂರ್ತಿಯವರು ಕನ್ನಡದಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಪ್ರಸ್ತುತ ಆಗಮ ಪ್ರಕರಣ ಮತ್ತು ಅದ್ವೈತ ಪ್ರಕರಣಗಳು ನಮ್ಮ ಮುಂದಿವೆ. ಆಗಮ ಪ್ರಕರಣದಲ್ಲಿ ಮಾಂಡೂಕ್ಯ ಉಪನಿಷತ್ತಿನ 12 ಮಂತ್ರಗಳು, 28 ಕಾರಿಕೆಗಳು ಇದ್ದು ಉಪನಿಷತ್ತಿನ ಉಪದೇಶ ಕ್ರಮವನ್ನು ವಿವರಿಸಿದೆ. ಇಲ್ಲಿ ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ವಿಭುವಿನ 3 ರೂಪಗಳು ವಿವರಿಸಲ್ಪಟ್ಟಿವೆ. ವಿಶ್ವನು ಸ್ಥೂಲವಾದ ಭೋಗವನ್ನು ಕರುಣಿಸುತ್ತಾನೆ. ತೈಜಸನು ಇನ್ನೊಂದು ಮಟ್ಟದ ಭೋಗವನ್ನು, ಪ್ರಾಜ್ಞನು ಆನಂದಭೋಗವನ್ನು ಕರುಣಿಸುತ್ತಾನೆ.

ಮಾಂಡೂಕ್ಯೋಪನಿಷತ್ತಿನಲ್ಲಿ ತಿಳಿಸಿರುವ ಓಂಕಾರ ನಿರ್ಣಯವು ಆತ್ಮತತ್ವವನ್ನು ಅರಿಯುವ ಸಾಧನವೆಂದು ವಿವರಿಸಲಾಗಿದೆ. ಆಗಮ ಪ್ರಕರಣದ ಕಾರಿಕೆಗಳಲ್ಲಿ ಓಂಕಾರದ ಅ, ಉ, ಮ ಎಂಬ ಮೂರು ಮಾತ್ರಗಳು ಮತ್ತು ಅದರ ಅಭಿಮಾನಿ ರೂಪಗಳು ನಿರೂಪಿಸಲ್ಪಟ್ಟಿವೆ. ಪ್ರಣವವೇ ಎಲ್ಲಕ್ಕೂ ಮೊದಲು, ನಡುವೆ ಮತ್ತು ಕೊನೆ ಎಂಬುದನ್ನು ಹೇಳಿ ಇದೇ ಎಲ್ಲರ ಹರದಯದಲ್ಲಿ ನೆಲೆಸಿರುವ ಈಶ್ವರ ಎಂದು ತಿಳಿಸಲಾಗಿದೆ.

ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ಗೌಡಪಾದರ ಕಾರಿಕೆಗಳಿಗೆ ಸಂಸ್ಕೃತದಲ್ಲಿ ರಚಿಸಿದ ವಿವೃತಿಯನ್ನು ತಮ್ಮ ಪರಿಶ್ರಮ ಮತ್ತು ಅಧ್ಯಯನದಿಂದ ಶ್ರೀ ಎಂ.ಎಸ್. ಕೃಷ್ಣಮೂರ್ತಿಯವರು ತಿಳಿಗನ್ನಡದಲ್ಲಿ ವಿವರಿಸುವ ಉತ್ತಮ ಪ್ರಯತ್ನ ಮಾಡಿದ್ದಾರೆ. ಮತ್ತು ಇದನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಇದು ನಿಜಕ್ಕೂ ಪರಿಶ್ರಮದ ಕಾರ್ಯ.

● ಪ್ರೊ. ಟಿ.ಎಸ್. ಪದ್ಮನಾಭರಾವ್

**ಮಾಂಡೂಕ್ಯ ರಹಸ್ಯ ವಿವೃತಿಃ**
ಆಗಮ ಪ್ರಕರಣ ಅದ್ವೈತ ಪ್ರಕರಣ, ಲೇಖಕರು: ಎಂ.ಎಸ್. ಕೃಷ್ಣಮೂರ್ತಿ, ಮೊ. 98862 88981

# ಸಾಂಪ್ರದಾಯಿಕ ಕೈ ರಾಟೆ

● ಹೊಸ್ಮನೆ ಮುತ್ತು

ಕೈಯಿಂದ ನೂಲು ತೆಗೆಯುವ ಒಂದು ಸರಳವಾದ ಚರಕ ಹಿಂದೆ ಬಳಕೆಯಲ್ಲಿತ್ತು. ಸರಳವಾದ ರಚನೆಯನ್ನು ಹೊಂದಿರುವ ಈ ಸಾಧನ ಸ್ವಾವಲಂಬನೆಗೆ ದಾರಿಯಾಗಿತ್ತು. ಸ್ವದೇಶಿ ಸಾಧನವಾದ ಈ ಕೈರಾಟೆಯಿಂದ ತೆಗೆದ ನೂಲು ಪವಿತ್ರವಾದುದೆಂಬ ನಂಬಿಕೆ ಇತ್ತು. ಹಿಂದಿನ ಕಾಲದಲ್ಲಿ ಮನೆಯಲ್ಲಿಯೇ ಬಟ್ಟೆ ನೇಯುವುದು ಸಾಮಾನ್ಯವಾಗಿತ್ತು. ಆಗ ಹತ್ತಿ, ಉಣ್ಣೆ ಅಥವಾ ಇತರ ನಾರುಗಳನ್ನು ಈ ಚರಕದ ಸಹಾಯದಿಂದ ನೂಲಾಗಿ ಮಾಡುತ್ತಿದ್ದರು. ಒಂದು ಕೈಯಿಂದ ಚಕ್ರವನ್ನು ತಿರುಗಿಸುತ್ತಾ, ಇನ್ನೊಂದು ಕೈಯಿಂದ ಹತ್ತಿಯನ್ನು ಸರಿಯಾದ ಪ್ರಮಾಣದಲ್ಲಿ ಕಳುಹಿಸುತ್ತಾ, ಕಿರು ಗಾಲಿಗೆ ಸುತ್ತಿಕೊಳ್ಳುವ ನೂಲಿನ ಮೇಲೆ ಗಮನವಿಟ್ಟು, ಹತ್ತಿಯನ್ನು ತೆಳುವಾದ ನೂಲನ್ನಾಗಿ ಮಾಡುವ ಪ್ರಕ್ರಿಯೆ. ಇದಕ್ಕೆ ತಾಳ್ಮೆ ಬೇಕು. ಕೈ ಮಗ್ಗ, ಹಾಗೂ ಖಾದಿ ಸಂಸ್ಕೃತಿಗೆ ಬೇರು ಈ ಚರಕ. ಇಂದು ಬೃಹತ್ ಯಂತ್ರಗಳೇ ಎಲ್ಲ ಕೆಲಸ ಮಾಡುತ್ತಿರುವಾಗ ಕೈ ರಾಟೆ ನೇಪಥ್ಯಕ್ಕೆ ಸರಿದು, ನೆನಪಿನ ಭಾಗವಾಗಿಯಷ್ಟೇ ಉಳಿದಿದೆ.

# ವಿಟಮಿನ್ ಆಗರ

ನಮ್ಮ ದೇಹಕ್ಕೆ ವಿಟಮಿನ್ ಸಿ ಬಹು ಮುಖ್ಯ. ಇದು ಆ್ಯಂಟಿ ಆಕ್ಸಿಡೆಂಟ್; ಅಂದರೆ, ನಮ್ಮ ದೇಹದ ಕೋಶಗಳನ್ನು ಫ್ರೀ ರ‍್ಯಾಡಿಕಲ್ಸ್‌ನ ಪ್ರಭಾವದಿಂದ ರಕ್ಷಿಸುತ್ತವೆ.

ಜತೆಗೆ, ಸಿ ವಿಟಮಿನ್ ವಿಟಮಿನ್ ಸಿ ಸೇವನೆಯಿಂದ, ಜೀರ್ಣಕ್ರಿಯೆ ಉತ್ತಮವಾಗುತ್ತದೆ, ಕ್ಯಾನ್ಸರ್ ಮತ್ತು ರಕ್ತನಾಳ ಸಂಬಂಧಿ ಕಾಯಿಲೆಗಳು ದೂರವಾಗುತ್ತವೆ; ದೇಹಕ್ಕೆ ಕಬ್ಬಿಣದ ಅಂಶವನ್ನು ಹೀರಿಕೊಳ್ಳಲು ವಿಟಮಿನ್ ಸಿ ಉಪಯುಕ್ತ; ಹಲ್ಲುಗಳ ಆರೋಗ್ಯಕ್ಕೆ ಉತ್ತಮ; ಸೊಗಸಾದ ನಿದ್ರೆ ಪಡೆಯಲು ವಿಟಮಿನ್ ಸಿ ಉತ್ತಮ. **ವಿಟಮಿನ್ ಸಿಯನ್ನು ಪಡೆಯಲು ಸುಲಭ ವಿಧಾನವಿದೆ:** ಅದೇ ಲಿಂಬೆ ಮತ್ತು ಇತರ ಸಿಟ್ರಸ್ ಹಣ್ಣುಗಳನ್ನು ಪ್ರತಿ ದಿನ ಸೇವಿಸಬೇಕು. ಲಿಂಬೆ ರಸವನ್ನು ಆಹಾರದಲ್ಲಿ ಪ್ರತಿದಿನ ಅಲ್ಪ ಪ್ರಮಾಣದಲ್ಲಿ ಬೆರೆಸಿ ಸೇವಿಸುವುದರಿಂದ, ವಿಟಮಿನ್ ಸಿ ನಮ್ಮ ದೇಹಕ್ಕೆ ದೊರಕುತ್ತದೆ.

# ದುಮ್ಮಾನ ಬಿಡು ಉಲ್ಲಾಸದಿಂದಿರು

**ಬೊಮ್ಮನೇ ಸಂಸ್ಕೃತಿಯ ಕಟ್ಟಿಕೊಂಡುತ್ಸಹಿಸೆ**
**ಸುಮ್ಮನರೆಚಣವಿರದೆ ಪ್ರಕೃತಿ ತೊಡಗುತಿರೆ**
**ಜನ್ಮ ಸಾಕೆನುವುದೆಂ ದುಮ್ಮಾನವಡುವುದೇಂ**
**ಚಿಮ್ಮುಲ್ಲಸವ ಧರೆಗೆ - ಮಂಕುತಿಮ್ಮ॥**

ಆ ಭಗವಂತನೇ ಸಂಸ್ಕೃತಿಯೆಂಬ ಸಂಸಾರವನ್ನು ಕಟ್ಟಿಕೊಂಡು, ಒಂದರೆಚಣ ಸುಮ್ಮನಿರದೆ ಈ ಪ್ರಕೃತಿಯಲ್ಲಿ ಹೊಸತನವನ್ನು ತರುತ್ತಾ, ಆ ಹೊಸತನದಲ್ಲಿಯೇ ಆ ಭಗವಂತನು ಸಂಭ್ರಮಿಸಿ, ಸುಖಿಸುವಾಗ ನೀನಾದರೋ ಈ ಬಾಳು ಹಾಳೆಂದು, ದುಗಡವನ್ನು ಹೊತ್ತುಕೊಂಡು, ದುಮ್ಮಾನದಿಂದಾದರೂ ಏಕೆ ಜೀವನ ಮಾಡುವೆ? ಈ ಜನ್ಮವಾದರೂ ಸಾಕು ಎಂಬುವ ನಿರಾಶೆಯಾದರೂ ಏತಕ್ಕಾಗಿ? ಬದುಕಿರುವ ತನಕವಾದರೂ ಉತ್ಸಾಹದಿಂದ ನಿಮ್ಮ ಜೀವನವನ್ನು ನಡೆಸುವಂತರಾಗಿ ಎಂದು ಹೇಳಿದ್ದಾರೆ.



ಶುಭೋದಯಕ್ಕೊಂದು ಕಗ್ಗ
ರವೀ ಚಿಕ್ಕನಾಯಕನಹಳ್ಳಿ

ನಮ್ಮದಾದರೋ ಒಂದು ಪುಟ್ಟ ಕುಟುಂಬ. ನಾವು ಆ ಕುಟುಂಬದೊಂದಿಗೆ ಅವಿರತ ಸುಖವನ್ನ ರಸುತ್ತಾ, ಜೀವನದ ಎಲ್ಲಾ ಮಜಲುಗಳನ್ನೂ ಕಾಣುತ್ತೇವೆ. ಆದರೆ ಆ ಭಗವಂತನಿಗೆ ಈ ಜಗತ್ತು ಎಂಬುದೇ ಅವನ ಸಂಸಾರ. ಈ ಜಗತ್ತನ್ನು ಸಾಕಿ ಸಲಹುವ ಜಗದೊಡೆಯನು ಅವನು. ಇಂಥಹ ಜವಾಬ್ದಾರಿಯನ್ನು ಹೊತ್ತಂತಹ ಭಗವಂತನು ಅವಿರತವಾಗಿ, ಒಂದರೆಚಣವೂ ಸುಮ್ಮನಿರದೆ ಈ ಸಂಸ್ಕೃತಿಯೊಂದಿಗೆ ಒಳಗೂಡಿ, ಜಗತ್ತು ಎಂಬ ಮನೆಯ ಈ ಅಧಿಪತಿಯಾಗಿ, ಆತನು ಪ್ರಕೃತಿಯೊಂದೊಡಗೂಡಿ, ಒಂದು ಕ್ಷಣವೂ ಸುಮ್ಮನೆ ಇರದೆ ಆತನು ಈ ಪ್ರಕೃತಿಯಲ್ಲಿ ಹೊಸತನವನ್ನ, ಹೊಸ ಚೇತನವನ್ನ, ಚೈತನ್ಯವನ್ನು ತುಂಬಿ ಈ ಜಗತ್ತಿನಲ್ಲಿಯ ಎಲ್ಲಾ ಚರಾಚರ ವಸ್ತುಗಳೂ ಸಹ ಸುಖದಿಂದ ಇರುವಂತೆ ನೋಡಿಕೊಳ್ಳುವ ಯಜಮಾನನೇ ಆಗಿ ಸಂಭ್ರಮದಿಂದ ಆತನೇ ಇರುವಾಗ ಇನ್ನು ನಾವಾದರೋ ಏಕಾಗಿ ಈ ಬಾಳನ್ನು ಹಳಿಯಬೇಕು? ಈ ಬಾಳಿನಲ್ಲಿ ಬರುವ ಏಳು ಬೀಳುಗಳಿಗೆ ನೊಂದು ಕೊಂಡು, 'ಈ ಜೀವನವೇ ಸಾಕಪ್ಪ, ಈ ಜೀವನ ಎಂಬುವ ಗೋಳಾದರೂ ಏಕಾಗಿ ಬೇಕು?' ಎಂಬ ನಿರುತ್ಸಾಹ ತಳೆಯದೆ, ಆ ಭಗವಂತನನ್ನೇ ನಾವುಗಳು ಎದೆಗುಂದದೆ, ಆತನನ್ನೇ ಮೇಲ್ಪಂಕ್ತಿಯಾಗಿಟ್ಟುಕೊಂಡು ಜೀವನ ಮಾಡುವುದೇ ಲೇಸಲ್ಲವೇ?

ಇಲ್ಲಿ ಉತ್ಸಾಹ ಇದ್ದರೆ ಮಾತ್ರವೇ ನಮಗೊಂದು ಸ್ಥಳ ಇರುತ್ತದೆ ಎಂಬ ಭಾವ ಇರುವುದೇ ಮುಖ್ಯವಾಗುತ್ತದೆ. 'ಉತ್ಸಾಹವೇ ಜೀವನ, ನಿರುತ್ಸಾಹವೇ ಮರಣ' ಎಂಬ ನುಡಿಯಂತೆ ಅದ್ಯಾವ ಏಳು - ಬೀಳು, ಟೀಕೆ ಟಿಪ್ಪಣಿಗಳು, ನೋವು - ನಲಿವುಗಳು ಬಂದರೂ ಸಹ ಮನದಲ್ಲಿ ಗಟ್ಟಿಯಾದ ಉತ್ಸಾಹದ ನಿಲವನ್ನು ನಾವು ಸದಾ ಪ್ರಕಟಿಸುತ್ತಾ ಹೋದರೆ ಈ ಬಾಳು ಎಂಬುದು ಬೆಳಕಾಗಿಯೇ ಇರುತ್ತದೆ. ಹುಟ್ಟಿದ ಮೇಲೆ ಇಲ್ಲಿ ಉತ್ಸಾಹಭರಿತವಾಗಿ ಜೀವನ ಮಾಡಲೇಬೇಕು ಎಂಬುದು ಈ ಪದ್ಯದ ಅರ್ಥವಾಗಿದೆ.

ನಾವು ಇಂದು ಬದುಕಿದ್ದೇವೆ ಎಂದರೆ ಬರುವ ನಾಳೆಗಳಿಗಾಗಿಯೇ ಅಲ್ಲವೇ? ಬರುವ ನಾಳೆಗಳು ನನಗಾಗಿಯೇ ಬರುತ್ತಿವೆ. ಆ ನಾಳೆಗಳಲ್ಲಿ ನಾನು ಅಸಾಧ್ಯವಾದುದನ್ನು ಸಾಧಿಸುತ್ತೇನೆ ಎಂಬ ಉತ್ಸಾಹ, ಛಲಗಳು ಇದ್ದಾಗ ಮಾತ್ರವೇ ಈ ಜೀವನಕ್ಕೊಂದು ಸಾರ್ಥಕತೆ ಸಿಗುತ್ತದೆ. ಇನ್ನು ನಾವೆಷ್ಟೋ ಜನರನ್ನು ನೋಡಿದ್ದೇವೆ. ಅವರಿಗೆ ಅದೇನೋ ಬೇಸರ, ಅವರದು ಅದೆಂತಹದೋ ಗೋಳು. ಅವರಿಗೆ ಆಗಬೇಕಾಗಿರುವುದೇನು ಎಂದು ಅವರಿಗೇ ಗೊತ್ತಿರುವುದಿಲ್ಲ. ಸದಾ ಕಾಲ ಯಾವುದೋ ಅಪೇಕ್ಷೆ, ಯಾವುದೋ ಹಪಾಹಪಿತತೆ. ಅವರು ತಾವೂ ಸಂತೋಷವಾಗಿರುವುದಿಲ್ಲ, ಹಾಗೆಯೇ ಮತ್ತೊಬ್ಬರ ಸಂತೋಷ ಕಂಡರೂ ಸಹ ಅವರು ಸಂತೋಷಪಡುವುದಿರಲಿ, ಕರುಬುವಂಥಾ ಮನಸ್ಸು. ಅವರಿಗೆ ಉತ್ಸಾಹವೇ ಇರುವುದಿಲ್ಲ. ಇಂಥಹವರು ಪರರ ಸಂತೋಷವನ್ನೂ ಹಾಳುಮಾಡುತ್ತಾರೆ. ಇದೊಂದು ರೀತಿಯ ಮನೋರೋಗ. ಇದಕ್ಕೆ ಮದ್ದೇ ಇಲ್ಲ. ಇಂತಹವರನ್ನು ಕಂಡೇ 'ಚಿಮ್ಮುಲ್ಲಸವ ಧರೆಗೆ' ಎಂದು ಹೇಳುತ್ತಾ, ನಿನ್ನ ಬದುಕಿನಲ್ಲಿ ನೀನು ಯಾವುದೇ ಕೆಲಸ ಮಾಡುತ್ತಿರು, ಅದನ್ನು ಅತ್ಯುತ್ಸಾಹದಿಂದ ಮಾಡು ಎಂದಿದ್ದಾರೆ. ಹಾಗಾಗಿ ಉತ್ಸಾಹವನ್ನು ಕಳೆದುಕೊಂಡ ಈ ಮನುಷ್ಯನ ದೇಹ ಹಾಗೂ ಮನಸ್ಸುಗಳು ಶವವೇ ಆಗಿರುತ್ತವೆ ಎಂಬುದೇ ಈ ಪದ್ಯದ ಅರ್ಥವಾಗಿದೆ.

# ಕೃಷ್ಣನ ಪರಮ ಭಕ್ತೆ ಕೃಷ್ಣಾಬಾಯಿ

ಒಂದೂರಿನಲ್ಲಿ ಕೃಷ್ಣಾಬಾಯಿ ಎಂಬ ಹೆಸರಿನ ವೃದ್ದೆ ಒಂದು ಗುಡಿಸಿಲನಲ್ಲಿ ಇರುತ್ತಿದ್ದಳು. ಅವಳು ಶ್ರೀ ಕೃಷ್ಣ ಪರಮಾತ್ಮನ ಪರಮ ಭಕ್ತಳಾಗಿದ್ದಳು. ವಾಸ್ತವದಲ್ಲಿ ಅವಳ ಹೆಸರು ಸುಖಿ ಬಾಯಿ ಎಂದಾಗಿತ್ತು. ಆದರೆ ಕೃಷ್ಣನ ಪರಮ ಭಕ್ತಳಾಗಿದ್ದರಿಂದ ಊರವರೆಲ್ಲ ಕೃಷ್ಣಾಬಾಯಿ ಎನ್ನುತ್ತಿದ್ದರು. ಆ ಊರಿನ ಮನೆಮನೆಯ ಅಡುಗೆ ಕೆಲಸ, ಕಸ ಮುಸುರೆ ಅವಳ ಕಾಯಕವಾಗಿತ್ತು. ಅವಳು ನಿತ್ಯವೂ ಹೂವಿನ ಹಾರ ಮಾಡಿ ಎರಡು ಹೊತ್ತು ಕೃಷ್ಣನಿಗೆ ತೊಡಿಸುತ್ತಿದ್ದಳು. ತಾನು ಬಿಡುವಾಗಿದ್ದಾಗ ಗಂಟೆಗಟ್ಟಲೆ ಕೃಷ್ಣನೊಂದಿಗೆ ಮಾತನಾಡುತ್ತಿದ್ದಳು. ಇದನ್ನು ನೋಡಿ ಊರ ಜನರು ಅವಳಿಗೆ ಮರುಳು ಎಂದು ತಿಳಿದಿದ್ದರು. ಒಂದು ರಾತ್ರಿ ಶ್ರೀ ಕೃಷ್ಣನು ಅವಳ ಕನಸಲ್ಲಿ ಬಂದು 'ನಾಳೆ ಈ ಊರಲ್ಲಿ ಭೂಕಂಪವಾಗುತ್ತದೆ. ನೀನು ಈ ಊರು ಬಿಟ್ಟು ಬೇರೆ ಊರಿಗೆ ಹೋಗು' ಎಂದು ಹೇಳಿದ. ಇನ್ನೇನು ಲೋಕ ರಕ್ಷಕನೇ ಈ ಮಾತು ಹೇಳಿದ ಮೇಲೆ ಕೃಷ್ಣಾಬಾಯಿ ಹೊರಡುವ ಸಿದ್ಧತೆ ನಡೆಸಿ ತನ್ನ ಎಲ್ಲ ಸಾಮಗ್ರಿಗಳನ್ನು ಕಟ್ಟಿಕೊಳ್ಳ ತೊಡಗಿದಳು. ಆಮೇಲೆ ಊರವರಿಗೂ ಕೂಡ ಈ ವಿಷಯ ತಿಳಿಸಿದಳು. ಆದರೆ ಊರಿನ ಜನ ಆ ಮುದುಕಿಯ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಮೊದಲೇ ಅವಳು ಕೃಷ್ಣನೊಂದಿಗೆ ಮಾತನಾಡುವುದು ಕಂಡು ಅವಳಿಗೆ ಅರಳೋ ಮರಳೋ ಎನ್ನುತ್ತಿದ್ದ ಜನ ಅವಳ ಮಾತು ಕೇಳಿ ಅಪಹಾಸ್ಯ ಮಾಡಿ ನಕ್ಕರು. ನಗುವವರು ನಗಲಿ, ಉಳಿದುಕೊಳ್ಳುವವರು ಉಳಿಯಲಿ. ಇದು ನನ್ನ ಕೃಷ್ಣನ ಆದೇಶ, ನಾನಂತೂ ಅದನ್ನು ಪಾಲಿಸುವೆ ಎಂದುಕೊಂಡು ಒಂದು ಎತ್ತಿನ ಗಾಡಿ ತರಿಸಿ, ಅದರಲ್ಲಿ ಮನೆಯಲ್ಲಿಯ ಎಲ್ಲಾ ಸಾಮಗ್ರಿಗಳನ್ನು ಹಾಕಿಸಿ, ತನ್ನ ಕೃಷ್ಣನ ಮೂರ್ತಿ ಕೈಯಲ್ಲಿ ಹಿಡಿದು ಮುದುಕಿ ನಡೆದೇಬಿಟ್ಟಳು. ಅವಳನ್ನು ನೋಡಿ ಎಂಥ ಮೂರ್ಖತನ ಎಂದು ಜನ ನಗತೊಡಗಿದರು.

ಒಂದೊಳ್ಳೆ ಮಾತು
ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಇನ್ನು ತನ್ನ ಊರಿನ ಸೀಮೆ ದಾಟಿ ಬೇರೆ ಊರಿನ ಸೀಮೆ ಪ್ರವೇಶಿಸುವವಳಿದ್ದಳು ಅಷ್ಟರಲ್ಲಿ ಹಿಂದಿನಿಂದ ಶ್ರೀ ಕೃಷ್ಣನ ಧ್ವನಿ ಬಂತು 'ಅರೆ ಹುಚ್ಚಿ ಹಿಂತಿರುಗಿ ಹೋಗು. ನಿನ್ನ ಗುಡಿಸಲಲ್ಲಿ ಮರೆತು ಬಂದ ಆ ಸೂಜಿಯನ್ನು ತೆಗೆದುಕೊಂಡು ಬಾ. ಅದರಿಂದಲೇ ನೀನು ನನಗೆ ಹೂವಿನ ಮಾಲೆ ಮಾಡಿ ಹಾಕುತ್ತಿದ್ದೆ!'

ಈ ಮಾತನ್ನು ಕೇಳಿ ಕೃಷ್ಣಬಾಯಿ ಬೇಸರಗೊಂಡಳು. ನನ್ನಿಂದ ಇಷ್ಟು ದೊಡ್ಡ ತಪ್ಪು ಹೇಗಾಯಿತು. ಇನ್ನು ನಾನು ನನ್ನ ಕೃಷ್ಣನಿಗೆ ಮಾಲೆಯಾದರೂ ಹೇಗೆ ಮಾಡಿ ಹಾಕ ಬಲ್ಲೆ..!? ಅವಳು ಕೂಡಲೇ ಎತ್ತಿನಗಾಡಿಯವನನ್ನು ತಡೆದು ನಿಲ್ಲಿಸಿ 'ನಾನು ಮರಳಿ ಬರುವವರೆಗೂ ಇಲ್ಲೇ ಇರು..!' ಎಂದು ಕಾಯಲು ಹೇಳಿ ತನ್ನ ಗುಡಿಸಿಲಿನತ್ತ ಅವಸರ ಅವಸರವಾಗಿ ಹೊರಟು ಬಂದಳು. ಊರವರೆಲ್ಲ ಅವಳ ಹುಚ್ಚುತನಕ್ಕೆ ಅಪಹಾಸ್ಯ ಮಾಡಿ ನಗುವುದೇ ಆಯಿತು. ಕೃಷ್ಣಾಬಾಯಿ ತನ್ನ ಗುಡಿಸಲಲ್ಲಿ ಕಸದಲ್ಲಿ ಸಿಲುಕಿಕೊಂಡ ಸೂಜಿಯನ್ನು ಹುಡುಕಿ ತೆಗೆದುಕೊಂಡು ಹುಚ್ಚಿಯಂತೆ ಎತ್ತಿನಗಾಡಿಯ ಬಳಿ ಓಡಿದಳು. ಗಾಡಿಯವ ಕೇಳಿದ 'ಅಜ್ಜಿ, ನೀನ್ಯಾಕೆ ಇಷ್ಟು ಚಿಂತೆಯಲ್ಲಿ ಇದ್ದಿ..?' ಕೃಷ್ಣಾಬಾಯಿ ಅವನ ಜೊತೆ ಹೆಚ್ಚು ಮಾತು ಬೆಳೆಸದೆ 'ಸರಿ ಈಗ ನೀನು ಮೊದಲು ಈ ಊರಿನ ಸೀಮೆ ದಾಟು..!' ಎಂದು ಹೇಳಿ ಅವಸರ ಮಾಡಿದಳು. ಅವನು ಕೂಡ ಅಷ್ಟೇ ಅವಸರದಿಂದ ಎತ್ತಿನಗಾಡಿ ಓಡಿಸಿದ. ಆದರೇನು... ಅವರು ಆ ಊರಿನ ಸೀಮೆ ದಾಟಿ ಮುಂದೆ ಬರುವುದೇ ತಡ, ಆ ಊರು ಭೂಕಂಪದಿಂದ ಅಲ್ಲೋಲಕಲ್ಲೋಲವಾಯಿತು. ಎಲ್ಲಿಂದಲೋ ಪ್ರವಾಹದಂತೆ ಬಂದ ನೀರು ಆ ಊರನ್ನೇ ನುಂಗಿ ಹಾಕಿತು. ಎತ್ತಿನ ಗಾಡಿಯವನೂ ಕೂಡ ಕೃಷ್ಣ ಭಕ್ತನಾಗಿದ್ದ. ಹೀಗಾಗಿ ಯೋಗಾ ಯೋಗದಂತೆ ಭಗವಂತನು ಅವನ ರಕ್ಷಣೆಯನ್ನೂ ಮಾಡಿದ್ದ.

ಭಗವಂತನನ್ನು ನಂಬಿದರೆ ಅವನು ನಮ್ಮ ಬದುಕಿನ ಸಣ್ಣ ಸಣ್ಣ ವಿಷಯಗಳನ್ನೂ ಕೂಡ ಸರಿಪಡಿಸಿ ಜೀವನ ಸುಂದರವಾಗಿಸುತ್ತಾನೆ. ಅವನಿಗೆ ನೂರು ಪ್ರಾರ್ಥನೆಗಳ ಅಗತ್ಯವಿಲ್ಲ . ನಮ್ಮ ಸಮರ್ಪಣೆಯೊಂದೇ ಸಾಕು.

## ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



### ಎಡದಿಂದ ಬಲಕ್ಕೆ

1. ಯಾವುದೇ ಬೆರಕೆಯಿಲ್ಲದ್ದು (3)
3. ಮಡಿಕೆ ಮಡಿಕೆಯಾಗಿರುವುದು(3)
5. ಜೀವಕ್ಕೆ ಬಂದಿದೆ ತೊಂದರೆ (4)
7. ಆಗಸದಲ್ಲಿನ ಸೂರ್ಯನಿಗೆ ಮತ್ತೊಂದು ಹೆಸರು (5)
10. ಲೆಕ್ಕ ಮಾಡುವ ಯಂತ್ರ (3)
13. ಮಸುಕಾದ ಹೂವು (3)
15. ನೇರವಾಗಿಲ್ಲದ ಹಾದಿ (5)
18. ಆಗಸದಿಂದ ಮಳೆಸುರಿಯುವ ಕಾಲ (4)
19. ರಕ್ತವನ್ನು ಹೀರುವ ಕೀಟ ಅಸ್ತವ್ಯಸ್ತವಾಗಿದೆ (3)
20. ಅತಿಯಲ್ಲ, ಸ್ವಲ್ಪವೇ ದೂರ (3)

### ಮೇಲಿಂದ ಕೆಳಕ್ಕೆ

1. ರಾಗವಾಗಿ ಹಾಡಿ ತೋರಿದ ಪ್ರೀತಿ (4)
2. ದೊಡ್ಡದಾದ ಹೊಡೆದಾಟ (4)
3. ಊರಿಂದ ಊರಿಗೆ ಸಂಚರಿಸುವವನು (4)
4. ಗ್ರಾಮದ ಶಾನುಭೋಗರಿಗೆ ಇನ್ನೊಂದು ಹೆಸರು (4)
6. ಮಾತನಾಡದೇ ನಿಶ್ಯಬ್ದವಾಗಿರುವಿಕೆ (2)
8. ಸಂಪಾದಿಸು (3)
9. ದಾನವ ಶಿಲ್ಪಿಯ ಹೆಸರು (2)
11. ಭಯಂಕರವಾದದ್ದು ತಿರುಗಿ ಬಂದಿದೆ (3)
12. ಮೀನು ಹಿಡಿಯುವ ಕೊಕ್ಕೆ (2)
13. ವಿಶ್ವವಿದ್ಯಾಲಯದ ಮುಖ್ಯಸ್ಥರು (4)
14. ಪರಿಣಯಕ್ಕೆ ಸಿದ್ಧವಾಗಿರುವ ಗಂಡು (4)
15. ಮಳೆಯೇ ಇಲ್ಲದೆ ಕ್ಷಾಮದ ಪರಿಸ್ಥಿತಿ (4)
16. ಮಗ (2)
17. ವಸ್ತುವಿನ ಮೇಲಿನ ಸೋಡಿ (4)

### ಸರಿಯುತ್ತರಗಳು

## ಸಮಾಚಾರ ಸಣ್ಣದಲ್ಲಿ

### ಡಿಸೆಂಬರ್‌ನಲ್ಲಿ ಮೆಸ್ಸಿ ಭಾರತ ಪ್ರವಾಸ

**ಕೋಲ್ಕತ್ತ:** ಅರ್ಜೆಂಟೀನಾದ ಖ್ಯಾತ ಫುಟ್ಬಾಲ್ ತಾರೆ ಲಿಯೋನೆಲ್ ಮೆಸ್ಸಿ ಈ ವರ್ಷ ಡಿಸೆಂಬರ್‌ನಲ್ಲಿ ಖಾಸಗಿ ಕಾರ್ಯಕ್ರಮ ನಿಮಿತ್ತ ಭಾರತಕ್ಕೆ ಆಗಮಿಸಲಿದ್ದಾರೆ. ಮೂರು ದಿನಗಳ ಭಾರತ ಪ್ರವಾಸದಲ್ಲಿ ಅವರು ದಿಗ್ಗಜ ಕ್ರಿಕೆಟಿಗರಾದ ಸಚಿನ್ ತೆಂಡುಲ್ಕರ್, ವಿರಾಟ್ ಕೊಹ್ಲಿ, ಎಂ.ಎಸ್.ಧೋನಿ, ರೋಹಿತ್ ಶರ್ಮಾ ಸೇರಿ ಪ್ರಮುಖರ ಜತೆ ಕ್ರಿಕೆಟ್ ಆಡುವ ನಿರೀಕ್ಷೆಯಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ವೇಳಾಪಟ್ಟಿಯ ಅನುಸಾರ ಮೆಸ್ಸಿ ಡಿಸೆಂಬರ್ 12ರಂದು ಕೋಲ್ಕತ್ತಕ್ಕೆ ಬಂದಿಳಿಯಲಿದ್ದಾರೆ. ಕೋಲ್ಕತ್ತದ ವಿಐಪಿ ರಸ್ತೆಯ ಲೇಕ್‌ಟೌನ್‌ನ ಶ್ರೀಭೂಮಿಯಲ್ಲಿ ತನ್ನ 70 ಅಡಿ ಎತ್ತರದ ಪ್ರತಿಮೆಯನ್ನು ಮೆಸ್ಸಿ ಅವರೇ ಡಿ. 13ರಂದು ಬೆಳಗ್ಗೆ ಅನಾವರಣಗೊಳಿಸಲಿದ್ದಾರೆ. ಬಳಿಕ ಮಧ್ಯಾಹ್ನ 12ರಿಂದ ಈಡನ್‌ಗಾರ್ಡನ್‌ನಲ್ಲಿ ತಲಾ ಏಳು ಮಂದಿ ಇರುವ ತಂಡಗಳ ನಡುವೆ ಆಡಲಾಗುವ 'ಗೋಟ್ ಕಪ್' ಪ್ರದರ್ಶನ ಪಂದ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ. 13ರಂದು ಅಹಮದಾಬಾದಿಗೆ ತೆರಳಲಿದ್ದು ಶಾಂತಿಗ್ರಾಮದಲ್ಲಿ ಅದಾನಿ ಪ್ರತಿಷ್ಠಾನದ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. 14ರಂದು ಅವರು ಮುಂಬೈನಲ್ಲಿ ಗೋಟ್ ಕನ್ಸರ್ಟ್ ಮತ್ತು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಗೋಟ್ ಕಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. 15ರಂದು ಪ್ರಧಾನಿ ಮೋದಿ ಅವರೊಂದಿಗಿನ ಭೇಟಿಯ ನಂತರ ಫಿರೋಜ್ ಶಾ ಕೋಟ್ಲಾದಲ್ಲಿ ಪ್ರದರ್ಶನ ಪಂದ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಗೆಲುವಿನತ್ತ ಇಂಗ್ಲೆಂಡ್

## 5ನೇ ಟೆಸ್ಟ್: ಜೋ ರೂಟ್, ಹ್ಯಾರಿ ಬ್ರೂಕ್ ಶತಕ | ಭಾರತದ ಬೌಲರ್‌ಗಳ ವೈಫಲ್ಯ

**ಲಂಡನ್:** ಇಲ್ಲಿನ ಕೆನ್ನಿಂಗ್‌ಟನ್ ಓವಲ್‌ನಲ್ಲಿ ನಡೆದ ಭಾರತ-ಇಂಗ್ಲೆಂಡ್ ನಡುವಿನ 5ನೇ ಮತ್ತು ಅಂತಿಮ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಜಯದತ್ತ ಸಾಗಿದ್ದು, ಟೆಸ್ಟ್ ಸರಣಿಯನ್ನು 3-1 ಅಂತರದಿಂದ ವಶಪಡಿಸಿಕೊಳ್ಳುವ ಹಾದಿಯಲ್ಲಿದೆ.

ಗೆಲ್ಲಲು 374 ರನ್ ಗುರಿ ಪಡೆದ ಇಂಗ್ಲೆಂಡ್, ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಹ್ಯಾರಿ ಬ್ರೂಕ್ (111) ಮತ್ತು ಜೋ ರೂಟ್ ಬಾರಿಸಿದ ಶತಕ (105) ಹಾಗೂ ಆರಂಭಿಕ ಆಟಗಾರ ಬೆನ್ ಡಕೆಟ್ ಗಳಿಸಿದ ಅರ್ಧ ಶತಕದ (54) ನೆರವಿನಿಂದ ಟೆಸ್ಟ್‌ನ ನಾಲ್ಕನೇ ದಿನವಾದ ಭಾನುವಾರ ತನ್ನ ಪಾರಮ್ಯ ಮೆರೆಯಿತು.

ಇಂಗ್ಲೆಂಡ್ 6 ವಿಕೆಟ್‌ಗೆ 339 ರನ್ ಗಳಿಸಿದ್ದು, ಗೆಲುವಿಗಾಗಿ ಇಂಗ್ಲೆಂಡ್‌ಗೆ ಇನ್ನೂ 35 ರನ್‌ಗಳ ಅಗತ್ಯವಿದೆ.

ಜೇಮಿ ಸ್ಮಿತ್ 2 ರನ್ ಗಳಿಸಿ ಮತ್ತು ಓವರ್ಟನ್ ಯಾವುದೇ ರನ್ ಪಡೆಯದೆ ಕ್ರೀಸ್‌ನಲ್ಲಿ ಇದ್ದಾರೆ.

ಹೆಡ್ಡಿಂಗ್ಲಿಯಲ್ಲಿ ನಡೆದ ಮೊದಲ ಟೆಸ್ಟ್ ಅನ್ನು ಇಂಗ್ಲೆಂಡ್ 5 ವಿಕೆಟ್‌ಗಳಿಂದ ಗೆದ್ದಿತ್ತು. ಆ ಬಳಿಕ ಎಡ್ಜ್ ಬಸ್ಟನ್‌ನಲ್ಲಿ ನಡೆದ 2ನೇ ಟೆಸ್ಟ್ ಅನ್ನು ಭಾರತ 336 ರನ್‌ಗಳಿಂದ ಗೆದ್ದಿತ್ತು. ಲಾರ್ಡ್ಸ್‌ನಲ್ಲಿ ನಡೆದ 3ನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್ 22 ರನ್‌ಗಳಿಂದ ಗೆದ್ದರೆ, ಮ್ಯಾಂಚೆಸ್ಟರ್‌ನಲ್ಲಿ ನಡೆದ 4ನೇ ಟೆಸ್ಟ್ ಡ್ರಾದಲ್ಲಿ ಅಂತ್ಯಗೊಂಡಿತ್ತು.

1 ವಿಕೆಟ್‌ಗೆ 50 ರನ್‌ನಿಂದ ಭಾನುವಾರ ಆಟ ಮುಂದುವರಿಸಿದ ಇಂಗ್ಲೆಂಡ್ 82 ರನ್ ಆದಾಗ 54 ರನ್ ಗಳಿಸಿದ್ದ ಬೆನ್ ಡಕೆಟ್, ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಆ ಬಳಿಕ ಓಲಿ ಪೋಪ್ ಮತ್ತು ಜೋ ರೂಟ್ ಮಧ್ಯೆ ಜತೆಯಾಟ ಸಾಗಿತು. 34 ಬಾಲ್‌ಗಳನ್ನು ಎದುರಿಸಿ 27 ರನ್ ಗಳಿಸಿದ್ದ ಓಲಿ ಪೋಪ್, ಮೊಹಮ್ಮದ್ ಸಿರಾಜ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಸಿಲುಕಿ ಔಟ್ ಆದರು.

### ಅಪರೂಪದ ದಾಖಲೆ

**1978-79ರಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ಒಟ್ಟು 11 ಶತಕ ಸಿಡಿಸಿ ದಾಖಲೆ ನಿರ್ಮಿಸಿದ್ದರು. ಇದೀಗ 5 ಪಂದ್ಯಗಳ ಮೂಲಕ ಭಾರತದ ಯಂಗ್ ಬ್ಯಾಟರ್‌ಗಳು ಒಟ್ಟು 12 ಶತಕ ಸಿಡಿಸಿದ್ದಾರೆ, ಆ ಮೂಲಕ 46 ವರ್ಷಗಳ ದಾಖಲೆಯನ್ನು ಮುರಿದಿದ್ದಾರೆ. ಅಲ್ಲದೆ 93 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸರಣಿಯೊಂದರಲ್ಲಿ 12 ಶತಕಗಳ ಸಾಧನೆ ಮಾಡಿದ್ದಾರೆ. ರವೀಂದ್ರ ಜಡೇಜಾ , ಕೆಎಲ್ ರಾಹುಲ್ ಮತ್ತು ಶುಭಮನ್ ಗಿಲ್ ಕೂಡ 36 ವರ್ಷಗಳ ಹಳೆಯ ದಾಖಲೆಯೊಂದನ್ನು ಸರಿಗಟ್ಟಿದ್ದಾರೆ. ಟೆಸ್ಟ್ ಸರಣಿಯೊಂದರಲ್ಲಿ ವೈಯಕ್ತಿಕವಾಗಿ 500+ ರನ್ ಗಳಿಸಿದ ಐದನೇ ತ್ರಿವಳಿ ಜೋಡಿ ಎನಿಸಿಕೊಂಡಿತು. 1947ರಲ್ಲಿ ಇಂಗ್ಲೆಂಡ್ ಪ್ರವಾಸದಲ್ಲಿ ದಕ್ಷಿಣ ಆಫ್ರಿಕಾ ಪರ ಅದ್ಭುತ ಪ್ರದರ್ಶನ ನೀಡಿದ್ದ ಅಲನ್ ಮೆಲ್ವಿಲ್ಲೆ, ಬ್ರೂಸ್ ಮಿಚೆಲ್ ಮತ್ತು ಡಡ್ಲಿ ನೂರ್ಸ್ ಈ ಸಾಧನೆ ಮಾಡಿದ ಮೊದಲ ತ್ರಿವಳಿ ಎನಿಸಿಕೊಂಡಿದ್ದಾರೆ.**

ನಂತರ ಹ್ಯಾರಿ ಬ್ರೂಕ್ ಮತ್ತು ಜೋ ರೂಟ್ ಮಧ್ಯೆ ಬಹಳ ಹೊತ್ತು ಜತೆಯಾಟ ಸಾಗಿತು. ಅವರಿಬ್ಬರೂ 4ನೇ ವಿಕೆಟ್‌ಗೆ 195 ರನ್‌ಗಳ ಜತೆಯಾಟವಾಡಿ ಭಾರತದ ಬೌಲರ್‌ಗಳನ್ನು ಹಿಗ್ಗಾ ಮುಗ್ಗ ದಂಡಿಸಿದರು. ಬ್ರೂಕ್ 98 ಬಾಲ್‌ಗಳಲ್ಲಿ 111 ರನ್ ಗಳಿಸಿ ಔಟ್ ಆದರು.

### ಎಬಿಡಿ. ವಿಲಿಯರ್ಸ್ ಸ್ಫೋಟಕ ಶತಕ

# ದಕ್ಷಿಣ ಆಫ್ರಿಕಾಕ್ಕೆ 'ಲೆಜೆಂಡ್ಸ್' ಕಪ್

**ಎಡ್ಜ್‌ಬಾಸ್ಟನ್:** ಎ.ಬಿ ಡಿ ವಿಲಿಯರ್ಸ್ ಅವರ ಬ್ಯಾಟಿಂಗ್ ಅಬ್ಬರದ ನೆರವಿನಿಂದ ಇಲ್ಲಿ ಭಾನುವಾರ ನಡೆದ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಲೆಜೆಂಡ್ಸ್ ಕ್ರಿಕೆಟ್ ತಂಡವು, ಪಾಕಿಸ್ತಾನ ತಂಡವನ್ನು 9 ವಿಕೆಟ್‌ಗಳಿಂದ ಸೋಲಿಸಿ 'ಲೆಜೆಂಡ್ಸ್ ಕಪ್' ಚಾಂಪಿಯನ್ ಆಯಿತು.

**ಸಂಕ್ಷಿಪ್ತ ಸ್ಕೋರ್**
**ಪಾಕಿಸ್ತಾನ ಲೆಜೆಂಡ್ಸ್: 20 ಓವರ್‌ಗಳಲ್ಲಿ: 195/5,** ಶಾರ್ಜಿಲ್ ಖಾನ್ 76(44), ಉಮರ್ ಅಮೀನ್ 36(19), ಆಲಿಫ್ ಅಲಿ 28(15), ವಿಜೋಯಿನ್ 38ಕ್ಕೆ 2, ಪಾರ್ನೆಲ್ 32ಕ್ಕೆ 2.
**ದ. ಆಫ್ರಿಕಾ ಲೆಜೆಂಡ್ಸ್: 16.5 ಓವರ್ ಗಳಲ್ಲಿ 197,** ಎಬಿ ಡಿ. ವಿಲಿಯರ್ಸ್ ಅಜೇಯ 120(60), ಜೆ.ಪಿ ಡುಮಿನಿ ಅಜೇಯ 50(28) ಹಾಶಿಂ ಆಮ್ಲಾ 18(14).

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಪಾಕಿಸ್ತಾನ ತಂಡದ ಪರವಾಗಿ ಶಾರ್ಜಿಲ್ ಖಾನ್ 76(44 ಬಾಲ್), ಉಮರ್ ಅಮೀನ್ 36(19 ಬಾಲ್) ಹಾಗೂ ಆಲಿಫ್ ಅಲಿ 28(15 ಬಾಲ್) ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು, ಹಾಗಾಗಿ ಪಾಕ್ ತಂಡ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿತ್ತು.

ಗೆಲುವಿಗೆ ಕಠಿಣ ಗುರಿ ಪಡೆದ ದಕ್ಷಿಣ ಆಫ್ರಿಕಾ ಇನ್ನೂ 3.1 ಓವರ್ ಬಾಕಿ ಇರುವಂತೆಯೇ ಗುರಿ ತಲುಪಿತು. ಹಶೀಂ ಆಮ್ಲ 14 ಎಸೆತಗಳಲ್ಲಿ 18 ರನ್ ಗಳಿಸಿ ಸ್ಪಿನ್ನರ್ ಸಯೀದ್ ಅಜ್ಮಲ್‌ಗೆ ವಿಕೆಟ್ ಒಪ್ಪಿಸಿದರು. 3ನೇ ಕ್ರಮಾಂದಲ್ಲಿ ಕ್ರೀಸ್‌ಗೆ ಆಗಮಿಸಿದ ಜೆ.ಪಿ ಡುಮಿನಿ 28 ಎಸೆತಗಳಲ್ಲಿ 50 ರನ್ ಗಳಿಸಿ ತಂಡಕ್ಕೆ ಆಧಾರಸ್ತಂಭವಾದರು. ವಿಲಿಯರ್ಸ್ ಮತ್ತು ಡುಮಿನಿ 2ನೇ ವಿಕೆಟ್‌ಗೆ ಮುರಿಯದ 125 ರನ್ ಗಳ ಜತೆಯಾಟವಾಡಿದರು.

ಸ್ನಾಯು ಸೆಳೆತ ಸಮಸ್ಯೆಯ ಮಧ್ಯೆಯೂ 41ರ ಹರೆಯದ ಬ್ಯಾಟರ್ ಎಬಿ. ಡಿ ವಿಲಿಯರ್ಸ್, ಕೇವಲ 48 ಎಸೆತಗಳಲ್ಲಿ ಶತಕ ಪೂರೈಸಿ, ಒಟ್ಟು 60 ಬಾಲ್‌ಗಳಲ್ಲಿ ಅಜೇಯ 120 ರನ್ ಗಳಿಸುವ ಮೂಲಕ ಏಕಾಂಗಿಯಾಗಿ ತನ್ನ ದ. ಆಫ್ರಿಕಾ ತಂಡವನ್ನು ಗೆಲುವಿನ ದಡ ಸೇರಿಸಿದರು. ಹೀಗಾಗಿ ದ. ಆಫ್ರಿಕಾ ಇನ್ನೂ 19 ಎಸೆತಗಳು ಬಾಕಿ ಇರುವಂತೆಯೇ, ಪಂದ್ಯದಲ್ಲಿ 9 ವಿಕೆಟ್ ಅಂತರದಿಂದ ಜಯಿಸುವ ಮೂಲಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಟೂರ್ನಿಯಲ್ಲಿ ಒಟ್ಟು 3 ಶತಕಗಳನ್ನು ಬಾರಿಸುವುದರೊಂದಿಗೆ ಸರಣಿಯಲ್ಲಿ ಅತೀ ಹೆಚ್ಚು ರನ್ ಕಲೆ ಹಾಕಿದ ಡಿ. ವಿಲಿಯರ್ಸ್ ಅವರಿಗೆ ಪಂದ್ಯಶ್ರೇಷ್ಠ ಮತ್ತು ಸರಣಿ ಶ್ರೇಷ್ಠ ಪ್ರಶಸ್ತಿ ಲಭಿಸಿತು. ಲೀಗ್ ಹಂತದಲ್ಲಿ ಅವರು ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳ ವಿರುದ್ಧ ಶತಕ ಬಾರಿಸಿದ್ದರು. ತಂಡದ ನಾಯಕನಾಗಿರುವ ವಿಲಿಯರ್ಸ್ ಟೂರ್ನಿಯುದ್ದಕ್ಕೂ ಒತ್ತಡದ ಸಂದರ್ಭಗಳನ್ನು ಸಮರ್ಥವಾಗಿ ನಿಭಾಯಿಸಿದ್ದರು.

ಕಳೆದ ಬಾರಿಯ ಚಾಂಪಿಯನ್ಸ್ ತಂಡವಾಗಿದ್ದ ಭಾರತ ಲೆಜೆಂಡ್ಸ್ ತಂಡವು, ಪಾಕಿಸ್ತಾನ ವಿರುದ್ಧದ ಸೆಮಿಫೈನಲ್ ಪಂದ್ಯದಿಂದ ಹಿಂದೆ ಸರಿದಿತ್ತು, ಹಾಗಾಗಿ ಪಾಕ್ ತಂಡವು ನೇರವಾಗಿ ಫೈನಲ್‌ಗೆ ಲಗ್ಗೆ ಇಟ್ಟಿತ್ತು.

## ದುಬೈನಲ್ಲಿ ಭಾರತ-ಪಾಕ್ ಏಷ್ಯಾಕಪ್ ಪಂದ್ಯ

**ದುಬೈ:** ಸೆಪ್ಟೆಂಬರ್ 14ರಂದು ಸಾಂಪ್ರದಾಯಿಕ ವೈರಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಿನ ಏಷ್ಯಾಕಪ್ ಪಂದ್ಯ ದುಬೈನಲ್ಲಿ ನಡೆಯಲಿದೆ ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ಖಚಿತಪಡಿಸಿದೆ. ಈ ಹಿಂದೆ ಪಂದ್ಯಾವಳಿಯ ವೇಳಾಪಟ್ಟಿಯನ್ನು ಮಾತ್ರ ಪ್ರಕಟಿಸಲಾಗಿತ್ತು., ಆದರೆ ಪಂದ್ಯಗಳ ತಾಣವನ್ನು ಅಂತಿಮಗೊಳಿಸಿರಲಿಲ್ಲ.

ಪಂದ್ಯಾವಳಿಯನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಆಯೋಜಿಸುತ್ತಿದ್ದು, ಬಿಸಿಸಿಐ ಆತಿಥ್ಯ ವಹಿಸಲಿದೆ. ಸೆಪ್ಟೆಂಬರ್ 9ರಿಂದ 28ರವರೆಗೆ ದುಬೈ ಮತ್ತು ಅಬುಧಾಬಿಯಲ್ಲಿ ಈ ಸಲದ ಏಷ್ಯಾ ಕಪ್ ನಡೆಯಲಿದೆ. ಫೈನಲ್ ಸಹಿತ ಒಟ್ಟು 19 ಪಂದ್ಯಗಳು ನಡೆಯಲಿದ್ದು, ಈ ಪೈಕಿ ದುಬೈ ಕ್ರೀಡಾಂಗಣ 11 ಪಂದ್ಯ ಹಾಗೂ ಅಬುಧಾಬಿ ಕ್ರೀಡಾಂಗಣ 8 ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ. ಈ ಟೂರ್ನಿಯು ಟಿ20 ಮಾದರಿಯಲ್ಲಿ ನಡೆಯಲಿದ್ದು, 8 ತಂಡಗಳು ಭಾಗವಹಿಸಲಿವೆ.

**ಎ-ಗುಂಪು:** ಭಾರತ, ಪಾಕಿಸ್ತಾನ, ಯು.ಎ.ಇ ಮತ್ತು ಒಮಾನ್.
**ಬಿ-ಗುಂಪು:** ಶ್ರೀಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ, ಮತ್ತು ಹಾಂಗ್‌ಕಾಂಗ್.

ಯುಎಇ ಸಮಯ ಸಂಜೆ 6 ಗಂಟೆಗೆ ಪ್ರಾರಂಭವಾಗುವ ಪಂದ್ಯಗಳು ಭಾರತದಲ್ಲಿ ಸಂಜೆ 7:30ಕ್ಕೆ ಆರಂಭವಾಗಲಿದೆ. 8 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಭಾರತದ ಲೀಗ್ ಪಂದ್ಯಗಳು ಸೆಪ್ಟೆಂಬರ್ 10 (ಯು.ಎ.ಇ ವಿರುದ್ಧ), ಸೆಪ್ಟೆಂಬರ್ 14 (ಪಾಕಿಸ್ತಾನ ವಿರುದ್ಧ) ಮತ್ತು ಸೆಪ್ಟೆಂಬರ್ 19ರಂದು (ಒಮಾನ್ ವಿರುದ್ಧ) ನಡೆಯಲಿವೆ. ಭಾರತ ಮತ್ತು ಪಾಕಿಸ್ತಾನ ತಮ್ಮ ಗುಂಪಿನಲ್ಲಿ ಅಗ್ರ ಎರಡು ತಂಡಗಳಾಗಿ ಸ್ಥಾನ ಪಡೆದರೆ, ಸೆಪ್ಟೆಂಬರ್ 21ರಂದು ಸೂಪರ್-4 ಹಂತದಲ್ಲಿ ಮತ್ತೆ ಮುಖಾಮುಖಿಯಾಗಬೇಕಿದೆ.

## ವಿಚ್ಛೇದನ: ಹಿಂದೆ ಸರಿದ ಸೈನಾ ನೆಹ್ವಾಲ್ ದಂಪತಿ

**ಮುಂಬೈ:** ಇತ್ತೀಚೆಗಷ್ಟೇ ಪರಸ್ಪರ ಬೇರ್ಪಡುವ ನಿರ್ಧಾರ ಪ್ರಕಟಿಸಿದ್ದ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಮತ್ತು ಪರುಪಳ್ಳಿ ಕಶ್ಯಪ್ ದಂಪತಿ ಈಗ ಬೇರ್ಪಡುವ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ. ತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಹೊಸ ಪೋಸ್ಟ್‌ವೊಂದನ್ನು ಹಂಚಿಕೊಳ್ಳುವ ಮೂಲಕ ಮತ್ತೆ ಒಂದಾಗುತ್ತೇವೆಂದು ಘೋಷಿಸಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದು, ಇಬ್ಬರೂ ಒಂದಾಗುವ ವಿಷಯವನ್ನು ದೃಢಪಡಿಸಿದ್ದಾರೆ. ಇಬ್ಬರ ಫೋಟೋ ಜೊತೆಗೆ 'ಕೆಲವೊಮ್ಮೆ ದೂರವಾಗಿರುವುದು ಹತ್ತಿರವಾಗಿರುವ ಮೌಲ್ಯವನ್ನು ಕಲಿಸುತ್ತದೆ, ನಾವು ಮತ್ತೆ ಒಂದಾಗಲು ತೀರ್ಮಾನಿಸಿದ್ದೇವೆ' ಎಂದು ಕ್ಯಾಪ್ಷನ್ ಬರೆದುಕೊಂಡಿದ್ದಾರೆ.

35 ವರ್ಷ ವಯಸ್ಸಿನ ಸೈನಾ ನೆಹ್ವಾಲ್ ಅವರು, 2018ರಲ್ಲಿ ಬ್ಯಾಡ್ಮಿಂಟನ್ ಆಟಗಾರನಾಗಿದ್ದ ಕಶ್ಯಪ್ ಅವರನ್ನು ವಿವಾಹವಾಗಿದ್ದರು. ಕಳೆದ ಜುಲೈ 14ರಂದು ಈ ಜೋಡಿ 7 ವರ್ಷಗಳ ದಾಂಪತ್ಯಕ್ಕೆ ಕೊನೆಗೊಳಿಸುವ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ಹಂಚಿಕೊಂಡಿದ್ದರು.

ಸೈನಾ ನೆಹ್ವಾಲ್ ಒಲಿಂಪಿಕ್ಸ್ ಕಂಚಿನ ಪದಕ ಮತ್ತು ವಿಶ್ವದ ನಂ. 1 ಶ್ರೇಯಾಂಕ ಪಡೆದಿದ್ದರೆ, ಪರುಪಳ್ಳಿ ಕಶ್ಯಪ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದಿದ್ದರು. ಒಂದು ದಶಕಕ್ಕೂ ಹೆಚ್ಚು ಕಾಲ ಇಬ್ಬರೂ ಆಪ್ತರಾಗಿದ್ದರು. ಕ್ರೀಡೆಯಿಂದ ನಿವೃತ್ತರಾದ ನಂತರ ಕಶ್ಯಪ್ ಈಗ ತರಬೇತಿ ನೀಡುತ್ತಿದ್ದರೆ ಸೈನಾ ನೆಹ್ವಾಲ್ ಇನ್ನೂ ನಿವೃತ್ತಿ ಹೇಳಿಲ್ಲ. 2019ರ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ನೆಹ್ವಾಲ್, ಪಿ.ವಿ ಸಿಂಧು ಅವರನ್ನು ಸೋಲಿಸಿದಾಗ ಮೈದಾನದಲ್ಲಿ ಕಶ್ಯಪ್ ಅವರು ಮಾರ್ಗದರ್ಶನ ನೀಡಿದ್ದರು.

## ವಿಟಾಕೀಸ್

### ಆ್ಯಕ್ಷನ್ ಬೆರೆತ ತ್ರಿಕಾರಂ

ಚಂದನವನದಲ್ಲಿ ಹೊಸ ಪ್ರತಿಭೆಗಳ ದಂಡೇ ಇದೆ. ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ತ್ರಿಕಾರಂ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು ತೆರೆಗೂ ಸಿದ್ಧವಾಗಿದೆ. ಇದು ಸ್ಮಶಾನ ಅಲ್ಲ.. ಎಂಬ ಅಡಿಬರಹವೂ ಚಿತ್ರಕ್ಕಿದೆ. ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ದಿಲೀಪ್ ಕುಮಾರ್, ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ತ್ರಿಕಾರಂ ಕಾಲ್ಪನಿಕ ಕಥೆಯಾಗಿದ್ದು, ಆ್ಯಕ್ಷನ್ ಜಾನರ್‌ನಲ್ಲಿ ಮೂಡಿಬಂದಿದೆ. ಒಳ್ಳೆಯ ಕಥೆಯ ಚಿತ್ರವನ್ನು ಪ್ರೇಕ್ಷಕರು ಖಂಡಿತಾ ಮೆಚ್ಚುತ್ತಾರೆ. ನಮ್ಮ ಸಿನಿಮಾದಲ್ಲಿಯೂ ಎಲ್ಲರಿಗೂ ಇಷ್ಟವಾಗು ಅಂಶಗಳಿವೆ. ಹಾಗಾಗಿ ಸಿನಿಮಾದ ಬಗ್ಗೆ ಭರವಸೆಯಿದೆ. ಈ ಚಿತ್ರಕ್ಕಾಗಿ ಹೊಸದುರ್ಗದಲ್ಲಿ ಬೃಹತ್ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗಿದೆ ಎಂದು ನಿರ್ದೇಶಕ ದಿಲೀಪ್ ಕುಮಾರ್ ಹೇಳಿದರು.

ಹರ್ಷವರ್ಧನ್ ನಾಯಕನಾಗಿ ನಟಿಸಿದ್ದು, ನಿಶ್ವಿತಾ ಶೆಟ್ಟಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ನಾಗೇಂದ್ರ ಅರಸು, ಬಲರಾಜವಾಡಿ ಮಂಜುಪಾವಗಡ ಮುಂತಾದವರು ತಾರಾಗಣದಲ್ಲಿದ್ದಾರೆ. ಜಿ.ಗಣೇಶ್ ಮೂರ್ತಿ ಸದ್ಗುರು ಸಿನಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಜತೆಗೆ ಖಳನಾಯಕನ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ಭರ್ಜರಿ ಚೇತನ್, ಚೇತುಕೇಶವ, ಪ್ರಮೋದ್ ಮರವಂತೆ ಸಾಹಿತ್ಯದ ಗೀತೆಗಳಿಗೆ ವಿವೇಕ್ ಚಕ್ರವರ್ತಿ ಸಂಗೀತ ಸಂಯೋಜಿಸಿದ್ದಾರೆ.

ಯಾಸಿನ್ ಹೊನ್ನಾಳಿ ಛಾಯಾಗ್ರಹಣ, ಸತೀಶ್ ಚಂದ್ರಯ್ಯ ಸಂಕಲನ, ಚಂದ್ರುಬಂಡೆ ಸಾಹಸ ನಿರ್ದೇಶನ, ಈ ಚಿತ್ರಕ್ಕಿದೆ. ಚಿತ್ರದುರ್ಗ ಚಿಕ್ಕಮಗಳೂರು, ಮಾರಿಕಣಿವೆ, ಸಾಣೆಹಳ್ಳಿ, ದಾವಣಗೆರೆ, ಸಿರಾ ಮತ್ತು ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನಲ್ಲಿದೆ.

### ಕೂಲಿಗೆ ಸೆನ್ಸಾರ್ ಶಾಕ್

ರಜನೀಕಾಂತ್ ಅಭಿಯದ ಬಹುನಿರೀಕ್ಷಿತ ಕೂಲಿ ಆಗಸ್ಟ್ 14ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಬರೋಬ್ಬರಿ ಮುನ್ನೂರು ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಚಿತ್ರ ಸಾವಿರ ಕೋಟಿ ರು.ಗಳಿಸಲಿದೆ ಎಂದು ರಿಲೀಸ್‌ಗೂ ಮೊದಲೇ ಅಂದಾಜಿಸಲಾಗಿತ್ತು. ಹೀಗಿರುವಾಗಲೇ ಸೆನ್ಸಾರ್ ಮಂಡಳಿ ಕೂಲಿಗೆ ಶಾಕ್ ನೀಡಿದೆ. ಸಿನಿಮಾ ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಎ ಪ್ರಮಾಣಪತ್ರ ನೀಡಿದೆ. ಇದರಿಂದ ಕೂಲಿ ಚಿತ್ರವನ್ನು ಥಿಯೇಟರ್‌ನಲ್ಲಿ ಮನೆಮಂದಿಯೆಲ್ಲಾ ಕುಳಿತು ನೋಡುವುದು ಕಷ್ಟವಾಗಲಿದೆ. ಲೋಕೇಶ್ ಕನಕರಾಜ್ ನಿರ್ದೇಶನದ ಕೂಲಿ ತಾರಾಗಳಗದ ಮೂಲಕವೇ ಸಖತ್ ಸದ್ದು ಮಾಡಿತ್ತು. ರಜನಿಕಾಂತ್, ಉಪೇಂದ್ರ, ನಾಗಾರ್ಜುನ, ಅಮೀರ್ ಖಾನ್, ಶ್ರುತಿ ಹಾಸನ್ ಹೀಗೆ ದಿಗ್ಗಜರ ದಂಡೇ ಸಿನಿಮಾದಲ್ಲಿದೆ. ಅನಿರುದ್ಧ್ ಸಂಗೀತ ನಿರ್ದೇಶನದ ಈ ಸಿನಿಮಾ ಆರಂಭದಿಂದಲೂ ಸದ್ದು ಮಾಡುತ್ತಿದೆ. ಹಾಗಂತ ರಜನಿಕಾಂತ್ ಅಭಿನಯದ ಸಿನಿಮಾಕ್ಕೆ ಎ ಪ್ರಮಾಣಪತ್ರ ಸಿಕ್ಕಿರುವುದು ಇದೇ ಮೊದಲಲ್ಲ, ಈ ಹಿಂದೆ ತೆರೆಗೆ ಬಂದ ಕಾಲಿ, ಗಾಯತ್ರಿ, ಪುತ್ತುಕವಿತ್ತೈ, ನೆಟ್ರಿಕನ್.. ಹೀಗೆ ಹಲವು ಸಿನಿಮಾಗಳಿಗೆ ಸೆನ್ಸಾರ್ ಬೋರ್ಡ್ ಎ ಪ್ರಮಾಣ ಪತ್ರ ನೀಡಿತ್ತು.



#### ಕಥೆ ಕೇಳದೆ ಒಪ್ಪಿದ ಅಮೀರ್

ಕೂಲಿಯಲ್ಲಿ ಅಮೀರ್ ಖಾನ್ ನಟಿಸಿದ್ದಾರೆ ಅನ್ನುವುದೇ ವಿಶೇಷ. ರಜನಿಕಾಂತ್ ಅವರಿಗಾಗಿ ಅಮೀರ್ ಖಾನ್ ಕಥೆ ಕೇಳದೆ ನಟಿಸಲು ಸಮ್ಮತಿಸಿದರಂತೆ. ಬಾಲಿವುಡ್‌ನಲ್ಲಿ ಮಿಸ್ಟರ್ ಪರ್ಫೆಕ್ಟ್ ಎಂದೇ ಖ್ಯಾತಿ ಗಳಿಸಿರುವ ಅಮೀರ್ ಖಾನ್ ಸ್ಕ್ರಿಪ್ಟ್‌ಗಾಗಿಯೇ ಸಾಕಷ್ಟು ಸಮಯ ಮೀಸಲಿಡುತ್ತಾರೆ. ಆದರೆ ಇದೇ ಮೊದಲ ಬಾರಿಗೆ ಕಥೆ ಕೇಳದೆ ನಟಿಸಿದ್ದಾರೆ. ಮಾತ್ರವಲ್ಲ ಯಾವ ಸಿನಿಮಾದಲ್ಲಿಯೂ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳದ ಅಮೀರ್ ಇದೇ ಮೊದಲ ಬಾರಿಗೆ ಅತಿಥಿ ಪಾತ್ರದಲ್ಲಿ ಬಣ್ಣಹಚ್ಚಿರುವುದು ವಿಶೇಷ. ಈ ಚಿತ್ರದಲ್ಲಿ ಅಮೀರ್ ಖಾನ್ ಗೆಟಪ್ ಕೂಡ ವಿಭಿನ್ನವಾಗಿದೆಯಂತೆ.

### ಸದ್ದು ಮಾಡಲು ಬರುತ್ತಿದೆ ಕಟಕ 2

ಎಂಟು ವರ್ಷಗಳ ಹಿಂದೆ ಕಟಕ ಚಿತ್ರ ತೆರೆಗೆ ಬಂದು ಸಖತ್ ಸದ್ದು ಮಾಡಿತ್ತು. ಹಾರರ್ ಸ್ಟೋರಿಯ ಕಟಕ ಭರ್ಜರಿ ಯಶಸ್ಸು ಪಡೆದಿತ್ತು. ಒಂದು ಮನೆಯಲ್ಲಿ ನಡೆಯೋ ಹಾರರ್ ಜತೆಗೆ ಥ್ರಿಲ್ಲಿಂಗ್ ಕಥಾನಕ ಪ್ರೇಕ್ಷಕರ ಮನಸೂರೆಗೊಂಡಿತ್ತು. ಖ್ಯಾತ ಸಂಗೀತ ನಿರ್ದೇಶಕ ರವಿಬಸ್ರೂರು ಈ ಚಿತ್ರವನ್ನು ನಿರ್ದೇಶನ ಮಾಡಿದ್ದರು, ಸಿನಿಮಾಕ್ಕೆ ಸಂಗೀತವನ್ನು ಸಂಯೋಜಿಸಿದ್ದರು. ಚಿತ್ರದ ಹಿನ್ನೆಲೆ ಸಂಗೀತ ಸಿನಿಮಾಗೆ ಶಕ್ತಿ ತುಂಬಿತ್ತು. ಕಟಕ ಯಶಸ್ಸಿನ ಖುಷಿಯಲ್ಲಿಯೇ ಕಟಕ 2 ಕೂಡ ಸೆಟ್ಟೇರಿದ್ದು, ಸದ್ದಿಲ್ಲದೆ ಚಿತ್ರೀಕರಣವೂ ಆರಂಭವಾಗಿದೆ. ಸದ್ಯ ಕಟಕ 2 ಚಿತ್ರದ ಟೈಟಲ್ ಟ್ರ್ಯಾಕ್ ರಿಲೀಸ್ ಆಗಿದೆ. ಇಂಗ್ಲೀಷ್‌ನಲ್ಲಿ ಮೂಡಿಬಂದಿರುವ ಟೈಟಲ್ ಟ್ರ್ಯಾಕ್ ಸಿನಿಮಾದ ರೋಚಕತೆ ಹೆಚ್ಚಿಸಿದೆ. ಶಿವಕುಮಾರ್ ಜಯರಾಮ್ ಸಾಹಿತ್ಯದ ಈ ಹಾಡಿಗೆ ರವಿಬಸ್ರೂರು ಸಂಗೀತ ಸಂಯೋಜಿಸಿದ್ದಾರೆ. ಸಂತೋಷ್ ವೆಂಕಿ, ಐರಾ, ರೋಹಿತ್ ಸಿದ್ದಪ್ಪ ಈ ಹಾಡಿಗೆ ದನಿಯಾಗಿದ್ದಾರೆ. ಕಟಕ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದ್ದು, ಸದ್ಯ ಈಗ ಬಿಡುಗಡೆಯಾಗಿರುವ ಹಾಡನ್ನು ಗಮನಿಸಿದರೆ ಮುಂದಿನ ಭಾಗ ಮತ್ತಷ್ಟು ರೋಚಕವಾಗಿ, ಅದ್ದೂರಿಯಾಗಿ ಮೂಡಿಬರಲಿದೆ ಎಂಬುದು ಸ್ಪಷ್ಟವಾಗುತ್ತದೆ. ಕಟಕದ ಚಿತ್ರದಲ್ಲಿ ನಟಿಸಿದ್ದ ಅಶೋಕ್ ರಾಜ್, ಸ್ಪಂದನಾ ಪ್ರಸಾದ್ ಸೇರಿದಂತೆ ಹೊಸಬರ ತಮಡವೂ ಕೂಡ ಈ ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಇತ್ತೀಚೆಗೆ ವೀರಚಂದ್ರಹಾಸ ಸಿನಿಮಾದ ಮೂಲಕ ಮೋಡಿ ಮಾಡಿದ್ದ ರವಿ ಬಸ್ರೂರು, ಶೀಘ್ರದಲ್ಲಿಯೇ ಕಟಕ 2 ಮೂಲಕ ಮತ್ತೊಂದು ಸೂಪರ್ ಹಿಟ್ ಸಿನಿಮಾ ನೀಡುವ ನಿರೀಕ್ಷೆಯಲ್ಲಿದ್ದಾರೆ.

### ಹೊಸ ದಾಖಲೆ ಬರೆದ ಸು ಫ್ರಮ್ ಸೋ

ಎರಡನೇ ವಾರವೂ ಸು ಫ್ರಮ್ ಸೋ ಹವಾ ಜೋರಾಗಿದ್ದು, ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆದು ಮುನ್ನುಗ್ಗುತ್ತಿದೆ. ಹೊಸ ಚಿತ್ರಗಳು ಬಿಡುಗಡೆಯ ನಡುವೆಯೂ ಹೌಸ್ ಫುಲ್ ಪ್ರದರ್ಶನ ಕಾಣುತ್ತಿರುವ ಸು ಫ್ರಮ್ ಸೋ ಚಿತ್ರದ ಟಿಕೆಟ್‌ಗಳು, ಗಂಟೆಗೆ ಹನ್ನೊಂದು ಸಾವಿರದಂತೆ ಮಾರಾಟವಾಗುತ್ತಿವೆ. ಈ ಹಿಂದೆ ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಚಿತ್ರದ ಟಿಕೆಟ್‌ಗಳು ಗಂಟಗೆ ಒಂಬತ್ತು ಸಾವಿರದಂತೆ ಮಾರಾಟವಾಗಿದ್ದವು. ಈಗ ಸು ಫ್ರಮ್ ಸೋ ಆ ದಾಖಲೆಯನ್ನು ಮುರಿದೆ. ಒಂದೇ ದಿನದಲ್ಲಿ ಒಂದೂವರೆ ಲಕ್ಷ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿವೆ. ಆ ಮೂಲಕ ಎರಡನೇ ವಾರದಲ್ಲಿ ಈ ಚಿತ್ರ ಇಪ್ಪತ್ತು ಕೋಟಿಗೂ ಹೆಚ್ಚು ಗಳಿಸಿದೆ.



#### ಮಲೆಯಾಳಂನಲ್ಲೂ ಹವಾ

ಕನ್ನಡದ ಬಳಿಕ ಮಲೆಯಾಳಂಗೂ ಡಬ್ ಆಗಿ ಬಿಡುಗಡೆಯಾಗಿರುವ ಸು ಫ್ರಮ್ ಸೋ ಮಾಲಿವುಡ್ ಅಂಗಳದಲ್ಲಿಯೂ ಭರ್ಜರಿ ಯಶಸ್ಸು ಪಡೆಯುತ್ತಿದೆ. ಕೇರಳದ ಬಹುತೇಕ ಚಿತ್ರಮಂದಿಗಳಲ್ಲಿ ಹೌಸ್ ಫುಲ್ ಪ್ರದರ್ಶನ ಕಾಣುತ್ತಿದೆ. ಹಳ್ಳಿಗಾಡಿನಲ್ಲಿ ನಡೆಯುವ ಕಥೆ ಇದಾಗಿದ್ದು, ಕಾಮಿಡಿ ಮೂಲಕ ಕಮಾಲ್ ಮಾಡುತ್ತಿದೆ. ಹಾಗಾಗಿ ಈ ಸಿನಿಮಾ ಮಾಲಿವುಡ್ ಮಂದಿಗೂ ಹಿಡಿಸಿದೆ. ಸು ಫ್ರಮ್ ಸೋ ಮುಂದೆ ತೆಲುಗು ಹಾಗೂ ತಮಿಳಿಗೂ ಡಬ್ ಆಗಿ ಬಿಡುಗಡೆಯಾಗಲಿದ್ದು, ದಕ್ಷಿಣದಿಂದ ಉತ್ತರಕ್ಕೂ ಕಾಮಿಡಿ ಯಾತ್ರೆ ಸಾಗಲಿದೆ. ಈಗಾಗಲೇ ದೂರದ ಅಮೇರಿಕಾ, ಜರ್ಮನಿ, ಯುಎಇಯಲ್ಲಿಯೂ ಚಿತ್ರ ರಿಲೀಸ್ ಆಗಿದೆ.



**ಪ್ರೇಕ್ಷಕರ ಆಶೀರ್ವಾದಿಂದ ನಮ್ಮ ಸಿನಿಮಾ ದೊಡ್ಡ ಮಟ್ಟದ ಯಶಸ್ಸು ಗಳಿಸಿದೆ. ಕನ್ನಡದಲ್ಲಿ ನಿರ್ಮಾಣವಾಗಿದ್ದ ಸು ಫ್ರಮ್ ಸೋ ಈಗ ಬೇರೆ ಭಾಷೆಗಳಿಗೂ ಡಬ್ ಆಗಿ ರಿಲೀಸ್ ಆಗುತ್ತಿರುವುದು ಖುಷಿ ಕೊಟ್ಟಿದೆ. ಹಾಗಾಗಿ ಈ ಸಿನಿಮಾ ಗೆದ್ದ ಸಂಭ್ರಮದಲ್ಲಿದ್ದೇವೆ. ಮುಂದಿನ ಸಿನಿಮಾದ ಬಗ್ಗೆ ಇನ್ನೂ ಯೋಚಿಸಿಲ್ಲ.**
**-ಜೆಪಿ ತುಮಿನಾಡು** ನಿರ್ದೇಶಕ